ಜರ್ಮನಿಯ

ಗುಪ್ತಹೇರರು

' ಸಂಚಾರಿ '

ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ

ಅಮ್ಮೆಂಬಳ ಶಂಕರ ನಾರಾಯಣ

೨೦-೨-೫೦.

ಪಿ. ಪಿ. ೧೦೨

ಸಂಜೀವಿನಿ ಪ್ರಕಾಶನ

೩ ನೇ ವರುಷದ ೪ ನೇ ಗ್ರಂಥ

ಜರ್ಮನಿಯ ಗುಪ್ತಹೇರರು

ಮತ್ತು

ಕೆಂಪು ಕೂದಲ ಸಮಿತಿ

ಬರೆದವರು:

'ಸಂಚಾರಿ'

ಸಂಜೀವಿನಿ ಪ್ರಕಾಶನ

ಹುಬ್ಬಳ್ಳಿ

•

೧೯೫೦] [೧-೦-೦

ನನ್ನ ನುಡಿ

ಪ್ರತಿಯೊಂದು ಪುಸ್ತಕಕ್ಕೆ ಗ್ರಂಥಕಾರನೆಂಬ ವ್ಯಕ್ತಿಯು ತನ್ನ ನುಡಿ ಬರೆಯುವದು ಕ್ರಮಪ್ರಾಪ್ತವಾದುದು. ಆದರೆ ಈ ಚಿಕ್ಕ ಪುಸ್ತಕಕ್ಕೆ ನಾನು ನನ್ನ ನುಡಿ ಬರೆದರೆ ಮೂಗಿಗಿಂತ ಮೂಗುತಿ ಭಾರವಾಗುವದಲ್ಲ! ಎಂಬ ಹೆದರಿಕೆ ಬರುತ್ತದೆ. ಆದರೂ ಒಂದೆರಡು ಶಬ್ದ ಹೇಳಬೇಕಾಗುತ್ತದೆ.

ಈ ಪುಸ್ತಕವನ್ನು ಬರೆಯಲು ಪ್ರಾರಂಭಿಸಿದ್ದು ದ್ವಿತೀಯ ಮಹಾ ಯುದ್ಧವು ಪ್ರಾರಂಭವಾಗುವದಕ್ಕಿಂತ ಕೆಲವೇದಿನ ಮೊದಲು, ಅಥವಾ ಅದೇ ಕಾಲಕ್ಕೆಂದೇ ಹೇಳಬಹುದು. ಮಹಾಯುದ್ಧದಂಥ ಮಹಾಯುದ್ಧವೇ ಮುಗಿಯಿತು. ಈ ಗ್ರಂಥ ಮಾತ್ರ ನನ್ನಿಂದ ಮುಗಿಯುವ ಲಕ್ಷಣ ತೋರ ಲಿಲ್ಲ.

ಆದರೆ ನನ್ನ ಬಂಧುಗಳಾದ ಶ್ರೀ. ಕಲಮದಾನಿ ಗುರುರಾಯರ ಅಬ್ಬರದ ಒತ್ತಾಯಕ್ಕೆ ಬೇಸತ್ತು ಈ ಪುಸ್ತಕವನ್ನು ಹೇಗೋ ಮುಗಿಸಬೇ ಕಾಯಿತು. ಇತ್ತೀಚಿನ ನನ್ನ ಅನುಭವದಿಂದ ಹೇಳುವದಾದರೆ ಪುಸ್ತಕ ಬರೆ ಯುವದು ಪತ್ರಿಕಾ ವ್ಯವಸಾಯಕ್ಕಿಂತ ಕಠಿಣವಾದುದೆಂದು ಇದೀಗ ನನಗೆ ಹೊಳೆಯಲಾರಂಭಿಸಿದೆ.

ಈ ನನ್ನ ಅನುಭವವು ನನ್ನನ್ನು ಇನ್ನು ಮುಂದೆ ಪುಸ್ತಕಗಳನ್ನು ಬರೆ ಯುವ ಹುಚ್ಚು ಕಲ್ಪನೆಯಿಂದ ಪರಾವೃತ್ತಗೊಳಿಸುವದೋ ಅಥವಾ ಹೆಚ್ಚೆಚ್ಚು ಬರೆಯಲು ಹುರುಪು ಕೊಡುವದೋ ನೋಡಬೇಕಾಗಿದೆ.

ಅಂತೂ ಇಂಥ ಉಪದ್ವ್ಯಾಪದಲ್ಲಿ ಬೀಳಲು ಕಾರಣರಾದ ಶ್ರೀ. ಕಲಮ ದಾನಿ ಗುರುರಾಯರಿಗೆ ಅವರು ಈ ಪುಸ್ತಕವನ್ನು ತಮ್ಮ ಮಾಲಿಕೆಯಲ್ಲಿ ಸೇರ್ಪಡಿಸಿಕೊಂಡು ಕನ್ನಡ ಓದುಗರ ಮುಂದೆ ನನ್ನನ್ನು ನಿಲ್ಲಿಸಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸದಿರಲಾರೆ.

೨೬—೧—೫೦

ಶಂ. ಬಾ. ಮನಗೂಳಿ.

ಸಂಪಾದಕರ ಮಾತು

ಸಂಜೀವಿನಿ ಪ್ರಕಾಶನದ ಈ ವರುಷದ ಅಂದರೆ ೩ನೆಯ ವರುಷದ ಕೊನೆಯ ಗ್ರಂಥವೆಂದು '**ಜರ್ಮನಿಯ ಗುಪ್ತಹೇರರು**' ಎಂಬ ಪುಸ್ತಕವನ್ನು ಓದುಗರಿಗೆ ಕೊಡಲು ನಮಗೆ ಬಹಳ ಸಂತೋಷವಾಗುತ್ತದೆ.

'ಜರ್ಮನಿಯ ಗುಪ್ತಹೇರರು' ಕಟ್ಟು ಕತೆಯೂ ಅಲ್ಲ, ಕಾದಂಬರಿಯೂ ಅಲ್ಲ. ಹೋದ ಜಾಗತಿಕ ಯುದ್ಧದಲ್ಲಿ ನಿಜವಾಗಿಯೂ ನಡೆದ ಒಂದು ಪ್ರಸಂಗದ ಚಿತ್ರ. ಆ ಯುದ್ಧದಲ್ಲಿ ಜರ್ಮನಿಯ ಅತಿ ದೊಡ್ಡ ದೊಡ್ಡ ವ್ಯಕ್ತಿಗಳೆಂದೆನಿಸಿಕೊಳ್ಳುವವರ ಪರಿಚಯ ನಮ್ಮ ಮಾಲೆಯಲ್ಲಿಯೇ ಇದಕ್ಕೊಂದು ವಿಶಿಷ್ಟವಾದ ಸ್ಥಾನವಿದೆ. ಸಂಜೀವಿನಿ ಪ್ರಕಾಶನ ಹೊರಡಿಸುವಾಗ 'ಕೇವಲ ಲಲಿತ ಸಾಹಿತ್ಯಕಷ್ಟೇ ಸ್ಥಾನವಿರದೇ ಸಾಹಿತ್ಯದ ವಿವಿಧ ಅಂಗಗಳ ಕೃತಿಗಳನ್ನು ಸೇರಿಸಲು ಪ್ರಯತ್ನಿಸುತ್ತೇವೆ' ಎಂದು ಸಾರಿ 'ನಸುಕು' ಎಂಬ ಕವಿತಾ ಸಂಗ್ರಹವನ್ನು ಧೈರ್ಯ ಮಾಡಿ ಪ್ರಕಟಿಸಿದೆವು. ಆದರೆ ಏಕೋ ಕವಿತೆಗೆ ಕನ್ನಡದ ಓದುಗರು ಅಷ್ಟು ಒಲಿದಿಲ್ಲವೋ ಏನೋ, 'ನಸುಕು' ಮಾತ್ರ ಇನ್ನೂ ಹಾಗೆಯೇ ಉಳಿದು ಬಿಟ್ಟಿವೆ. ಈ ಮಾತನ್ನು ಕವಿತಾಪ್ರಿಯರೂ ಲಾಯಬ್ರರಿ ಮೊದಲಾದ ಸಂಘ ಸಂಸ್ಥೆಗಳೂ ನೆನೆಸಿ 'ನಸುಕು' ಕೊಂಡು ಆ ಒಜ್ಜೆಯನ್ನು ನಮ್ಮ ಹೆಗಲ ಮೇಲಿಂದ ಇಳಿಸಬೇಕೆಂದು ಪ್ರಾರ್ಥಿಸುವೆವು.

ಮೂರನೆಯ ವರುಷ, ಲಲಿತ ಸಾಹಿತ್ಯಕ್ಕೆ ಅಷ್ಟೊಂದು ಸೇರದ ಈ ಗ್ರಂಥವನ್ನು ಪ್ರಕಟಿಸಲು ಮತ್ತೊಮ್ಮೆ ಧೈರ್ಯ ಮಾಡಿದ್ದೇವೆ. ನಮ್ಮ ಧ್ಯೇಯ ಸಾಧನೆಗೆ ಹೆಣಗಿದ್ದೇವೆ.

ಈ ಗ್ರಂಥವನ್ನು ಬರೆದವರು 'ಸಂಚಾರಿ' ಎಂಬ ಹೆಸರಿನಿಂದ ಅಖಿಲ ಕರ್ನಾಟಕದಲ್ಲಿ ಹೆಸರುಗೊಂಡ ಶ್ರೀ. ಶಂ. ಬಾ. ಮನಗೂಳಿಯವರು. 'ಇವರು ಅನುಭವಿಕರು, ನಿರೀಕ್ಷಕರು ಹವೆಯಂತೆ ಬೇಕಾದಲ್ಲಿ ಸುಳಿದಾಡಬಲ್ಲರು. ಲೆಕ್ಕಣಿಕೆಯ ಲಂಪಟರು, ನಿರ್ಭಯರೂ ಪ್ರಾಮಾಣಿಕರೂ,

ಮಾರ್ಮಿಕ ಚಿಕಿತ್ಸಕರೂ ಇದ್ದಾರೆಂದು ಶ್ರೀರಂಗರು ಶಂ. ಬಾ. ಮನಗೂಳಿಯವರು ಬರೆದ 'ಹೀಗಿದೆ ಜಗತ್ತು' ಎಂಬ ಗ್ರಂಥದ ಪರಿಚಯ ಹೇಳುವಾಗ ಹೇಳಿದ್ದಾರೆಂದ ಬಳಿಕ ನಾವು ಇವರ ಬಗ್ಗೆ ಹೆಚ್ಚು ಹೇಳುವದನವಶ್ಯಕ.

ಆದರೂ ಗ್ರಂಥಕಾರರಾದ ಶಂ. ಬಾ. ಮನಗೂಳಿಯವರ ಬಗ್ಗೆ ನನಗೆ ತಿಳಿದ ಕೆಲವು ಮಾತುಗಳನ್ನು ಇಲ್ಲಿ ಹೇಳುವದು ನನ್ನ ಕರ್ತವ್ಯ.

ಇವರು ಬೆಳಗಾವಿ ಜಿಲ್ಹೆಯ ಗೋಕಾಕ ತಾಲೂಕದ ಯಾದವಾಡ ಎಂಬ ಹಳ್ಳಿಯವರು. ಹಳ್ಳಿಯಲ್ಲಿಯ ಅವ್ಯವಸ್ಥೆಯ ಮೂಲಕ ಹುಬ್ಬಳ್ಳಿಗೆ ಬಂದು ಇವರ ತಂದೆಯವರು ನೆಲಸಿದರು. ಶ್ರೀ ಮನಗೂಳಿಯವರ ಹಾಯ ಸ್ಕೂಲ ವಿದ್ಯಾರ್ಥಿಜೀವನ ಇನ್ನೂ ಮುಗಿಮುಗಿಯುವಾಗಲೇ ಇವರು ಜೀವನೋಪಾಯಕ್ಕಾಗಿ ಹೋರಾಡುವ ಪ್ರಸಂಗ ಬಂದೊದಗಿತು. ನಾಗನೂರ ದೊಡ್ಡನಗೌಡರ ಆಸ್ತಿ ಮೇಲ್ವಿಚಾರಕರಾಗಿ ಕೆಲ ದಿನ ದುಡಿದರು. ಆ ಮೇಲೆ ಇಲ್ಲಿಯ ಅರ್ಬನ್ ಕೋ-ಆಪರೇಟಿವ್ಹ ಬ್ಯಾಂಕಿನಲ್ಲಿ ಕಾರಕೂನಿಗಾಗಿ ನಿಂತರು. ಅಲ್ಲಿಂದ ಹೆಣ್ಣುಮಕ್ಕಳ ಹೆರಿಗೆಯ ಆಸ್ಪತ್ರೆಯಲ್ಲಿ ಮತ್ತು ಕೋ-ಆಪರೇಟಿವ್ಹ ಆಸ್ಪತ್ರೆಯಲ್ಲಿ ಕೆಲದಿನ ಕೆಲಸ ಮಾಡಿದರು. ಅಂಬಾ ಪ್ರಸಾದಿಕ ಎಂದು ನಾಟಕ ಕಂಪನಿಯ ಮ್ಯಾನೇಜರರಾಗಿ ಕೆಲವರುಷ ದುಡಿದರು. ಹೀಗೆ ಜೀವನದ ವಿವಿಧ ರಂಗದಲ್ಲಿ ನಟರಾಗಿ, ಯಶಸ್ವಿಯಾದ ನಟರಾಗಿ, ಆ ರಂಗಗಳಲ್ಲಿಯ ಬೇವು–ಬೆಲ್ಲಗಳನ್ನು ಸವಿದು, ಆಗ "ಹುಬಳಿ ಗ್ಯಾಜಿಟ್" ಎಂದು ಹೆಸರುಗೊಂಡ ವಾರ ಪತ್ರಿಕೆಯ ಸಂಪಾದಕ ಮಂಡಲದಲ್ಲಿ ಬಂದು ಸೇರಿದರು. ೧೯೪೦ ರಿಂದ ೪೨ ಇಸ್ವಿಯವರೆಗೆ ಈ ಸಂಸ್ಥೆಯ ಎಲ್ಲ ಕೆಲಸಗಾರರು ರಾಜಾತಿಥ್ಯಕ್ಕೆ ಒಳಗಾದುದರಿಂದ ಹುಬಳಿ ಗ್ಯಾಜಿಟ್ ನಡೆಸುವ ಸಂಪೂರ್ಣ ಹೊಣೆ ಶಂ. ಬಾ. ಮನಗೂಳಿಯವರ ಮೇಲೆಯೇ ಬಿದ್ದಿತು. ಆಗ ತಮ್ಮ ಲೆಕ್ಕಣಿಕೆಯ ಸಾಮರ್ಥ್ಯವನ್ನು ಕನ್ನಡ ಜನಕ್ಕೆ ಅವರು ತೋರಿದರು. ತಮ್ಮ ಜೀವನದಲ್ಲಿ ಕಂಡಂಥ ಅದ್ಭುತ ಕಹಿ-ಸಿಹಿ ಅನುಭವಗಳನ್ನು ತಮ್ಮ ಅಪೂರ್ವವಾದ ಜಾಣತನದ ಕುಲುಮೆಯಲ್ಲಿ ಕಾಯಿಸಿ ಸಾಹಿತ್ಯದ ರಸದೂಟವನ್ನು ತೇಜಪ್ಪ ಹಾಕಿದ ಬಂಗಾರದಂತೆ ತಯಾರಿಸಿ ಕನ್ನಡಿಗರಿಗೆ ಕೊಟ್ಟರು. ಅದರ ಸವಿಯೂಟವನ್ನು ಇಂದಿಗೂ ನಾವು ನೆನೆಸಿ ಅವರಿಗೆ ಸಾಹಿತ್ಯದಲ್ಲಿ ಕೃತಿಗಳನ್ನು ಬರೆಯಲು ಒತ್ತಾಯ ಪಡಿಸುತ್ತೇವೆ.

ಹಸುಗೂಸಿನಂಥ ಇವರ ಹೃದಯವು ಹೆರವರ ದುಃಖವನ್ನು ಕಂಡು ಮರಮರನೇ ಮರುಗುವದು. ಜೀವನದಲ್ಲಿ ಅನುಭವಿಸಿದ ಕಠೋರ ಯಾತನೆಯ ಚಿತ್ರವನ್ನು ಬರೆಯಲು ಸಾಮರ್ಥ್ಯವುಳ್ಳದ್ದೂ ಇವರ ಹೃದಯವಿದೆ. ಮನಸ್ಸು ಮಾಡಿದರೆ ಶಂ. ಬಾ. ಮನಗೂಳಿಯವರು ಕವಿತೆ ಬರೆಯಬಲ್ಲರೆಂಬ ಭರವಸೆ ನನಗಿದೆ. ತಬಲಾ, ಪಿಯಾನೋ ಬಾರಿಸಬಲ್ಲರು. ನಾಟಕದ ನಟರಹುದು. ಶಾಸ್ತ್ರೋಕ್ತ ಗಾಯನಜ್ಞಾನಿಗಳು, ಸರಳ ಸ್ವಭಾವದವರು, ನಿಷ್ಪಕ್ಷಪಾತಿಗಳು, ನಿಷ್ಠುರರು. ಅಂದರೆ ತಮ್ಮ ಮನಕ್ಕೆ ಹೊಳೆದುದನ್ನುಹೆರವರಿಗೆ ನೋವಾಗುವದೆಂಬುದನ್ನು ಸಹ ಲೆಕ್ಕಿಸದೇ ಅಡಿಬಿಡುವ ಧೈರ್ಯಶಾಲಿಗಳು. ಆದರೆ ಜ್ಯೋತಿಷ್ಯದಲ್ಲಿ ಅಂಧ ನಂಬಿಗೆಯುಳ್ಳವರು. ಇಂಥವರು ಬರೆದ ಕೃತಿ ಇದು. '**ಜರ್ಮನಿಯ ಗುಪ್ತಹೇರರು**.' ಇವರಿಂದ ಇನ್ನು ಮುಂದೆ ಅತ್ಯುತ್ತಮವಾದ ಗ್ರಂಥಗಳು ಹೊರಡುವವೆಂದು ನಾವು ಆಶೆ ಮಾಡಬೇಕೆಂದರೆ ಅದೇಕೋ ಅಸಾಧ್ಯದ ಮಾತಾಗುವದೆಂದು ನಮಗನಿಸುವದು.

ಹಿಂದೊಮ್ಮೆ ಅರ್ಬನ್ ಕೋ-ಆಪರೇಟಿವ್ಹ ಬ್ಯಾಂಕದಲ್ಲಿ ಕಾರಕೂನಿಕೆ ಮಾಡಿದ ಶಂ. ಬಾ. ಮನಗೂಳಿಯವರು ಅಲ್ಲಿ ಕೆಲ ದಿನ ಚೇರಮನ್ನರಾಗಿ ಕೆಲಸ ಮಾಡಿ ಈಗ ಸಧ್ಯಕ್ಕೆ ಡಾಯರೆಕ್ಟರರಾಗಿದ್ದಾರೆ. ಹಿಂದೆ ಸಂಪಾದಕ ಮಂಡಲದಲ್ಲಿದ್ದವರು ಈಗ ಅದೇ ಸಂಸ್ಥೆಯ ಆದರ್ಶ ಮುದ್ರಣದ ಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ. ಇಂಥ ಹೊಣೆಗಾರಿಕೆಯ ಕೆಲಸಗಳಲ್ಲಿ ಪೂರ್ತಿಯಾಗಿ ಮುಳುಗಿದ ಶಂ. ಬಾ. ಮನಗೂಳಿಯವರಿಗೆ ಕನ್ನಡ ಸಾಹಿತ್ಯ ದೇವಿಯ ಸೇವೆ ಮಾಡಲು ವೇಳೆ ದೊರಕುವದು ಸಾಧ್ಯವಿಲ್ಲವೆಂಬ ಸಂಶಯ ನಮಗಿದೆ. ಆದರೂ ರಸಿಕರು ಅವರಿಂದ ತಯಾರಾದ ರಸದೂಟಕ್ಕೆ ಹಂಬಲಿಸುತ್ತಲಿದ್ದಾರೆ. ಯಾರು ಸೋಲುವರೋ ನೋಡಬೇಕು.

ಈವರೆಗೆ ನಮ್ಮ ಮಾಲೆಯ ಎಲ್ಲ ಪುಸ್ತಕಗಳನ್ನು ತಮಗೆ ಶಕ್ಯವಿದ್ದ ಮಟ್ಟಿಗೆ ಅಂದವಾಗಿ ಅಚ್ಚು ಹಾಕಿ ವೇಳೆಗೆ ಸರಿಯಾಗಿ ಕೊಟ್ಟ ಆದರ್ಶ ಮುದ್ರಣದವರಿಗೆ ನಮ್ಮ ವಂದನೆಗಳು. ಈ ಮೂರು ವರುಷವೂ ನಾವು ಬೇಡಿದ ಕೂಡಲೇ ಎಷ್ಟು ತಡ ಮಾಡಿದ ನಮ್ಮ ಎಲ್ಲ ಬರಹಗಾರರಿಗೂ ನಮ್ಮ ಅನಂತ ವಂದನೆಗಳು. ಪ್ರತಿವರುಷವೂ ಒಬ್ಬ ಹೆಣ್ಣುಮಗಳ ಗ್ರಂಥ

ವನ್ನು ನಮ್ಮ ಮಾಲೆಯಲ್ಲಿ ಸವಣಿಸಿ ಸ್ತ್ರೀ ಬರಹಗಾರರಿಗೆ ಪ್ರೋತ್ಸಾಹ ಕೊಡಬೇಕೆಂಬ ನಮ್ಮ ಆಶೆಯನ್ನು ಬಹುಮಟ್ಟಿಗೆ ಈಡೇರಿಸಿ ಕೊಟ್ಟಿದ್ದಕ್ಕಾಗಿ ಶ್ರೀ ಕು. ಸೌ. ರತ್ನಮ್ಮ (ದೇವಗಾನ) ನವರಿಗೂ ಈ ವರುಷದ ಮೂರನೆಯ ಪುಸ್ತಕವೆಂದು ಕೊಟ್ಟ **ಕುಮಾರಿ ಚಂದ್ರಿಕಾ** (ಸಂಗಾತಿ) ಇವರಿಗೂ ಈಗಾಗಲೇ ಹಸ್ತಪ್ರತಿಯನ್ನು ನಮ್ಮ ಕೈಯಲ್ಲಿತ್ತು (ನಾಲ್ಕನೆಯ ವರುಷದ ಮೊದಲನೆಯ ಗ್ರಂಥವೆಂದು ಹೊರಡಲು ಅನುವು ಮಾಡಿ) ಉಪಕಾರ ಮಾಡಿದ ಶ್ರೀ. ಕು.ಸೌ. ಸುಶೀಲಾ ಜೋಶಿ ಇವರಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ಇಡೀ ಆಧುನಿಕ ಕನ್ನಡ ಕಾದಂಬರಿ ಲೋಕದಲ್ಲಿಯೇ ಸ್ತ್ರೀಯರು ಬರೆದ ಮೊಟ್ಟಮೊದಲಿನದೆಂದು ಸ್ವತಂತ್ರ ಸಾಮಾಜಿಕ ಕಾದಂಬರಿ **'ಬೀಳದ ತೆರೆ'** ಯನ್ನು ಬರೆದು ಸುಶೀಲಾ ಜೋಶಿಯವರು ಕೊಟ್ಟಿದ್ದಾರೆ. ಅದನ್ನು ನಾವು ಓದುಗರಿಗೆ ಎಪ್ರಿಲ್ಲ ಮೊದಲನೆಯ ವಾರದಲ್ಲಿ ಕೊಡಲು ಹಾತೊರೆಯುತ್ತೇವೆ. ಇದರಂತೆ ಕನ್ನಡ ನಾಡಿನ ಮೂಲೆ ಮೂಲೆಯಿಂದಲೂ ನಾವು ಒಳ್ಳೇ ಕೃತಿಗಳನ್ನು ಅಪೇಕ್ಷಿಸುತ್ತೇವೆ. ಅದನ್ನು ಒದಗಿಸುವದು ಎಲ್ಲ ಸಾಹಿತಿಗಳನ್ನೇ ಕೂಡಿದೆ.

ಈ ಮೂರು ವರುಷಗಳಲ್ಲಿ **ಸಂಜೀವಿನಿ** ಪ್ರಕಾಶನದ ಓದುಗರು, ಚಂದಾದಾರರಾಗಿ ನಮ್ಮನ್ನು ಪ್ರೋತ್ಸಾಹಿದ್ದಾರೆ. ಮುಂದಿನ ವರುಷವೂ ಇದೇ ರೀತಿ ನಮ್ಮ ಸಾಹಿತ್ಯ ಸೇವೆಯಲ್ಲಿ ನೆರವು ನೀಡಬೇಕೆಂದು ಅವರನ್ನು ಪ್ರಾರ್ಥಿಸುತ್ತೇವೆ.

ಇತಿ ತಮ್ಮ ಸೇವಕ,

ಸಂಪಾದಕ: **ಸಂಜೀವಿನಿ ಪ್ರಕಾಶನ ಹುಬ್ಬಳ್ಳಿ.**

೧. ಹಿಮ್ಲರನಾರು?

ಮೊನ್ನೆ ನಡೆದುಹೋದ ಜಾಗತಿಕ ಯುದ್ಧದಲ್ಲಿ ಖಲನಾಯಕನೇನೊ ಹಿಟ್ಲರನಾಗಿದ್ದಾನೆ. ಆವನು ತೆರೆಯ ಮುಂಬದಿಗಿರುವದರಿಂದ ಅವನೇ ಎದ್ದು ಕಾಣುತ್ತಿದ್ದಾನೆ. ಆದರೆ ತೆರೆಮರೆಯಲ್ಲಿ ಹಿಟ್ಲರನ ಪ್ರತಿಯೊಂದು ಕಾರ್ಯಕ್ಕೂ, ತನ್ನ ಚಾತುರ್ಯ ಮತ್ತು ಸಾಮರ್ಥ್ಯದ ಬಲದಿಂದ ಸಹಾಯಕಾರಿಯಾದ ಒಂದು ಸಂಸ್ಥೆ ಇತ್ತು. ಒಂದು ವ್ಯಕ್ತಿ ಇತ್ತು. ಆ ಸಂಸ್ಥೆಯ ಹೆಸರು 'ಗೆಸ್ಟೆಪೋ,' ವ್ಯಕ್ತಿಯ ಹೆಸರು ಹಿಮ್ಲರ. ಆವನೇ ಈ 'ಗೆಸ್ಟೆಪೋ' ದಲದ ನಾಯಕ.

ತನ್ನ ಕಾರ್ಯ ಸಾಧಿಸುವಲ್ಲಿ ಉಚ್ಚ, ನೀಚ, ಮೊದಲಾದವುಗಳ ತಾರತಮ್ಯವಿಲ್ಲದೆ ಎಲ್ಲ ಬಗೆಯ ಮಾರ್ಗಗಳನ್ನವಲಂಬಿಸುವಲ್ಲಿ ಈತನು ಬಲ್ಲಿದನು. ಒಂದು ಹನಿ ಸಹ ರಕ್ತಸ್ರಾವವಿಲ್ಲದೆ ಒಂದೊಂದಾಗಿ ದೇಶಗಳನ್ನು ನುಂಗಿದವನು ಹಿಟ್ಲರನಿದ್ದರೂ ಹಾಗೆ ಮಾಡಿದ್ದು ಹಿಮ್ಲರನ ಸಹಾಯದಿಂದ.

ಇಡೀ ಪ್ರಪಂಚವನ್ನು ಆವರಿಸಿದ ಮೊನ್ನಿನ ಮಹಾಯುದ್ಧವು ಪ್ರಾರಂಭ ವಾಗುವ ಮೊದಲು ಗೆಸ್ಟೆಪೋದಲ್ಲಿ ಪ್ರಮುಖ ಅಧಿಕಾರದ ಸ್ಥಳಗಳ ಲ್ಲಿದ್ದು ಯುದ್ಧದ ಭೇರಿಯು ಮೊಳಗಿದೊಡನೆ ತಮ್ಮ ಅಧಿಕಾರಸ್ಥಾನ ಗಳಿಗೆ ಶರಣು ಹೊಡೆದು ಓಡಿ ಹೋದ ಜನರಲ್ಲಿ ಅನೇಕರು ಹಿಮ್ಲರನ ಕರ್ತೃತ್ವಶಕ್ತಿಯನ್ನು ವರ್ಣಿಸುವವರೂ ಇದ್ದಾರೆ. ಜರೆಯುವವರೂ

ಇದ್ದಾರೆ. ಅವರೆಲ್ಲರು ಪಡುತ್ತಿರುವ ಅಭಿಪ್ರಾಯಗಳನ್ನು ತಿಳಿದುಕೊಂಡರೆ ಹಿಮ್ಲರನ ವ್ಯಕ್ತಿತ್ವದ ವಿಷಯಗಳಲ್ಲಿಯ ಅನೇಕ ಸಂಗತಿಗಳು ಸ್ಪಷ್ಟ ವಾಗುವವು.

ಮಂದದೃಷ್ಟಿಯ ಆ ಕುಳ್ಳ ಹಿಮ್ಲರನಿಗೆ ಜರ್ಮನಿಯ ಗುಪ್ತ ಪೋಲೀಸ ವಿಭಾಗದ [ಇದೇ ಗೆಸ್ಟೆಪೊ ದಲ] ಸರ್ವಾಧಿಕಾರವನ್ನು ಕೊಡುವ ಮೊದಲು ಹಿಟ್ಲರನು ಅವನನ್ನು ಅನೇಕ ತರಹದ ಕಠಿಣ ಪರೀಕ್ಷೆಗೆ ಗುರಿ ಮಾಡಿ ಕೊನೆಗೆ ಈ ಉನ್ನತಾಧಿಕಾರವನ್ನು ಕೊಟ್ಟಿದ್ದನು. ಹಿಟ್ಲರನ ಜರ್ಮನಿಯಲ್ಲಿ ಹಿಮ್ಲರನೇ ಅತ್ಯಂತ ಶಕ್ತಿವಾನ್ ಪುರುಷನಾಗಿದ್ದ. ಗೋಬೆಲ್ಸ ಸ್ಟ್ರೇಚರ್ ಮತ್ತು ಹಿಟ್ಲರ ಇವರಷ್ಟೇ ಅವನು ಚತುರನಿದ್ದ. ಹಿಟ್ಲರನ ನಾತ್ಸೀವಾದದ ಜನ್ಮಸ್ಥಳವಾದ ಬ್ರೌನ್ ಹೌಸದಲ್ಲಿಯ ಒಂದು ಸಾಮಾನ್ಯ ಸ್ಥಾನದಿಂದ ಅತ್ಯಂತ ವರ್ಚಸ್ವೀ ಸ್ಥಳಕ್ಕೆ ಅವನು ಬಂದುದು ಕೇವಲ ಕರ್ತೃತ್ವಶಕ್ತಿಯಿಂದಲೇ. " ಹಿಮ್ಲರನು ಕಾಲಿಟ್ಟ ಮನೆಯಲ್ಲಿಯ ನಲ್ಲಿಗಳು ಕೂಡ ಹೆಪ್ಪುಗಟ್ಟುತ್ತವೆ " ಎಂದು ಆಸ್ಟ್ರಿಯದ ಸರ್ವಾಧಿಕಾರಿಯಾದ ಡಾ. ಸೆಸಿನ್ ಕಾರ್ಟನು ಮೇಲಿಂದ ಮೇಲೆ ಹೇಳುತ್ತಿದ್ದ. ಅಷ್ಟೊಂದು ದರ್ಪವಿತ್ತು ಹಿಮ್ಲರನದು!

ಇಂಗ್ಲಂಡದಲ್ಲಿ ' ಸ್ಕಾಟಲಂಡ್ ಯಾರ್ಡ್ ', ರಶಿಯಾದಲ್ಲಿ 'ಓಗ್ಪು' ಅಮೇರಿಕೆಯಲ್ಲಿ 'ಜಿ ೧' ಎಂಬ ಹೆಸರಿನ ಗುಪ್ತಪೋಲೀಸ ದಲಗಳುಂಟು. ಇವು ಆಯಾ ರಾಷ್ಟ್ರಗಳಲ್ಲಿ ಶಾಂತತೆ ಕಾಯುವ ಮತ್ತು ಪ್ರಜೆಗಳ ವಿತ್ತ ಜೀವಿತಗಳನ್ನು ರಕ್ಷಿಸುತ್ತಿರುವ ಕಾರ್ಯಮಾಡುತ್ತಿರುವವಲ್ಲದೆ ಅದರ ಜೊತೆಗೆ ಪ್ರಪಂಚದ ರಾಜಕಾರಣದಲ್ಲಿಯೂ ತಮ್ಮ ಚಟುವಟಿಕೆಗಳಿಂದ ಒಂದು ಮಹತ್ವದ ಸ್ಥಾನವನ್ನು ಸಂಪಾದಿಸಿವೆ. ಅದರಂತೆ ಜರ್ಮನಿಯಲ್ಲಿ ಗೆಸ್ಟೆಪೋ ದಲವು ಆ ಕೆಲಸ ಮಾಡುತ್ತಿತ್ತು.

ಜರ್ಮನಿಯು ಯಾವಾಗಲೂ ಗುಪ್ತಚಾರರ ಮತ್ತು ಗುಪ್ತಪೋಲೀಸ ಪಡೆಯ ಮುಖಾಂತರವೇ ಆಂತರಿಕ ಮತ್ತು ಬಾಹ್ಯ ರಾಜಕಾರಣದಲ್ಲಿ ತನ್ನ ಉದ್ದೇಶಕ್ಕೆ ಅನುಕೂಲ ಪರಿಸ್ಥಿತಿಯನ್ನು ನಿರ್ಮಿಸಿಕೊಳ್ಳುತ್ತಿತ್ತು

ಮೊನ್ನೆ ನಡೆದ ಮಹಾಯುದ್ಧದಲ್ಲಿ ಹಿಟ್ಲರನ ಸುಸಜ್ಜಿತ ಸೇನೆಗಿಂತ ಸುಸಂಘಟಿತ 'ಗೆಸ್ಟೆಪೋ' ದಲವೇ ಹೆಚ್ಚು ಕಾರ್ಯವನ್ನು ಮಾಡಿತು. ಈ 'ಗೆಸ್ಟೆಪೋ' ದಲವೆಂದರೆ ಹಿಟ್ಲರನ ಆಕಾಂಕ್ಷೆಯ ಪೂರ್ವಗಾಮಿ ದೂತನೆಂದೇ ಹೇಳಬಹುದು. ಯಾವುದೊಂದು ದೇಶವನ್ನು ನುಂಗ ಬೇಕೆಂದು ಹಿಟ್ಲರನು ಯೋಚಿಸಿದ್ದೇ ತಡ, ಈ 'ಗೆಸ್ಟೆಪೋ' ದಲವು ತನ್ನ ಅಗಾಧ ಯಂತ್ರವನ್ನು ಅಲ್ಲಿ ಪ್ರಾರಂಭಿಸುತ್ತಿತ್ತು.

ಹಿಟ್ಲರನು ಬೊಟ್ಟುಮಾಡಿ ತೋರಿಸುವದೇ ತಡ, ಈ ಅತ್ಯಂತ ಕಾರ್ಯ ಕ್ಷಮವಾದ ಗೆಸ್ಟೆಪೋದ ನಾಯಕನಾದ ಹಿಮ್ಲರನ ಈ ಪಡೆಯ ಚಟುವಟಿಕೆ ಗಾರಂಭವಾಗುತ್ತಿತ್ತು. ಯಾಂತ್ರಿಕ ತಜ್ಞರು, ಪತ್ರಿಕೋದ್ಯಮಿಗಳು, ಅರ್ಥಶಾಸ್ತ್ರ ಪಂಡಿತರು, ಔದ್ಯೋಗಿಕ ಮುಖಂಡರು, ನಟನರ್ತಕಿಯರು ಪ್ರವಾಸಿಗಳು, ರೋಗಿಗಳು, ಡಾಕ್ಟರರು, ವ್ಯಾಪಾರಸ್ಥರು ಮೊದಲಾದವರು ಆ ದೇಶದಲ್ಲಿ ತಮ್ಮ "ವ್ಯವಹಾರ" ನಡೆಸಲು ಮುಂದಾಗುತ್ತಿದ್ದರು. ಇದಾದ ಕೆಲವು ದಿನಗಳಲ್ಲಿಯೇ ಆ ದೇಶದಲ್ಲಿ "ಪಂಚಮದಲದ" ಚಟು ವಟಿಕೆಗಾರಂಭವಾಗುತ್ತಿತ್ತು. 'ಇಲ್ಲಿ ಎಲ್ಲವೂ ಸಿದ್ಧವಾಗಿರುವದೆ'ಂಬ ಸಂಜ್ಞೆ ದೊರೆತ ಕೂಡಲೆ ಹಿಟ್ಲರನ ಕರಾಳ ಹಸ್ತವು ಆ ದೇಶವನ್ನು ತನ್ನ ಹಿಡಿಕೆಯಲ್ಲಿ ತರಲು ಮುಂದರಿಯುತ್ತಿತ್ತು. ಈ ಮುಂಡಲದ ಚಟುವಟಿಕೆ ಗಳು ಪುಕ್ಕಟೆಯಾಗಿರುತ್ತಿದ್ದಿಲ್ಲ. ಜರ್ಮನಿಯಲ್ಲಿ ಸೈನ್ಯಕ್ಕಾಗಿ ವೆಚ್ಚವಾಗುತ್ತಿದ್ದ ಹಣದಷ್ಟೇ—ಅದೇಕೆ—ಅದಕ್ಕೂ ಹೆಚ್ಚು—ಈ 'ಗೆಸ್ಟೆಪೋ'ದಲಕ್ಕಾಗಿ ವೆಚ್ಚವಾಗುತ್ತಿತ್ತು. ಮೇಲೆ ಹೇಳಿದ ಎಲ್ಲ ವ್ಯವಹಾರದವರೂ ಈ ಹಣ ದೊಳಗಿಂದಲೇ ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದ್ದರು.

ಪಾದಾಕ್ರಾಂತ ಮಾಡಬೇಕಾದ ದೇಶದಲ್ಲಿಯ ವರ್ಚಸ್ವೀ ಜನರಾರು? ಅವರ ರೀತಿನೀತಿಗಳೇನು? ಅವರು ವ್ಯಸನಿಗಳೇ? ವ್ಯಸನಾತೀತರೇ? ಅವರಿಗೆ ಯಾವ ಯಾವ ಚಟಗಳಿವೆ? ಅವರ ಬೇಕು ಬೇಡಗಳೇನು? ಇವೆಲ್ಲ ವುಗಳನ್ನೂ ತಿಳಿದುಕೊಂಡು ಅವರವರಿಗೆ ಯೋಗ್ಯರಾದ ಈ "ಉದ್ಯೋಗಿ ಗಳು" ಆ ಜನರ ಸ್ನೇಹ ಸಂಪಾದಿಸಲು ಯತ್ನಿಸುತ್ತಿದ್ದರು. ಈ ಕಾರ್ಯ

ದಲ್ಲಿ "ಗೆಸ್ಟೆಪೋ" ದಲದಿಂದ ಪೋಷಿಸಲ್ಪಟ್ಟ ಚಾಣಾಕ್ಷರಾದ ಸ್ತ್ರೀಯರು ತಮ್ಮ ಬೆಡಗಿನ ಹಾವಭಾವಗಳಿಂದ ಅವರನ್ನು ಮುಗ್ಧರನ್ನಾಗಿ ಮಾಡಲು ಯಾವಾಗಲೂ ಸಿದ್ಧರೇ ಇಷ್ಟೇ ಅಲ್ಲದೆ, ಯಾವನೊಬ್ಬ ಆ ದೇಶದ ಪ್ರಮುಖ ಅಧಿಕಾರಿಯು ಸಾಲಗಾರನಾಗಲೀ, ಜೂಜುಗಾರನಾಗಲೀ ಅಥವಾ ಹಣದ ತೊಂದರೆಯಲ್ಲಿರುವನೆಂದಾಗಲೀ ತಿಳಿದ ಕೂಡಲೇ ಅವನ ಸ್ನೇಹ ಬೆಳೆಸಿ ಅವನಿಗೆ ಮಿತ್ರನಂತೆ ಹಣದ ಸಹಾಯ ಮಾಡುತ್ತಿದ್ದರು. ಕೇವಲ ಮಿತ್ರನಿಗೆ ಆಪತ್ತಿನಲ್ಲಿ ಸಹಾಯಮಾಡಬೇಕೆಂಬ ಉದ್ದೇಶದಿಂದ! ಮುಂದೆ ಆತನು ಇಂತಹ ಸ್ನೇಹಿತರನ್ನೇ ತನಗೆ ದೊರಕಿಸಿಕೊಟ್ಟದ್ದಕ್ಕಾಗಿ ಪರಮಾತ್ಮ ನಿಗೆ ಧನ್ಯವಾದಗಳನ್ನರ್ಪಿಸುತ್ತ ಈ ಜನರಿಗೆ ಇತರ ಅಧಿಕಾರೀ ವರ್ಗದ ಪರಿಚಯ ಮಾಡಿಕೊಡುತ್ತಿದ್ದನು. ಇಲ್ಲಿಂದಲೇ ಆ ದೇಶದ ಮೇಲೆ ಈ ದಲದ ಪರಿಣಾಮವು ಆಗಲು ಪ್ರಾರಂಭವಾಗುತ್ತಿತ್ತು.

ಇಷ್ಟೊಂದು ಬಲಾಢ್ಯವಾದ, ಇಷ್ಟೊಂದು ಕಾರ್ಯಕ್ಷಮ ಮತ್ತು ಸುಸಂಘಟಿತ 'ಗೆಸ್ಟೆಪೋ' ದಲದ ಮಹಾನಾಯಕನಾದ ಹಿಮ್ಲರನನ್ನು ಯಾರಾದರೂ ಕಂಡರೆ "ಇವನೇನೋ ' ಬೆಪ್ಪ ? ಇವನಿಂದೇನಾದೀತು? " ಎಂದು ತುಚ್ಛೀಕರಿಸುವ ಹಾಗಿತ್ತು ಆತನ ಮುಖಚರ್ಯೆ !

ಹಿಮ್ಲರನದು ಸಾದಾ ಜೀವನ. ಅವನಿಗೆ ಆಢ್ಯತೆ ಆಡಂಬರಗಳು ಬೇಡಾಗಿದ್ದವು. ಪ್ರತಿಷ್ಠೆ ಅವನಿಗೆ ಸೇರುತ್ತಿದ್ದಿಲ್ಲ. ಪ್ರಸಿದ್ಧಿಯಲ್ಲಿ ಆಶೆಯಿದ್ದಿಲ್ಲ. ಆದರೆ ತನ್ನ ಕಾರ್ಯದ ವಿರುದ್ಧವಾಗಿ ಬರುವ ಯಾರನ್ನೂ ಉಳಿಸುತ್ತಿದ್ದಿಲ್ಲ. ದೇಶದ್ರೋಹಿಯನ್ನು ಅವನು ಎಂದೂ ಕ್ಷಮಿಸುತ್ತಿದ್ದಿಲ್ಲ. ತನ್ನನ್ನು ಪಾಲಿಸಿ ಪೋಷಿಸಿದ, ತನ್ನ ತಂದೆಯ ಸ್ಥಾನದಲ್ಲಿದ್ದ ಸ್ಟ್ರೇಸ್ಸರ್‌ನು ದೇಶಹಿತದ ವಿರುದ್ಧ ಕೆಲಸ ನಡೆಸಿರುವನೆಂದು ತಿಳಿದ ಕೂಡಲೇ ಅವನ ಕೊಲೆ ಮಾಡಿಸುವಷ್ಟು ಕಠೋರಹೃದಯಿಯಾಗಿದ್ದ ಹಿಮ್ಲರ.

ಪ್ರಪಂಚದಲ್ಲಿಯ ಪ್ರತಿಯೊಂದು ದೇಶದಲ್ಲಿಯ ಪ್ರತಿಯೊಬ್ಬ ಮುಂದಾಳುವಿನ ಒಳಗುಟ್ಟು ಹಿಮ್ಲರನ ಕಚೇರಿಯಲ್ಲಿತ್ತು. ಜರ್ಮನಿಯಲ್ಲಂತೂ ತಮ್ಮ ಪಕ್ಷದವರೇ ಇರಲಿ, ಅಥವಾ ಮತ್ತಾರೇ ಇರಲಿ. ಅವರ ದೈನಂದಿನ

ಚಟುವಟಿಕೆಗಳೂ ಗುಪ್ತ ಕಾರ್ಯಗಳೂ ಹಿಮ್ಲರನ ಕಾಕದೃಷ್ಟಿಯೊಳಗಿಂದ ಪಾರಾಗಲಿಲ್ಲ. ಇದಕ್ಕೆ ಜರ್ಮನರು ಹೆದರಲೂ ಇಲ್ಲ. ಅವರಿಗೆ ಹೀಗಾಗುವದು ಬೇಕೆಂಬಂತೆ ತೋರುತ್ತದೆ. ತಾನು ತನ್ನ ನಾಯಕನಿಗೆ ಅಂದರೆ ಹಿಟ್ಲರನಿಗೆ (ಅವನಿಗೆ ಪ್ರೀತಿಯಿಂದ ಜರ್ಮನರು ಫ್ಯೂರರ ಎನ್ನುತ್ತಿದ್ದರು) ಎಲ್ಲಿಯವರೆಗೆ ದ್ರೋಹ ಬಗೆಯುವದಿಲ್ಲವೋ ಅಲ್ಲಿಯವರೆಗೆ ತನಗೆ ಯಾರ ಹೆದರಿಕೆ? ಎಂಬ ಭಾವನೆ ಆ ಜನರಲ್ಲಿ ಇತ್ತು. ಆದುದರಿಂದ ಜರ್ಮನಿಯಲ್ಲಿ ಹಿಟ್ಲರನ ತರುವಾಯ ಪ್ರಭಾವಶಾಲಿ ಪುರುಷನೆಂದರೆ ಹಿಮ್ಲರನೆಂದೇ ಹೇಳಬಹುದು. ಹಿಮ್ಲರನ ದರ್ಪದ ಮುಂದೆ ಅಲಂಕಾರಪ್ರಿಯನಾದ ಜನರಲ್ ಗ್ಯೋರಿಂಗ್‌ನಾಗಲೀ ಪ್ರಚಾರ ಪಂಡಿತನಾದ ಡಾ. ಗೋಬೆಲ್ಸ್‌ನಾಗಲೀ ತಲೆಬಾಗಲೇ ಬೇಕಾಗುತ್ತಿತ್ತು. ಇಷ್ಟೊಂದು ದರ್ಪ ಹಿಮ್ಲರನದು!

ಹಿಮ್ಲರನ ಜೀವನವೆಂದರೆ 'ಹಿಟ್ಲರವಾದ"ದ ಒಂದು ಜೀವಂತಕುರುಹು ಯೌವನಾವಸ್ಥೆಯಲ್ಲಿ ಕೋಟ್ಯಾವಧಿ ಸಾಮಾನ್ಯ ತರುಣರಂತೆ ಅವನೊಬ್ಬ. ಮ್ಯುನಿಕ್‌ದ ಒಕ್ಕಲುತನದ ಶಾಲೆಯಲ್ಲಿ ಶಿಕ್ಷಣಪಡೆಯುತ್ತಿರುವಾಗಲೆ ಸೋವ್ಹಿಯಟ್ ಸರಕಾರದ ವಿರುದ್ಧ ಕಾರ್ಯಮಾಡುತ್ತಿದ್ದ. '' ಸ್ವಾತಂತ್ರ್ಯದಲ"ದಲ್ಲಿ ಸೇರಿದ್ದ. ಹಿಟ್ಲರನ ಜೀವನದಲ್ಲಿ ಅತ್ಯಂತ ಮಹತ್ವದ ದಿನವೆಂದೆಣಿಸಲ್ಪಟ್ಟ 'ಮ್ಯುನಿಕ್‌ಪುರ್ ' ಅಂದರೆ ಮ್ಯುನಿಕ್‌ದಲ್ಲಿ ಮೊದಲುಬಾರಿ ಹಿಟ್ಲರನು ಬಂಡೆಬ್ಬಿಸಿದಾಗ ಅವನ ಜೊತೆಯಲ್ಲಿ ಹಿಮ್ಲರನೂ ಇದ್ದ. ೧೯೨೫ ರಲ್ಲಿ 'ಸ್ಟಾರ್ಮ್ ಟ್ರುಪರ್ಸ್ ' ಎಂಬ ಹಿಟ್ಲರನ ಸೈನ್ಯವನ್ನು ಸೇರಿ ಮೂರುವರ್ಷಗಳಲ್ಲಿಯೇ ಅಖಂಡ ಜರ್ಮನಿಯಲ್ಲಿಯ ಆ ಸೈನ್ಯದ ಮುಖ್ಯಸ್ಥನಾಗಿ ನಿಯಮಿಸಲ್ಪಟ್ಟನು. ಜರ್ಮನಿಯಲ್ಲಿ ಹುಟ್ಟಿದ ಎಲ್ಲ ಸಂಘಟಕರಿಗಿಂತಲೂ ಇವನು ಶ್ರೇಷ್ಠನೆಂದು ಗಣಿಸಲ್ಪಡುತ್ತಿದ್ದ.

ಎಂತಹದೇ ಕಠಿಣ ಕಾರ್ಯವಿರಲಿ, ಅದನ್ನು ಯಶಸ್ವಿಯಾಗಿ ಮಾಡುವ ಕೌಶಲ್ಯವು ಇವನಲ್ಲಿ ಇತ್ತು. ೧೯೩೪ರಲ್ಲಿ ಇವನು ಇಡೀ ಜರ್ಮನಿಯಲ್ಲಿಯ ಪೋಲೀಸಪಡೆಯ ಪ್ರಮುಖನಾದನು. ಮುಂದೆ ೧೯೩೬ರಲ್ಲಿ

ನಾತ್ಸೀವಾದವು ಏರಿಕೆಯ ಶಿಖರಕ್ಕೆ ಮುಟ್ಟಿದಾಗ ಇವನ ಕೈಯಲ್ಲಿ ಇಡೀ ಜರ್ಮನಿಯ ಎಲ್ಲ ಪೋಲೀಸ ಖಾತೆಗಳ ಅಧಿಕಾರವು ಸೇರಿತು.

ಇವನಿಗೆ ಅಷ್ಟೇ ಯೋಗ್ಯನಾದ ಸಹಕಾರಿಯೂ ದೊರೆತಿದ್ದ. ಅವನ ಹೆಸರು “ ಹೆನ್ರಿ ಹೆಡ್ರಿಕ್ ”

ಇಂತಹ ಜನರಲ್ಲಿ ಇರುವ ಈ ಅಗಾಧ ಕಾರ್ಯಕ್ಷಮತೆ, ಉತ್ಸಾಹ ಶಕ್ತಿ, ಸಂಘಟನಾಚಾತುರ್ಯ, ದೂರದರ್ಶಿತ್ವ, ಇವೇ ಮೊದಲಾದ ಸದ್ಗುಣಗಳು ರಾಷ್ಟ್ರಗಳ ಸ್ವಾತಂತ್ರ್ಯಾಪಹರಣಕ್ಕಾಗಿ ಉಪಯೋಗಿಸಲ್ಪಡದೆ ಅಂತರರಾಷ್ಟ್ರೀಯ ಶಾಂತಿ ಸ್ಥಾಪನೆಗಾಗಿ ಉಪಯೋಗಿಸಲ್ಪಟ್ಟಿದ್ದರೆ ಮಾನವ ವರ್ಗದ ಮೇಲೆ ಎಂತಹ ಉಪಕಾರವಾಗಬಹುದಾಗಿತ್ತು ?

೨. ಫ್ರಾನ್ಸದಲ್ಲಿ ಚಂಚುಪ್ರವೇಶ

ಫ್ರಾನ್ಸದ ಪತನಕ್ಕೆ ಜರ್ಮನಿಯ ಯುದ್ಧ ಚಾತುರ್ಯ, ವೈಮಾನಿಕ ಶಕ್ತಿಗಳಿಗಿಂತಲೂ ಈ ಪಂಚಮದಳದ ಚಟುವಟಿಕೆಗಳು ಹೆಚ್ಚು ಕಾರಣವಾದವು. ಆ ಚಟುವಟಿಕೆಗಳ ಪೂರ್ವಭಾಗವಿದು.

ಸೆಪ್ಟೆಂಬರ ೧೯೩೯ರಲ್ಲಿ ಮಿತ್ರ ರಾಷ್ಟ್ರಗಳು ಜರ್ಮನಿಯ ವಿರುದ್ಧ ಯುದ್ಧ ಸಾರಿದವು. ಮಧ್ಯಯುರೋಪವು ಪ್ರಪಂಚದ ರಣಕುಂಡವಾಗಿ ಪರಿಣಮಿಸಿತು. ಮೃತ್ಯುದೇವತೆಯ ತಾಂಡವ ನೃತ್ಯವು ತೋಫುತುಬಾಕಿಗಳ ಪಾರ್ಶ್ವಧ್ವನಿಯಲ್ಲಿ ಪ್ರಾರಂಭವಾಯಿತು.

ವ್ಹರ್ಸಾಯು ಒಪ್ಪಂದದಲ್ಲಿ ತನಗಾದ ಮಾನಭಂಗದ ಸೇಡು ತೀರಿಸಿಕೊಳ್ಳುವ ಹವ್ಯಾಸದಿಂದ ಹಿಟ್ಲರನ ಅಂಕಿತದಲ್ಲಿ ಬಂದ ಜರ್ಮನ್ ಜನತೆಯು ಯುದ್ಧದ ಸಾರ್ವಾಂಗಿಕ ಸಿದ್ಧತೆ ನಡೆಸಿತು. ಒಂದೊಂದನ್ನಾಗಿ ನೆರೆಹೊರೆಯ ರಾಷ್ಟ್ರಗಳನ್ನು ನುಂಗಿತು. ಜರ್ಮನಿಯ ಈ ಆರ್ಭಟೆಯನ್ನು ಪ್ರಪಂಚವು ಅನಿಮಿಷ ನೇತ್ರದಿಂದ ನೋಡುತ್ತಿತ್ತು. ಲೋಕಸತ್ತೆಯ ಪಾಲಕರೆಂದೆನಿಸಿಕೊಳ್ಳುವ ರಾಷ್ಟ್ರಗಳು ಈ ನೆರೆಹೊರೆಯ ರಾಷ್ಟ್ರಗಳಿಗೆ ಸಹಾಯದ ಅಭಿವಚನವನ್ನಿತ್ತಿದ್ದರೂ ಜರ್ಮನಿಯ ಪ್ರಚಂಡ ಯುದ್ಧಸಿದ್ಧತೆಯನ್ನು ಎದುರಿಸಲು ತಮ್ಮ ಶಕ್ತಿ ಸಾಲದೆಂದೋ ಅಥವಾ ಯುದ್ಧಮೂಲಕ ಒದಗುವ ಅನರ್ಥ ಪರಂಪರೆಗಳನ್ನು ತಪ್ಪಿಸಲೋಸುಗವೋ ಜರ್ಮನಿಯ ಈ ಆಕ್ರಮಣಶೀಲತೆಯನ್ನು ಸುಮ್ಮನೆ ಸಹಿಸುತ್ತ ಕೂಡ್ರಬೇಕಾಯಿತು. ಶಾಂತಿಗಾಗಿ ಪ್ರಯತ್ನದ ಪರಮಾವಧಿಯನ್ನು ಮಾಡುವೆವೆಂದು ಇಂಗ್ಲಂಡ ಮತ್ತು

ಫ್ರಾನ್ಸದ ಪ್ರಧಾನಮಂತ್ರಿಯಾದ ಚೆಂಬರಲೇನ್ ಮತ್ತು ದಲಾದಿಯೇ ಇವರ ಮ್ಯುನಿಕ್‌ದ ವರೆಗೆ ಹೋಗಿ ಹಿಟ್ಲರನೊಡನೆ ಒಪ್ಪಂದ ಮಾಡಿಕೊಂಡು ಬಂದರು. ತನ್ನ ದೇಶಬಾಂಧವರು ಈ ಒಪ್ಪಂದಕ್ಕೆ ಒಪ್ಪಲಿಕ್ಕಿಲ್ಲವೆಂದು ದಲಾದಿಯೇನ ಹೆದರಿಕೆ ಇತ್ತು. ಯಾಕೆಂದರೆ ಫ್ರೆಂಚರು ತಮ್ಮ ಮಿತ್ರ ರಾಷ್ಟ್ರವಾದ ಝೆಕೋಸ್ಲೋವಾಕಿಯಾಕ್ಕೆ ಪರಚಕ್ರಗಳು ದಂಡೆತ್ತಿ ಅದರ ಮೇಲೇರಿ ಹೋದರೆ ಅದಕ್ಕೆ ಸರ್ವವಿಧದ ಸಹಾಯ ಮಾಡುವೆವೆಂದು ಆಶ್ವಾಸನ ಕೊಟ್ಟಿದ್ದರು. ದಲಾದಿಯೇನ ಈ ಕೃತಿಯು ಈ ಆಶ್ವಾಸನದ ವಿರುದ್ಧ ವಿದ್ದುದರಿಂದ ಅವನಿಗೆ ಈ ತರಹದ ಭೀತಿಯುಂಟಾದದ್ದು ಸಹಜವಾಗಿತ್ತು.

ತನ್ನ ದೇಶಬಾಂಧವರು ಸಾರ್ವಜನಿಕವಾಗಿ ತನ್ನ ಮಾನಭಂಗ ಮಾಡುವರೆಂದು ದಲಾದಿಯೇನು ಪೂರ್ಣ ಹೆದರಿದ್ದ. ಆದರೂ ಅನ್ಯ ಮಾರ್ಗದ ಅಭಾವದ ಮೂಲಕ ಅವರು ಯುದ್ಧವನ್ನು ತಪ್ಪಿಸಲು ಈ ಮಾರ್ಗವನ್ನವಲಂಬಿಸಿದ್ದು.

ದಲಾದಿಯೇನು ತನ್ನ ವಿಮಾನದೊಳಗಿಂದ ಅಂಜುತ್ತ ಅಂಜುತ್ತಲೇ ಕೆಳಗಿಳಿದ. ಅವನನ್ನು ಇದಿರ್ಗೊಳ್ಳಲು ಬಂದ ಫ್ರೆಂಚ ಜನಸಮುದಾಯವು ಅವನ ತೇಜೋವಧೆ ಮಾಡುವದರ ಬದಲು ನಭೋ ಮಂಡಲವು ಇಬ್ಭಾಗ ವಾಗುವಂತೆ ಅವನ ಜಯಘೋಷಮಾಡಿತು. ಹರ್ಷಾತಿರೇಕದ ಸರ್ವ ಚಿಹ್ನ ಗಳೂ ಆ ಜನಸ್ತೋಮದ ಮುಖದ ಮೇಲೆ ಎದ್ದು ತೋರುತ್ತಿದ್ದವು.

ಆಪ್ತ ಮಿತ್ರನಾದ ಝೆಕ್‌ನಿಗೆ ಸರ್ವ ವಿಧದ ಸಹಾಯಮಾಡಿ ಅವನ ಅಸ್ತಿತ್ವ ರಕ್ಷಣೆ ಮಾಡುವೆನೆಂದು ವಚನಬದ್ಧನಾದ ಫ್ರೆಂಚನ ಮನಃಸ್ಥಿತಿಯು ಈ ರೀತಿ ವಿಪರೀತವಾದುದೇಕೆ? ಹಿಟ್ಲರನು ತನ್ನ ವಜ್ರ ಮುಷ್ಟಿಯನ್ನು ಝೆಕ್‌ನ ಮೇಲೆತ್ತಿದ್ದನ್ನು ತಿಳಿದೂ ತಿಳಿದೂ ಹಿಟ್ಲರನಿಗೆ ಬುದ್ಧಿ ಹೇಳುವ ದನ್ನು ಬಿಟ್ಟು ಝೆಕ್‌ನಿಗೆ ಶುಷ್ಕೋಪಚಾರದ ಮಾತುಗಳನ್ನು ಹೇಳುವಂತೆ ಇವನ ಮಾರ್ಪಾಟವಾದದ್ದು ಹೇಗೆ? ಎಂದು ಜಗತ್ತು ಆಚ್ಚರಿಪಟ್ಟಿತು. ಫ್ರಾನ್ಸದ ಪೋಲೀಸ ಖಾತೆಯು (ಪ್ರಿಫೆಕ್ಟರದಿ ಪೋಲೀಸ್) ಒಂದು ಅಂಗವಾದ ದ್ಯೂಕ್ಷಿಯೆಮ್ ಬ್ಯೂರೋ' ದವರಿಗೆ ಮಾತ್ರ ಫ್ರೆಂಚರ ಪರಿಸ್ಥಿತಿಯಲ್ಲಾದ ಈ ಮಾರ್ಪಾಟಿನ ಮೂಲವು ಗೊತ್ತಾಗಿತ್ತು.

ಫ್ರೆಂಚರು ಅಪ್ರತಿಮ ವೀರರೆಂದು ಯುರೋಪದಲ್ಲಿ ಹೆಸರು ಗಳಿಸಿದ್ದಾರೆ. ಇಂಗ್ಲಂಡದ ನಾವಿಕ ಬಲ, ಜರ್ಮನಿಯ ವೈಮಾನಿಕ ಬಲ, ಫ್ರಾನ್ಸದ ಸೈನಿಕ ಬಲ, ರಶಿಯಾದ ಮಾನವ ಬಲ, ಜಪಾನದ ಮನೋಬಲ, ಅಮೇರಿಕೆಯ ಧನಬಲ, ಇವು ಮನೆ ಮಾತಾಗಿವೆ. ಅಂದಮೇಲೆ ಇಂತಹ ಶಕ್ತಿವಂತ್ರ ರಾಷ್ಟ್ರವು ಹೀಗೆ ತನ್ನ ವಚನವನ್ನು ಪೂರೈಸಲು ಹಿಂಜರಿದದ್ದೇಕೆ? ಇದಕೆ ಕಾರಣವಾದ ಸಂಗತಿಯೇ ಫ್ರಾನ್ಸವನ್ನು ಅಧೋಗತಿಗಿಳಿಸಿತು.

ಫ್ರಾನ್ಸವನ್ನು ಸೋಲಿಸಬೇಕಾದರೆ ಅದರ ಈ ಸಾಮರ್ಥ್ಯವನ್ನು ಮಣ್ಣುಗೂಡಿಸಲೇಬೇಕೆಂದು ಜರ್ಮನಿಯು ನಿಶ್ಚಯಿಸಿತು. ಫ್ರಾನ್ಸದ ನೈತಿಕ ಅಧಃಪಾತವಾಗುವಂತೆ ಸರ್ವವಿಧದ ಯತ್ನಗಳು ನಡೆದವು. ಹಿಟ್ಲರನ ನುರಿತ 'ಪಂಚಮ ದಲವು' ಈ ಕೆಲಸಕ್ಕೆ ಟೊಂಕಕಟ್ಟಿತು. ಜರ್ಮನಿಯ ಲಕ್ಷಾವಧಿ ಪೌಂಡುಧನವು ಫ್ರಾನ್ಸಕ್ಕೆಬರಹತ್ತಿತು. ಪತ್ರಿಕೋದ್ಯಮಿಗಳು ಬರಲಾರಂಭಿಸಿದರು. ರಾಜಕಾರಣಪಟುಗಳೂ, ಅಭ್ಯಾಸುಗಳೂ, ವರ್ತಕರೂ ಬಂಡವಲಗಾರರೂ, ಶ್ರೀಮಂತ ತರುಣ ತರುಣಿಯರೂ, ಯುರೋಪದ ವಿಲಾಸ ಮಂದಿರವಾದ ಪಾರಿನಗರದಲ್ಲಿ ತಮ್ಮ "ಕೆಲಸ"ವನ್ನಾರಂಭಿಸಿದರು.

ಸ್ವಿಝರಲಂಡದ ರಾಜಧಾನಿಯಲ್ಲಿ ಆಸ್ಟ್ರಿಯದ ಮಿಲಿಟರಿ ಅಧಿಕಾರಿಯಾಗಿದ್ದ ಜನರಲ್ ವಿಲಿಯಮ್ ಫಾನ್ ಐನೆಮ್ ಇವನ ಸುಂದರ ಹೆಂಡತಿಯು ಕುಶಲ ಗೂಢಚಾರಳು. ಅನೇಕ ಸಾರೆ ಇವಳು ಮಧ್ಯ ಯುರೋಪದ ಬೇರೆ ಬೇರೆ ರಾಷ್ಟ್ರಗಳಲ್ಲಿ ತನ್ನ ಕೈವಾಡ ನಡೆಸಿ ಗುಟ್ಟುರಟ್ಟಾಗಿ ಹೆಸರುಗೆಟ್ಟವಳು. ಆದರೂ ಅವಳು ದುಡ್ಡಿನ ಬಲದಿಂದ ಮತ್ತು ಅನೇಕ ಪ್ರಮುಖ ಜನ ಮಿತ್ರರ ಸಹಾಯದಿಂದ ಎಲ್ಲ ಗಂಡಾಂತರಗಳೊಳಗಿಂದ ಪಾರಾಗಿದ್ದಳು. ಎಜಂಟನಾಗಿಕೆಲಸಮಾಡುತ್ತಿದ್ದ ಹರ್‌ಫಾನ್‌ರಿಬೆನ್‌ಟ್ರಾಪನೂ ಬವ್ಹೇರಿಯಾದ ಮೋಟರ ಕಾರಖಾನೆಯ ಎಜಂಟನಾಗಿದ್ದ ಜನರಲ್ ಹರ್ಮನ್ ಗ್ಯೋರಿಂಗನೂ ಇವಳನ್ನು ಪಾರು ಮಾಡಲಿಕ್ಕೆ ಸಹಾಯ ಮಾಡಿದ್ದರು. ಮತ್ತು ಇದರ ಪ್ರತಿಫಲವೆಂದು ಅವಳು ಫ್ರಾನ್ಸದಲ್ಲಿಯ "ಕೆಲಸ"ವನ್ನು ಕೈಕೊಂಡಿದ್ದಳು.

ಡಾ. ಗೋಬೆಲ್ಸನು ಕೇವಲ ತನ್ನದೇ ಆತ್ಮ ಶ್ಲಾಘನೆ ಮಾಡಿಕೊಳ್ಳುತ್ತಿರುವನೆಂದೂ ತಾನೇ ಹೆಚ್ಚು ಪ್ರಸಿದ್ಧಿ ಪಡೆಯಲೆತ್ನಿಸುತ್ತಿರುವನೆಂದೂ ಫೀಲ್ಡ್ ಮಾರ್ಶಲ್ ಗ್ಯೋರಿಂಗನಿಗೆ ಬಹುವಾಗಿ ಹುಚ್ಚುಹತ್ತಿದ್ದರಿಂದ

ಗ್ಯೋರಿಂಗನು ಫ್ರಾನ್ಸ ದೇಶದಲ್ಲಿ ತನ್ನ ಪ್ರೌಢಿಮೆಯನ್ನು ಬೆಳೆಸುವದಕ್ಕಾಗಿ ಲಕ್ಷಾವಧಿ ಪೌಂಡನ್ನು ತನಗೆ ಸರಿದೋರಿದಂತೆ ವೆಚ್ಚಮಾಡಲು ಕೊಟ್ಟಿರುವ ನೆಂದು ಬ್ಯಾರನೆಸ್ ಫಾನ್ ಐನೆಮ್‌ಳೂ ಅವಳ ಸಹಕಾರಿಯಾದ ಹರ್‌ಲ್ಯೂಹರ್ಶ್‌ನೂ ತಾವು ಪರಿಚಯ ಮಾಡಿಕೊಂಡವರೆದುರು ಹೇಳುತ್ತಿದ್ದರಲ್ಲದೆ ಗ್ಯೋರಿಂಗನ ಈ ಮೂರ್ಖತನಕ್ಕಾಗಿ ಆವನ ಕುಚೇಷ್ಟೆ ಮಾಡುತ್ತಿದ್ದರು. ಹಿಟ್ಲರನನ್ನೂ ನಾತ್ಸೀವಾದವನ್ನೂ ನಾತ್ಸೀಮುಖಂಡರನ್ನೂ ಜರೆಯುತ್ತಿದ್ದರು. ಹೀಗೆ ಇವರು ಎಲ್ಲವನ್ನೂ ಬಹಿರಂಗವಾಗಿಯೇ ನಡೆಸಿದ್ದರಿಂದ ಇವರ ವಿಷಯವಾಗಿದ್ದ ಅಲ್ಪ ಸ್ವಲ್ಪ ಸಂಶಯವೂ ದೂರಾಯಿತು. ಪಾರಿಸು ಪ್ರಮುಖ ಜನರು ಇವರ ಮಿತ್ರರಾದರು.

ರಿಬೆನ್‌ಟ್ರಾಪ್‌ನ ಹಸ್ತಕನಾದ ಹರ್ ಒಟ್ಟೋ ಅಬೆಝ್‌ಸು ಈ ಮೊದಲೇ ಫ್ರಾನ್ಸದ ಅನೇಕ ಮುಂದಾಳುಗಳ ಸ್ನೇಹ ಸಂಪಾದಿಸಿದ್ದನು. ಇವನು ಫ್ರಾನ್ಸ ಮತ್ತು ಜರ್ಮನಿ ಇವುಗಳ ನಡುವೆ ಸ್ನೇಹ ಸಂಬಂಧವನ್ನು ಹೆಚ್ಚಿಸುವದಕ್ಕಾಗಿ ಯತ್ನಿಸುವವನೆಂದು ಹೇಳಿಕೊಳ್ಳುತ್ತಿದ್ದ. ನಾತ್ಸೀವಾದದ ಮತ್ತು ನಾತ್ಸೀ ಮುಖಂಡರ ಅನೇಕ ಕೃತಿಗಳನ್ನು ಇವನು ತೀಕ್ಷ್ಣವಾಗಿ ಖಂಡಿಸುತ್ತಿದ್ದುದರಿಂದಲೂ ಮತ್ತು ಇವನಲ್ಲಿ ಜರ್ಮನರ ಯಾವ ಲಕ್ಷಣಗಳೂ ಕಂಡು ಬರುತ್ತಿದ್ದಿಲ್ಲವಾದ್ದರಿಂದಲೂ 'ಕ್ವೇ ದಿ ಔರ್ಸಿ' (ಫ್ರಾನ್ಸದ ಸರಕಾರೀ ಕಚೇರಿ)ಯ ಅನೇಕ ಅಧಿಕಾರಿಗಳು ಇವನಿಗೆ ಮಿತ್ರರಾಗಿದ್ದರು. ಬ್ಯಾರನೆಸ್ ಐನೆಮ್‌ಳ ಮೇಜವಾನಿಗಳೂ ಅವಳ ಮೋಹಕ ಸ್ವಭಾವವೂ ಇವರೆಲ್ಲರನ್ನೂ ಮುಗ್ಧರನ್ನಾಗಿ ಮಾಡಿಬಿಟ್ಟವು.

"ಹಿಂದಿನ ಮಹಾಯುದ್ಧದಲ್ಲಿ ಝೆಕ್‌ರು ಜರ್ಮನಿಗೆ ಮಾಡಿದ್ದು ಅನ್ಯಾಯ; ತಮ್ಮ ಲಕ್ಷಾವಧಿ ಬಾಂಧವರು ಝೆಕೋಸ್ಲೊವಾಕಿಯಾದ ದಬ್ಬಾಳಿಕೆಯಲ್ಲಿ ಜಿಬ್ಬಾಗುತ್ತಿದ್ದುದನ್ನು ಜರ್ಮನರು ಹೇಗೆ ಸಹಿಸಬೇಕು? ಜರ್ಮನಿಯು ಝೆಕ್‌ರ ಈ ಕೃತಿಯ ವಿರುದ್ಧ ಉಗ್ರೋಪಾಯಗಳನ್ನು ಕೈಕೊಂಡರೆ ತಪ್ಪೇನು?" ಎಂಬ ವಿಚಾರವು ಫ್ರೆಂಚರಲ್ಲಿ ಮೂಡಹತ್ತಿತು. ಇದರ ಜೊತೆಗೆ "ಜಗತ್ತಿನಲ್ಲಿ ಯುದ್ಧವೇ ಬೇಡ, ಶಾಂತಿ ಬೇಕು" ಎಂಬ ಚಟುವಟಿಕೆಯೂ ಫ್ರಾನ್ಸದಲ್ಲಿ ತಲೆದೋರಹತ್ತಿತು.

ಫ್ರಾನ್ಸದಲ್ಲಿ ಸಮಾಜ ಸಮತಾವಾದಿಗಳ ಪ್ರಾಬಲ್ಯವು ಬೆಳೆಯು ಹತ್ತಿದ್ದು ಅಲ್ಲಿಯ ಕೆಲವು ಮವಾಳ ಪಕ್ಷದವರಿಗೆ ಸರಿಕಾಣುತ್ತಿದ್ದಿಲ್ಲ. ಈ ಸಮಾಜ ಸಮತಾವಾದವನ್ನು ಮುರಿಯುವದು ಹಿಟ್ಲರನಿಗೊಬ್ಬನಿಗೇ ಸಾಧ್ಯವಿದೆ ಎಂದು ಇನೆಮುಳು ಪ್ರಚಾರ ನಡೆಸಿದಳು.

ಆಂತರರಾಷ್ಟ್ರೀಯ ರಾಜಕಾರಣದಲ್ಲಿ ಒಂದು ಹಿರಿಮೆಯ ಸ್ಥಾನ ಗಳಿಸಿದ್ದ 'ಮಾಂಶರ್ ಪೋಯರೀ' ಯೂ ಅವನ ಪತ್ರಿಕೆಯಾದ 'ಫಿಗ್ಯಾರೋ' ಮತ್ತು 'ಲಿ ಟೆಂಪ್ಸ್', ಎಂಬ ಸುದ್ದಿ ಸಂಸ್ಥೆಯ ಪ್ರಭಾವ ಶಾಲೀ ಪ್ರಮುಖನಾದ ಮಾಂಶರ್ ಆಬೀನ್‌ನೂ ಇವರ ಈ ಚಟುವಟಿಕೆಗಳಿಗೆ ಸಹಕಾರಿಯಾದರು. ಫ್ರಾನ್ಸದಲ್ಲಿ ಈ ಗುಂಪಿನ ಒಳಸಂಚು ಇಲ್ಲಿಗೇ ಮುಗಿಯದೆ ಇಲ್ಲಿಂದ ಪ್ರಾರಂಭವಾಯಿತು. ಫ್ರಾನ್ಸದ ನೈತಿಕ ಸಾಮರ್ಥ್ಯವನ್ನು ಕುಗ್ಗಿಸಿ ಅವರಲ್ಲಿಯೇ ಒಡಕು ಹುಟ್ಟಿಸುವ ಯತ್ನಗಳು ನಡೆದವು. ಝೆಕೋಸ್ಲೊವಾಕಿಯಾದ ಅಧ್ಯಕ್ಷನಾದ ಡಾ. ಬಿನಿಸ್‌ನು ರಶಿಯಾದ ಕೈಗೊಂಬೆಯಾಗಿರುವನೆಂದೂ ಫ್ರಾನ್ಸ ದೇಶವು ಕೂಡ ಬೋಲ್ಶೆವಿಕ್‌ರ ವರ್ಚಸ್ಸಿಗೇ ಅಧೀನವಾಗುತ್ತ ನಡೆದಿದೆ ಎಂದೂ ಪ್ರತಿಪಾದನೆ ನಡೆಯಿತು. ಇದಕ್ಕೆ ಸಾಕ್ಷಿ ಪುರಾವೆಗಳನ್ನು ಈ ಗುಂಪಿನವರು ತಮ್ಮ ಫ್ರೆಂಚ ಮಿತ್ರವರ್ಗಕ್ಕೆ ತೋರಿಸಲಾರಂಭಿಸಿದರು.

ಪೋಲಂಡವನ್ನು ನುಂಗಬೇಕೆಂಬ ಹಿಟ್ಲರನ ಪೂರ್ವ ಯೋಜನೆಯು ಸಿದ್ಧವಾಗಿತ್ತು. ಆದರೆ ಪೋಲಂಡದ ಮೇಲೆ ದಂಡೆತ್ತಿ ಹೋದರೆ ಯುರೋಪದ ಇತರ ಲೋಕಸತ್ತಾತ್ಮಕ ರಾಷ್ಟ್ರಗಳು ಕೂಡಲೇ ಜರ್ಮನಿಯ ವಿರುದ್ಧ ಯುದ್ಧ ಹೂಡಬಹುದೆಂದು ಅವನ ಮನವರಿಕೆಯಾಗಿತ್ತು. ಆದಕ್ಕಾಗಿ ಅವನು ವಿವಂಚನೆಯಲ್ಲಿದ್ದಾಗ ಅವನ ಪರರಾಷ್ಟ್ರ ಮಂತ್ರಿಯಾದ ರಿಬೆನ್‌ಟ್ರಾಪ್‌ನು "ಏಕಸಮಯಾವಚ್ಛೇದದಿಂದ ಬಿರುಗಾಳಿಯ ದಾಳಿಯನ್ನು ಪೋಲಂಡದ ಮೇಲೆ ಪ್ರಾರಂಭಿಸಿ ಆದನ್ನು ಹಸ್ತಗತ ಮಾಡಿಕೊಂಡರೆ ಈ ಲೋಕಸತ್ತಾತ್ಮಕ ರಾಷ್ಟ್ರಗಳು "ಆದದ್ದಾಯಿತು ಇನ್ನೇನು ಮಾಡುವದು?" ಎಂದು ಸುಮ್ಮನೆ ಕೂಡ್ರುವವೆಂದು ಹಿಟ್ಲರನಿಗೆ ಸಲಹೆ ಕೊಟ್ಟನು. ಅದೂ ಸೂಕ್ತ ಸಲಹೆ ಎಂದು ಹಿಟ್ಲರನಿಗನಿಸಿರಬಹುದು. ತದ್ವಿರುದ್ಧವಾಗಿ ಒಂದು

ವೇಳೆ ಈ ರಾಷ್ಟ್ರಗಳು ಯುದ್ಧವನ್ನು ಸಾರಿಯೇ ಬಿಟ್ಟರೆ? ಅದಕ್ಕೆ ಪೂರ್ವ ಸಿದ್ಧತೆ ಬೇಕಲ್ಲ? ಎಂಬ ವಿಚಾರಗಳು ಹಿಟ್ಲರನನ್ನು ಬಾಧಿಸಿದವು.

ವೈರಿಯನ್ನು ಮನೆಯಲ್ಲಿ ಕರೆದುಕೊಂಡು ಗುದ್ದಾಡುವದಕ್ಕಿಂತ ಅವನಿದ್ದಲ್ಲಿಯೇ ಹೋಗಿ ಅವನ ಸಂಗಡ ಹೋರಾಡುವದು ಹಿಟ್ಲರನ ಯುದ್ಧ ತಂತ್ರಗಳಲ್ಲಿ ಪ್ರಮುಖವಾಗಿದೆ ಎಂದು ಇಂದಿನ ವರೆಗಿನ ಅವನ ಚಟುವಟಿಕೆಗಳಿಂದ ತೋರಿಬರುತ್ತದೆ.

ಅಂದಮೇಲೆ ಒಂದುವೇಳೆ ಫ್ರಾನ್ಸದ ಮೇಲೆ ದಂಡೆತ್ತಿ ಹೋಗುವದಾದರೆ ಯಾವ ಮಾರ್ಗದಿಂದ ಹೋಗಬೇಕು? ದುರ್ಗಮವಾದ 'ಮ್ಯಾಜಿನೋ ಲಾಯಿನ"ವನ್ನು ಭೇದಿಸುವದೆಂತು? ಅದರ ರಹಸ್ಯವೇನು? ಅದರಲ್ಲಿಯ ಯಾಂತ್ರಿಕ ಸಿದ್ಧತೆ ಏನಿದೆ? ಹೇಗಿದೆ? ಫ್ರೆಂಚ ಸೈನಿಕರ ಚಟುವಟಿಕೆಗಳೇನು? ಅವರ ಆಯಮೆಟ್ಟಿನ ಸ್ಥಳಗಳಾವವು? ಮುಂತಾದ ಅನೇಕ ವಿಷಯಗಳನ್ನು ಅರಿತುಕೊಳ್ಳುವದು ಹಿಟ್ಲರನಿಗೆ ಅವಶ್ಯವಾಗಿತ್ತು.

೩. ದೇಶನಿಷ್ಠೆಯ ಮುಸುಕಿನಲ್ಲಿ

ಮಹಾ ಯುದ್ಧವು ಪ್ರಾರಂಭವಾಯಿತು. ಪಂಚಮ ದಳದ ಚಟುಟಿಕೆಗಳೂ ಫ್ರಾನ್ಸದಲ್ಲಿ ರಭಸದಿಂದ ಸಾಗಿದ್ದವು. ಚಾಣಾಕ್ಷರಾದ ಫ್ರೆಂಚ ಪೋಲೀಸರು ಅನೇಕ ಗುಪ್ತ ಹೇರರನ್ನು ಹಿಡಿದು ನಡೀಪಾರು ಮಾಡಿದರು. ಮತ್ತು ಅನೇಕರನ್ನು ಸೆರೆಮನೆಗೆ ಕಳುಹಿದರು.

“ಮ್ಯಾಜಿನೋ ವ್ಯೂಹ”ದ ಮೇಲೆ ಹೆಚ್ಚು ಭರವಸೆಯನ್ನಿಟ್ಟು ಫ್ರಾನ್ಸವು ಜರ್ಮನಿಯನ್ನು ಎದುರಿಸಲು ಮಾಡಬೇಕಾದಷ್ಟು ಸಿದ್ಧತೆ ಮಾಡಿದಂತೆ ತೋರಲಿಲ್ಲ.

ಮ್ಯಾಜಿನೋ ವ್ಯೂಹ

ಫ್ರೆಂಚರೇನೋ ಕಡುಗಲಿಗಳು. ಆದರೆ ವ್ಹರ್ಸಾಯ ಒಪ್ಪಂದದ ನಂತರ ಈಚೆಗೆ ಅವರು ವಿಲಾಸದಲ್ಲಿ ಮೈಮರೆತಿದ್ದರು. ಆದಕ್ಕೆ ಪ್ರಮುಖ ಕಾರಣವೆಂದರೆ ೬೦ ಕೋಟಿ ಪೌಂಡುಗಳ ವೆಚ್ಚದಿಂದ ಸಿದ್ಧವಾದ “ಮ್ಯಾಜಿನೋ ಲಾಯಿನ್” ಎಂಬ ಅಭೇದ್ಯವಾದ ದುರ್ಗಗಳ ಸಾಲು.

ಇದು ಜರ್ಮನಿ ಮತ್ತು ಫ್ರಾನ್ಸ ಇವೆರಡೂ ದೇಶಗಳ ಮಧ್ಯದಲ್ಲಿ ಕಟ್ಟಲ್ಪಟ್ಟಿದೆ. ಇದನ್ನು ಕಟ್ಟಲಿಕ್ಕೆ ೧೦ ವರ್ಷಗಳು ಬೇಕಾದವು. ಈ

ದುರ್ಗಾವಳಿಯು ಎಲ್ಲ ಬಗೆಯ ಅತ್ಯಾಧುನಿಕ ಯಂತ್ರ ಸಮುಚ್ಚಯಗಳಿಂದ ಸುಸಜ್ಜಿತವಾಗಿತ್ತಾದ್ದರಿಂದ ಅಗಮ್ಯವಾಗಿತ್ತು. ಇದರ ಯಂತ್ರಗಳ ಗುಟ್ಟು ಅತ್ಯಂತ ಗೌಪ್ಯವಾಗಿಡಲ್ಪಟ್ಟಿತ್ತು. ಅದನ್ನು ತಿಳಿದುಕೊಳ್ಳಬೇಕೆಂದೇ ಜರ್ಮನಿಯು ಅತ್ಯಂತ ತೀಕ್ಷ್ಣವಾಗಿ ಹವಣಿಸುತ್ತಿತ್ತು. ಈ ಮ್ಯಾಜಿನೊ ವ್ಯೂಹವನ್ನು ದಾಟಿ ಬಂದು ಫ್ರಾನ್ಸವನ್ನು ಸೋಲಿಸಲು ಯಾರಿಗೂ ಎಂದಿಗೂ ಸಾಧ್ಯವಿಲ್ಲೆಂದು ಫ್ರಾನ್ಸವು ಸಂಪೂರ್ಣ ನಂಬಿತ್ತು.

ಅದೇ ಮೇರೆಗೆ ಹಾಲಂಡವೂ ಸಹಿತ ಜಲದುರ್ಗಗಳನ್ನು ಕಟ್ಟಿ ತನ್ನ ಸಂರಕ್ಷಣೆಯನ್ನು ಮಾಡಿಕೊಂಡಿತ್ತು. ಆದ್ದರಿಂದ ಫ್ರಾನ್ಸಕ್ಕೆ ಬರಲು ಜರ್ಮನಿಗೆ ಪಶ್ಚಿಮ ಮತ್ತು ಉತ್ತರ ಈ ಎರಡೂ ದಿಶೆಗಳಲ್ಲಿ ದಾರಿ ಇದ್ದಿಲ್ಲ ವೆಂದು ಫ್ರಾನ್ಸವು ಸಂಪೂರ್ಣ ತಿಳಿದುಕೊಂಡಿತ್ತು.

ಇತ್ತ ಯುರೋಪದಲ್ಲಿ ಯುದ್ಧದ ಕಾರ್ಮೋಡಗಳು ಮುಸುಕಿದವು ಪ್ರತಿಯೊಂದು ರಾಷ್ಟ್ರವೂ ಯುದ್ಧದ ಸಿದ್ಧತೆಯಲ್ಲಿ ಮಗ್ನವಾಗಿತ್ತು. ಜರ್ಮನ್ ಸೈನ್ಯವು ತನ್ನ ಸಮೀಪದಲ್ಲಿ ಬಂದರೆ ಸಾಕು. ಅದನ್ನು ನುಚ್ಚು ನೂರು ಮಾಡುವೆನೆಂದು ಮ್ಯಾಜಿನೋ ವ್ಯೂಹವು ಬಾಯ್ತೆರೆದು ಕುಳಿತಿತ್ತು ತನ್ನ ಜಾಲದಲ್ಲಿ ಸಿಲುಕಿದರೆ ಅಲ್ಲಿಯೇ ಒದ್ದಾಡಿಸಿ ಕೊಲ್ಲುವೆನೆಂದು ಡಚ್ ವಾಟರ ಲಾಯಿನ್ (ಹಾಲಂಡದ ಜಲವ್ಯೂಹ) ಸುಸಜ್ಜಿತವಾಗಿತ್ತು.

ಇಲ್ಲಿಯವರೆಗೆ ಫಾನ್ ಐನೆಮ್‌ಳು ಗಳಿಸಿದ ತನ್ನ ಮಿತ್ರರ ಸತ್ವ ಪರೀಕ್ಷೆಯ ಕಾಲವು ಈಗ ಬಂದಂತಾಯಿತು. ಫ್ರಾನ್ಸದ ಯುದ್ಧಯಂತ್ರದ ಪ್ರತಿಯೊಂದು ಚಕ್ರವನ್ನೂ ತಿಳಿದುಕೊಳ್ಳಲು ಹಿಟ್ಲರನ ಪಂಚಮದಲ್ಲಿ ಚಟುವಟಿಕೆಗಾರಂಭವಾಯಿತು.

ಈ ಪಾರ್ಶ್ವಭೂಮಿಯಲ್ಲಿ ಜರ್ಮನಿಯು ಫ್ರಾನ್ಸ ದೇಶವನ್ನು ಕೈವಶ ಮಾಡಿಕೊಳ್ಳಬೇಕಾಗಿತ್ತು.

ಹಿಟ್ಲರನ ಪಂಚಮ ದಲವಂತೂ ಇಡೀ ಫ್ರಾನ್ಸದೇಶದಲ್ಲಿ ತನ್ನ ಜಾಲವನ್ನು ಪಸರಿಸಿತ್ತು. ಹಲವಾರು ಜನರನ್ನು ಫ್ರೆಂಚ ಗುಪ್ತ ಪೋಲೀಸರು ಬಂಧಿಸಿದರೆ ಅಥವಾ ಗಡಿಯಾಚೆ ಕಳುಹಿಸಿದರೆ ಆ ಸ್ಥಳಗಳು

ಕೂಡಲೇ ತುಂಬಲ್ಪಡುತ್ತಿದ್ದವು. ಜರ್ಮನಿಗಾಗಿ ಕೆಲಸ ಮಾಡುತ್ತಿದ್ದ ಒಬ್ಬ ಹೇರನಿಗೆ ಇನ್ನೊಬ್ಬನ ಪರಿಚಯು ಸಹ ಇಲ್ಲದಷ್ಟು ಗುಟ್ಟಿನಲ್ಲಿ ಕಾರಸ್ಥಾನಗಳು ನಡೆದಿದ್ದವು.

೧೯೩೯ ನೇ ಮಾರ್ಚ ೧೫ನೇ ತಾರೀಖಿನ ದಿನ ಜರ್ಮನ್ ಸೈನಿಕರು ಫ್ರಾನ್ಸದ ಗಡಿಯಲ್ಲಿ ಪ್ರವೇಶ ಮಾಡಿದ ನಂತರ ಈ ಗುಪ್ತ ಹೇರರ ಕಾರ್ಯ ಸಾಗಿಸುವದು ಬಹಳ ಕಠಿಣವಾಗಿತ್ತು. ಹರ್ ಅಬೆರ್ಝ್‌ನ ವಿಷಯವಾಗಿ ಸಂಶಯಾಸ್ಪದ ಸುದ್ದಿಗಳು ಬರಹತ್ತಿದ್ದರಿಂದ ಅನೇಕ ಜನ ಫ್ರೆಂಚ ಮಿತ್ರರು ಅವನ ಕೈಬಿಟ್ಟರು. ಆದರೂ ಅವನು ಎದೆಗುಂದದೆ ತನ್ನ ಸ್ನೇಹಿತರಾದ ಅಬಿನ್, ಪೋಯರೀ, ಫರ್ಡೋನೆ ಮೊದಲಾದವರಿಗೆ ತನ್ನ ಸಂಗಡ ವಿಶೇಷ ಸಂಬಂಧವನ್ನಿಡಕೂಡದೆಂದು ಎಚ್ಚರಿಕೆ ಕೊಟ್ಟು ತನ್ನ ಮನೆಗೆ ತಿರುಗಿ ಬರುವಷ್ಟರಲ್ಲಿ ಫ್ರಾನ್ಸವನ್ನು ಕೂಡಲೇ ಬಿಟ್ಟು ಹೋಗಲು ಅವನಿಗೆ ಆಜ್ಞೆ ಬಂದಿತ್ತು. ಸ್ವಲ್ಪೇ ಅವಧಿಯಲ್ಲಿ ಬ್ಯಾರನೆಸ್ ಫಾನ್ ಐನೆಮ್‌ಳೂ ಹೊರಬೀಳಬೇಕಾಯಿತು. ಹರ್ಶ್‌ನು ಮಾತ್ರ ತಾನು ಫ್ರೆಂಚ ವಂಶಜ ನಾದ್ದರಿಂದ ತನಗೇನೂ ಆತಂಕ ಬರಲಿಕ್ಕಿಲ್ಲವೆಂದು ಯೋಚಿಸಿದ್ದ. ಆದರೆ ಅವನನ್ನೂ ಅಬಿನ್ ಪೋಯರೀಯನ್ನೂ ಮತ್ತು ಫರ್ಡೋನೆಯನ್ನೂ ಅನೇಕ ಅಪರಾಧಗಳ ಮೇಲೆ ಬಂಧಿಸಿ ವಿಚಾರಣೆ ನಡೆಸಿದರು. ಅಬಿನ್‌ನು ೧೦ಲಕ್ಷ ಮತ್ತು ಪೋಯರಿಯು ೩೫ ಲಕ್ಷ ಫ್ರ್ಯಾಂಕುಗಳನ್ನು ಹಿಟ್ಲರನಿಂದ ಪಡೆದಿರುವದಾಗಿ ಒಪ್ಪಿದರು.

ಇವರಲ್ಲದೆ ಇನ್ನೂ ಅನೇಕ ಗುಪ್ತಹೇರರು ಬಂಧಿಸಲ್ಪಟ್ಟರು. ಜರ್ಮನ್ ವೃತ್ತ ಪತ್ರಿಕೆಗಳ ಸುದ್ದಿಗಾರರು ಹೊರದೂಡಲ್ಪಟ್ಟರು.

ಪಾಲ್ ಫರ್ಡೋನೆಯು ಮಾತ್ರ ಪೋಲೀಸರ ಕೈಯಲ್ಲಿ ಸಿಗದೆ ತಪ್ಪಿಸಿ ಕೊಂಡು ಜರ್ಮನಿಗೆ ಓಡಿಹೋದ.

೪. ಫ್ರಾನ್ಸ ಪತನದ ಮುಖ್ಯ ಕಾರಣಗಳು

ಹಿಟ್ಲರನು ಫ್ರೆಂಚರಲ್ಲಿಯ ಅನೇಕ ಪ್ರಮುಖರನ್ನೊಡೆದುಕೊಂಡು ರ್‍ಹಾಯಿನ್ ಪ್ರದೇಶ, ಅಲ್ಸೆಸ್ ಲೋರೆನ್, ಮ್ಯಾಜಿನೋ ಲಾಯಿನ್ ಮೊದಲಾದ ಯುದ್ಧದ ದೃಷ್ಟಿಯಿಂದ ಅತಿ ಮಹತ್ವದ ಸ್ಥಾನಗಳಾದವುಗಳ ವಿವರಗಳನ್ನು ಪಡೆದಿದ್ದ. ಫ್ರೆಂಚರಲ್ಲಿ ಯುದ್ಧ ಭೀರುತ್ವದ ಅನೇಕಾನೇಕ ರಾಜಕಾರಣಿಗಳಲ್ಲಿ ಒಡಕು ಹುಟ್ಟಿಸುವ ಕೆಲಸದಲ್ಲಿಯೂ ಕೃತಕೃತ್ಯ ನಾಗಿದ್ದ.

ಇಂಗ್ಲಂಡ ಫ್ರಾನ್ಸ ದೇಶಗಳಲ್ಲಿ ವಿಶುಷ್ಟತೆ, ಪರಸ್ಪರ ಅವಿಶ್ವಾಸ ಗಳುದ್ಭವಿಸುವಂತೆ ನೋಡಿಕೊಂಡಿದ್ದ. ಮೇಲಾಗಿ ಅವರು ವಿಲಾಸದಲ್ಲಿ ತೇಲಾಡುವ ಏರ್ಪಾಟನ್ನೂ ಮಾಡಿದ್ದ. ಈ ಕಾರಣಗಳಿಂದ ಜಗದೇಕವೀರ ನಾದ ನೆಪೋಲಿಯನ್ ನ ವೀರ ಫ್ರೆಂಚ ಸೈನ್ಯವು ನಿರ್ಣಯವಾಗಿತ್ತು. ಇದೇ ಫ್ರಾನ್ಸದ ಪತನಕ್ಕೆ ಮೂಲ ಕಾರಣ.

ಮೇಲೆ ದೇಶ ಘಾತಕಿಗಳ ಚಟುವಟಿಕೆ ಬೇರೆ. ಇಂಥ ಅನೇಕ ದೇಶ ದ್ರೋಹಿಗಳಲ್ಲೊಬ್ಬನಾದ ಡಾ. ಕಾರ್ಲ್‌ರೂಸನು ಸಟಿಸಿದ ಕಾರಸ್ಥಾನ ಗಳು ಫ್ರೆಂಚರನ್ನು ಹಿಂಬದಿಯಿಂದ ಇರಿದಿದ್ದವು.

ಡಾ. ಕಾರ್ಲ್‌ರೂಸನು ಅಲ್ಸೆಸ್‌ಲೋರೆನ್, ಪ್ರಾಂತದ ಒಂದು ಗಣ್ಯ ವ್ಯಕ್ತಿ. ಅವನೊಬ್ಬ ಚೈತನ್ಯಯುಕ್ತ ರಾಜಕಾರಣಿ. ಅಲ್ಸೆಸ್ ಲೋರೆನ್‌ವು ಸ್ವತಂತ್ರ ಪ್ರಾಂತವಾಗಬೇಕೆಂಬ ಚಳವಳಿಯ ಸೂತ್ರಧಾರ. ಎಲ್‌ರ್ಝುಫ್ ಎಂಬ ಪತ್ರಿಕೆಯ ಪ್ರಮುಖ. ಆ ಪತ್ರಿಕೆಯ ಮುಖಾಂತರ ತನ್ನ ರಾಜ ಕಾರಣವನ್ನು ನಡೆಸುತ್ತಿದ್ದ. ಅವನು ಅನೇಕ ಸಂಸ್ಥೆಗಳಲ್ಲಿ ಅಧ್ಯಕ್ಷನೋ ಉಪಾಧ್ಯಕ್ಷನೋ ಆಗಿ ಜನತೆಯ ಮೇಲೆ ವರ್ಚಸ್ಸನ್ನು ಬೀರಿದ್ದ. ತನಗೂ

ಜರ್ಮನಿಗೂ ಏನೂ ಸಂಬಂಧವಿಲ್ಲೆಂದು ಸಮಯ ದೊರೆತಾಗೆಲ್ಲ ಸಾಧಿಸುತ್ತಿದ್ದ. ಆದರೂ ಅಂತರಂಗದಲ್ಲಿಯ ಅವನ ವಿಚಾರಗಳೇ ಬೇರೆಯಾಗಿದ್ದವು. ಹಿಂದಕ್ಕೊಮ್ಮೆ ಅಲ್ಸೇಸ್ ಲೋರೆನ್ ಪ್ರಾಂತದ ವಿಭಕ್ತೀಕರಣವಾಗಬೇಕೆಂಬ ಚಳವಳಿಗಾರರನ್ನು ಹಿಡಿದಾಗ ಇತರರೊಡನೆ ಇವನಿಗೂ ೧೫ ವರ್ಷಗಳ ಶಿಕ್ಷೆ ವಿಧಿಸಲ್ಪಟ್ಟಿತ್ತು. ಆದರೆ ಆ ಕಾಲಕ್ಕೆ ಈತನು ತನ್ನ ಜತೆಗಾರರ ಕೈಬಿಟ್ಟು ಜರ್ಮನಿಗೆ ಓಡಿ ಹೋಗಿದ್ದ.

ಆದಕ್ಕೂ ಮೊದಲು ೧೯ಗಳರ ಮಹಾಯುದ್ಧವು ಮುಗಿದ ನಂತರ ಈತನು ಸಾರ ಪ್ರಾಂತದಲ್ಲಿಯ ಶಾಲೆಗಳ ಇನ್ಸ್ಪೆಕ್ಟರನಾಗಿ ಕೆಲಸ ಮಾಡುತ್ತಿದ್ದಾಗ ಜರ್ಮನಿಯ ಮೇಲಿನ ತನ್ನ ಸಿಟ್ಟನ್ನು ಈತನು ಪ್ರತಿ ಕ್ಷಣಕ್ಕೆ ತೋರ್ಪಡಿಸುತ್ತಿದ್ದ. ಜರ್ಮನಿಯ ಬಗ್ಗೆ ಸಹಾನುಭೂತಿ ಇದ್ದ ಪ್ರತಿಯೊಂದು ವ್ಯಕ್ತಿಗೂ, ಆತನು ಯಾವನೇ ಇರಲಿ, ಯೋಗ್ಯ ಶಿಕ್ಷೆಯಾಗಬೇಕೆಂದೂ ಜರ್ಮನಿಗೆ ಅನುಕೂಲವಾಗಿ ಬರೆಯುವ ಪತ್ರಿಕೆಗಳನ್ನು ಬಗ್ಗುಬಡಿಯಬೇಕೆಂದೂ ಇವನು ಮೇಲಿಂದ ಮೇಲೆ ಫ್ರೆಂಚ್ ಸರಕಾರಕ್ಕೆ ಸಲಹೆ ಕೊಡುತ್ತಿದ್ದ. ಇದು 'ಗೆಸ್ಟೆಪೋ' ದಲದವರಿಗೆ ತಿಳಿದ ವಿಷಯವಾಗಿತ್ತು.

ರೂಸ್‌ನು ಜರ್ಮನಿಗೆ ಓಡಿ ಬಂದಕೂಡಲೇ ಜರ್ಮನ್ ಅಧಿಕಾರಿಗಳು ಇವನನ್ನು ಅಲ್ಲಿಯೇ ತಡೆಹಿಡಿದು ಯೋಗ್ಯ ಶಾಸನ ಮಾಡಬೇಕೆಂದು ಯೋಚಿಸಿದರು. ಆದರೆ ರೂಸ್‌ನು ಅತ್ಯಂತ ಪ್ರಸಂಗಾವಧಾನಿಯಾದ್ದರಿಂದ ಜರ್ಮನ್ ಅಧಿಕಾರಿಗಳ ಬೆದರಿಕೆಗೆ ಸೊಪ್ಪು ಹಾಕದೆ "ಅದು ಕೇವಲ ಸೋಗು; ಹಾಗೆ ಮಾಡದಿದ್ದರೆ ನನ್ನ ಮೇಲೆ ಫ್ರೆಂಚ್ ಸರಕಾರವು ಹೇಗೆ ವಿಶ್ವಾಸವನ್ನಿಡುತ್ತಿತ್ತು? ಮತ್ತು ಅವರ ಅವಿಶ್ವಾಸಕ್ಕೆ ಪಾತ್ರನಾಗಿದ್ದರೆ ಜರ್ಮನಿಗೆ ಅನುಕೂಲವಾಗುವಂತೆ ನಾನು ಚಟುವಟಿಕೆಗಳನ್ನು ನಡೆಸಲು ಹೇಗೆ ಸಾಧ್ಯ?" ಎಂದು ಮುಂತಾಗಿ ಹೇಳಿ ಅವರನ್ನು ಸಮಾಧಾನ ಪಡಿಸಿದ್ದ. ಅದರ ಪ್ರತಿಫಲವಾಗಿಯೋ ಏನೋ ಇವನು ಗುಪ್ತ ರೀತಿಯಲ್ಲಿ ಜರ್ಮನಿಗೆ ಫ್ರಾನ್ಸದ ಯುದ್ಧ ಚಟುವಟಿಕೆಗಳ ಬಗ್ಗೆಯೂ ರಾಯಿನ್‌ಲ್ಯಾಂಡ ಪ್ರದೇಶದಲ್ಲಿಯ ಸಂರಕ್ಷಕ ಯೋಜನೆಗಳ ವಿಷಯವಾಗಿಯೂ ಸಾರ್ ಪ್ರಾಂತದಲ್ಲಿಯ ಸಂರಕ್ಷಣೆಗಾಗಿ ಯೋಜಿಸಲ್ಪಟ್ಟ ಉಪಾಯಗಳ ವಿಷಯವಾಗಿಯೂ ಅನೇಕ ಮಹತ್ವದ ವಿವರಗಳನ್ನು ಜರ್ಮನಿಗೆ ಕಳುಹಿದ್ದ.

ಇವೆಲ್ಲವುಗಳನ್ನು ಅವನು ನೇರವಾಗಿ ಜರ್ಮನಿಯ ಗುಪ್ತ ಪೋಲೀಸರಿಗೆ ಕಳಿಸದೆ ಪ್ರೇಮದ ಪತ್ರಗಳೆಂದು ತನ್ನ ಗೆಳತಿಯರಾದ ಲ್ಯೂಸಿ ಬರ್ಜರ್, ಜೋಹಾನಾ ಮ್ಯುಲರ್ ಮತ್ತು ಎರಿಕಾ ಸ್ಕಲ್ಟ್ಜ ಇವರಿಗೆ ಬರೆಯುತ್ತಿದ್ದ. ಆದರೆ ಒಂದು ವೈಚಿತ್ರ್ಯವೆಂದರೆ ಎಲ್ಲರ ವಿಳಾಸಕ್ಕೂ ಪೋಸ್ಟಾಫೀಸಿನವರು ಕೊಟ್ಟಿದ್ದ ಡಬ್ಬಿಯ ಕ್ರಮಾಂಕವು ಒಂದೇ ಆಗಿತ್ತು.

ಚಾಣಾಕ್ಷರಾದ ಫ್ರೆಂಚ್ ಪೋಲೀಸರು ಶೋಧ ನಡೆಸಿ ಕೊನೆಗೆ ಈತನ ಮೇಲೆ ಕ್ರಮ ನಡೆಸಿ ಮೇಲೆ ಹೇಳಿದಂತೆ ೧೫ ವರ್ಷಗಳ ಶಿಕ್ಷೆಗೆ ಗುರಿ ಮಾಡಿದ್ದರು. ಆದರೆ ತಲೆತಪ್ಪಿಸಿಕೊಂಡು ಜರ್ಮನಿಗೆ ಓಡಿ ಹೋದ. ರೂಸ್‌ನು ತಿರುಗಿ ಫ್ರಾನ್ಸಕ್ಕೆ ಹೋಗಲು ಒಂದು ಅನುಕೂಲ ಸಂಧಿಯನ್ನು ಹುಡುಕುತ್ತಿದ್ದ.

೧೯೩೪ರಲ್ಲಿ ಫ್ರಾನ್ಸ ಮತ್ತು ಜರ್ಮನಿ ಈ ಎರಡೂ ದೇಶಗಳಲ್ಲಿಯ ವೈಮನಸ್ಸು ದೂರಾಗಿ ಸ್ನೇಹ ಬೆಳೆಯಲೆಂದು ಜರ್ಮನಿಯ ಸ್ಟ್ರೆಸ್‌ಮನ್ ಮತ್ತು ಫ್ರಾನ್ಸದ ಬ್ರಾಯಿಂಡ್ ಇವರೀರ್ವರೂ ಯತ್ನ ನಡೆಸಿದ್ದರು. ರೂಸ್‌ನಿಗೆ ಇದೊಳ್ಳೇ ಅನುಕೂಲ ಸಂಧಿ ದೊರೆತಂತಾಯಿತು. ಕೂಡಲೆ ಅವನು ಫ್ರಾನ್ಸಕ್ಕೆ ಹೋಗಿ ಫ್ರೆಂಚ್ ಪೋಲೀಸರ ಸ್ವಾಧೀನನಾದ. ಇವನನ್ನು ಬಂಧಿಸಿ ಮಿಲಿಟರಿ ಕೋರ್ಟಿನೆದುರು ಇವನನ್ನೊಯ್ಯದೆ ಅವನನ್ನು ಜ್ಯೂರಿ ಜನರ ನ್ಯಾಯಾಸನದೆದುರು ನಿಲ್ಲಿಸಲಾಯಿತು. ಆತನೇನೋ ತನ್ನ ಕೃತಿಗಳನ್ನು ಸಮರ್ಥಿಸಿಕೊಳ್ಳಲು ಅನೇಕ ಕಾರಣಗಳನ್ನು ಕಲ್ಪಿಸಿ ಹೇಳಿದ. ಆದರೆ ಜ್ಯೂರಿಗಳಿಗೆ ಸಮಾಧಾನವಾಗಲಿಲ್ಲ.

ಕೊನೆಯ ಉಪಾಯವನ್ನವಲಂಬಿಸಬೇಕೆಂದು ಅವನು ನಿರ್ಧರಿಸಿದ. ಫ್ರಾನ್ಸದಲ್ಲಿಯ ಸ್ತ್ರೀ ಪುರುಷರೆಲ್ಲರೂ ಜರ್ಮನಿ ಮತ್ತು ಫ್ರಾನ್ಸಗಳಲ್ಲಿ ಪರಸ್ಪರ ಸ್ನೇಹ ವರ್ಧನೆಯಾಗಬೇಕೆಂದು ಇಚ್ಛಿಸುತ್ತಿದ್ದುದು ರೂಸ್‌ನಿಗೆ ತಿಳಿದಿತ್ತು.

ಕೊನೆಗೆ ಎದ್ದು ನಿಂತು ಗದ್ಗದ ಕಂಠದಿಂದ ಹೇಳಲಾರಂಭಿಸಿದ:—

"ನಾನು ದೇಶದ್ರೋಹಿಯಲ್ಲ; ನನ್ನ ಮಾತೃಭೂಮಿಯಾದ ಫ್ರಾನ್ಸದ ಹಿತವೆಲ್ಲಿದೆ ಎಂಬುದನ್ನು ನಾನು ಬಲ್ಲೆ. ನನ್ನ ಬಂಧ ವಿಮೋಚನೆ ಮಾಡಿರಿ.

ಅಂದರೆ ನನ್ನಂತಹ ದೇಶ ಹಿತಚಿಂತಕನಿನ್ನೊಬ್ಬನಿಲ್ಲೆಂದು ನಾನು ಸಿದ್ಧಮಾಡಿ ತೋರಿಸುವೆ. ಅಲ್ಸೇಸ್ ಲೋರೇನ್‌ದ ಪ್ರಶ್ನೆಯು ಮೂಲಕ ನಮ್ಮ ವೈರಿಗಳು ಅದನ್ನೊಂದು ದೊಡ್ಡ ವಿಷಯುವನ್ನೇ ಮಾಡಿದ್ದಾರೆ. ಆದರೆ ಫ್ರಾನ್ಸದ ಉತ್ಕರ್ಷವು ಅಲ್ಸೇಸ್ ಲೋರೋನ್‌ದ ಸ್ವಾಯತ್ತತೆಯಲ್ಲಿದೆ. ಫ್ರಾನ್ಸ ಜರ್ಮನಿಗಳ ನಡುವೆ ಸ್ನೇಹವನ್ನು ಸ್ಥಾಪಿಸುವದರಿಂದಲೇ ನಮ್ಮ ಮಾತೃ ಭೂಮಿಯು ಉದ್ಧಾರವಾಗುವದು. ನನ್ನ ವಿಮೋಚನೆಯೇ ಫ್ರಾನ್ಸ ಜರ್ಮನಿಗಳ ನಡುವೆ ಸ್ನೇಹ ಬಂಧನಗಳ ಹೆಗ್ಗುರುತು. ನನ್ನ ಜೀವನವನ್ನು ನಾನು ಮಾತೃಭೂಮಿಯು ಸೇವೆಗಾಗಿ ಮುಡುಪಿಟ್ಟಿರುವೆನು. ಫ್ರಾನ್ಸಕ್ಕೆ ಜಯವಾಗಲಿ" ಎಂದು ಮುಂತಾಗಿ ಅಮೋಘವಾದ ಭಾಷಣ ಮಾಡಿದನು. ಜ್ಯೂರಿ ಜನರು ಭಾವನಾಪ್ರಧಾನರಿದ್ದರೆಂಬುದು ಅವನಿಗೆ ತಿಳಿದಿತ್ತು. ಅವನು 'ಫ್ರಾನ್ಸಕ್ಕೆ ಜಯವಾಗಲಿ' ಎಂದು ಘೋಷಿಸಿದ ಕೂಡಲೆ ಎಲ್ಲ ಜ್ಯೂರೀ ಜನರೂ ಎದ್ದು ನಿಂತು ತಾವೂ ಘೋಷಣೆ ಮಾಡಿದರು. ರೂಸ್‌ನು ಇದೇ ಸಂಧಿ ಸಾಧಿಸಿ ಫ್ರಾನ್ಸದ ರಾಷ್ಟ್ರ ಗೀತವನ್ನು ಪ್ರಾರಂಭಿಸಿದ. ಎಲ್ಲರೂ ಭಕ್ತಿಯಿಂದ ಅವನೊಡನೆ ಅನ್ನಲಾರಂಭಿಸಿದರು.

ಆಯಿತು. ಜರ್ಮನ್ ಪೋಲೀಸರ ಸಂಗಡ ನಡೆಸಿದಒಳಸಂಚು ಅವರಿಗೆ ಬರೆಯುತ್ತಿದ್ದ ಪತ್ರಗಳು ಮೊದಲಾದ ಎಲ್ಲ ಪುರಾವೆಗಳನ್ನು ಮರೆತು ಜ್ಯೂರಿ ಜನರು ಅವನನ್ನು ನಿರ್ದೋಷಿ ಎಂದು ಬಂಧಮುಕ್ತ ಮಾಡಿದರು.

ಮರು ದಿನವೇ ಅವನು ಹೆಚ್ಚು ಜಾಗರೂಕತೆಯಿಂದ ತನ್ನ ರಾಷ್ಟ್ರಕ್ಕೆ ಘಾತುಕವಾದ ಚಟುವಟಿಕೆಗಳನ್ನಾರಂಭಿಸಿದ. ಆದರೆ ಹೊರ ಹೊರಗೆ ಮಾತ್ರ ಅವನು ಕೇವಲ ಅಲ್ಸೇಸ್ ಲೋರೇನ್‌ದ ಸ್ವಾಯತ್ತತೆಗಾಗಿ ಕೆಲಸ ಮಾಡುವವನಂತೆ ನಟಿಸುತ್ತಿದ್ದ. ಅದು ಫ್ರೆಂಚ್ ಸರಕಾರಕ್ಕೆ ಬೇಡಾಗಿದ್ದರೂ ಅವನ ಚಟುವಟಿಕೆಗಳು ಮಾತ್ರ ಕಾಯಿದೆಗನುಸರಿಸಿಯೇ ನಡೆದಿದ್ದವಾದ್ದರಿಂದ ಅವರು ನಿರುಪಾಯುರಾಗಿದ್ದರು.

೧೯೩೬ನೇ ಮಾರ್ಚ ತಿಂಗಳಲ್ಲಿ 'ಲೋಕ್ಯಾರ್ನೋ ಒಪ್ಪಂದದ' ಕರಾರುಗಳಿಗೆ ವಿರುದ್ಧವಾಗಿ ರಾಯಿನ್ ಪ್ರದೇಶದಲ್ಲಿ ಹಿಟ್ಲರನು ತನ್ನ ಸೈನ್ಯವನ್ನು ಸಾಗಿಸಿದ ಕೂಡಲೆ ರೂಸ್‌ನ ಚಟುವಟಿಕೆಗಳು ಭರದಿಂದ

ಸಾಗಹತ್ತಿದವು. ಫ್ರಾನ್ಸವಾಗಲಿ ಅಥವಾ ಇಂಗ್ಲಂಡ ದೇಶವಾಗಲಿ ಏನನ್ನೂ ಮಾಡಲಾರವೆಂದೂ ಏನೂ ಆಲೋಚನೆ ಮಾಡದೆ ಆ ಪ್ರದೇಶವನ್ನು ಆಕ್ರಮಿಸಬಹುದೆಂದೂ ರೂಸ್‌ನು ಹಿಟ್ಲರನಿಗೆ ತಿಳುಹಿಸಿದ್ದನು. ಮತ್ತು ಆದ ಮತ್ತು ಆಗಬಹುದಾದ ಎಲ್ಲ ಸಿದ್ದತೆಗಳ ವರ್ಣನೆಯನ್ನು ಅವನಿಗೆ ಕಳುಹಿಸಿದನು. ಅದರ ಜೊತೆಗೆ ಫ್ರೆಂಚ್ ಸೈನ್ಯ, ಅದರ ಸಂಖ್ಯೆ, ಶಕ್ತಿ, ಯಾಂತ್ರಿಕ ಪಡೆ ಮೊದಲಾದವುಗಳ ವಿಷಯವಾಗಿ ವಿವರವಾಗಿ ಎಲ್ಲ ಸಂಗತಿಗಳನ್ನೂ ತಿಳಿಸಿದ್ದ. ಬಾಹ್ಯ ಪ್ರಪಂಚಕ್ಕಷ್ಟೇ ಏಕೆ, ಫ್ರಾನ್ಸ ಇಂಗ್ಲಂಡಗಳಿಗೆ ಗೊತ್ತಾಗುವ ಮೊದಲೇ ಜರ್ಮನ್ ಗೆಸ್ಟೆಪೋ ದಲವು ಈ ಎಲ್ಲ ವಿವರಗಳನ್ನೂ ತಿಳಿದುಕೊಂಡಿತ್ತು.

ಮತ್ತೊಂದು ಮುಖ್ಯ ಮಾತೆಂದರೆ ೧೯೧೮ರ ವರೆಗೆ ಅಲ್ಸೆಸ್ ಲೋರೇನ್ ಪ್ರಾಂತವು ಜರ್ಮನಿಯ ಅಧೀನದಲ್ಲಿದ್ದುದರಿಂದ ಆ ಪ್ರಾಂತವೇನೂ ಹೊಸದಿದ್ದಿಲ್ಲ. ಆದರೆ ೧೯೧೮ ರಿಂದ ಈಚೆಗೆ ಆ ಭಾಗದಲ್ಲಿ ನಿರ್ಮಿಸಿದ್ದ ದುರ್ಗಮವಾದ ಕೋಟೆಗಳ ವಿವರಗಳೂ ನಕಾಶೆಗಳೂ ರೇಖಾ ಚಿತ್ರಗಳೂ ಬೇಕಾಗಿದ್ದವು. ಆ ಪ್ರದೇಶವು ರೂಸ್‌ನ ವಸತಿ ಸ್ಥಾನ ವಾಗಿದ್ದುದರಿಂದ ಅವನು ವಿಶೇಷ ತೊಂದರೆ ಇಲ್ಲದೆ ತನ್ನ ಕೆಲಸ ವನ್ನಾರಂಭಿಸಿದ. ಜರ್ಮನಿಯು ಝೆಕೋಸ್ಲೋವಾಕಿಯಾದ ಮೇಲೇರಿ ಹೋದಾಗ ಹಿಟ್ಲರನಿಗೆ ರೂಸ್‌ನಿಂದ ದಿನಾಲೂ ವರದಿಗಳು ಬರಹತ್ತಿದವು ಮ್ಯಾಜಿನೋ ವ್ಯೂಹದ ಮತ್ತು ಅದರ ಸಮೀಪದಲ್ಲಿದ್ದ ಇತರ ಸಂಣ ಸಂಣ ಕೋಟೆಗಳ ವಿವರಗಳು ರೂಸ್‌ನ ಹಸ್ತಗತವಾದವು. ಅವುಗಳ ರೇಖಾ ಚಿತ್ರಗಳೂ ಭಾವಚಿತ್ರಗಳೂ ದೊರೆತವು. ಫ್ರಾನ್ಸದ ಯಾಂತ್ರಿಕ ದಲವೆಷ್ಟು? ವಿಮಾನಗಳೆಷ್ಟು? ಅವು ಯಾವ ಮಾದರಿಯವು? ರ್‍ಹಾಯಿನ್ ಪ್ರದೇಶದಲ್ಲಿ ಎಲ್ಲೆಲ್ಲಿ ಯಾಂತ್ರಿಕ ಸಿದ್ಧತೆ ಇದೆ? ಸೈನ್ಯ ಸಂಗ್ರಹಕ್ಕೆ ಆಜ್ಞೆ ದೊರೆತ ಕೂಡಲೆ ಎಷ್ಟು ಜನರು ಬರಬಹುದು? ಇವೇ ಮೊದಲಾದ ಜರ್ಮನಿಗೆ ಅವಶ್ಯವಿದ್ದ ಎಲ್ಲ ವಿವರಗಳನ್ನೂ ಇವನು ಹಿಟ್ಲರನಿಗೆ ಒಪ್ಪಿಸಿದ್ದನಲ್ಲದೆ ಝೆಕೋಸ್ಲೋವಾಕಿಯಾವನ್ನು ಸಹಜವಾಗಿ ಪ್ರವೇಶಿಸಬಹುದೆಂದೂ ಫ್ರಾನ್ಸದಲ್ಲಿ ಸೈನ್ಯದ ಚಟುವಟಿಕೆಗಳು ಕಂಡುಬಂದರೂ ಅವು ಕೇವಲ ತೋರಿಕೆಯವಿದ್ದು ಫ್ರೆಂಚ

ಸರಕಾರವು ಯುದ್ಧಕ್ಕೆ ಸಿದ್ಧವಿಲ್ಲವೆಂದೂ ತಿಳಿಸಿಬಿಟ್ಟ. ಇಷ್ಟೊಂದು ಅಮೌಲ್ಯ ವಿವರಗಳನ್ನು ಹೊಂದಿ ಜರ್ಮನಿಯು ತನ್ನ ಕರಾಳ ಹಸ್ತದಿಂದ ಝುಕ್‌ರನ್ನು ನಿರ್ನಾಮ ಮಾಡಲು ಹೊರಟಿತು.

ರೂಸ್‌ನ ಚಟುವಟಿಕೆಗಳು ಫ್ರಾನ್ಸ ದೇಶಕ್ಕೆ ಘಾತುಕವಾಗಿರುವವೆಂದು "ದ್ಯೂ ಕ್ಸ್ಟಿಯಮ್ ಬ್ಯೂರೋ" ದವರ ಮನವರಿಕೆಯಾಯಿತು. ಅವನನ್ನು ಹಾಗೇ ಬಿಟ್ಟರೆ ಫ್ರಾನ್ಸಕ್ಕೆ ಉಳಿಗಾಲವಿಲ್ಲೆಂದು ತಿಳಿದು ೧೯೩೦ರಲ್ಲಿ ಅವನನ್ನು ಬಂಧಿಸಲಾಯಿತು.

ಅವನ ಬಂಧನದ ನಂತರ ಇವನ ದೇಶದ್ರೋಹೀ ಚಟುವಟಿಕೆಗಳ ಪುರಾವೆಗಳೂ ಸಾಕಷ್ಟು ದೊರೆತವು. ಕೊನೆಗೆ ಅವನಿಗೆ ತನ್ನ ನಿರ್ದೋಷವನ್ನು ಸಿದ್ಧಪಡಿಸಲು ಓರ್ವ ಕಾಯಿದೆ ಪಂಡಿತರ ಸಹಾಯವನ್ನೂ ಕೊಡಲಾಯಿತು. ಆದರೆ ಚಾಣಾಕ್ಷರಾದ ಫ್ರೆಂಚ ಗುಪ್ತ ಪೋಲೀಸರು ಇವನು ಹಿಟ್ಲರನಿಗೆ ಕಳುಹಿದ ಗುಪ್ತ ವರದಿಗಳ ಪ್ರತಿಗಳನ್ನೂ ಛಾವಚಿತ್ರಗಳನ್ನೂ ರೇಖಾ ಚಿತ್ರಗಳನ್ನೂ ನ್ಯಾಯಸ್ಥಾನದೆದುರು ತಂದಿಟ್ಟರು. ರೂಸನೂ ತನ್ನ ಅಪರಾಧಗಳನ್ನು ಒಪ್ಪಿಕೊಂಡ. ಅವನಿಗೆ ಮರಣ ದಂಡನೆಯಾಯಿತು.

ಇನ್ನೂ ಅರುಣೋದಯವಾಗಿದ್ದಿಲ್ಲ. ನಸುಕಿನ ಮುಸುಕಿನಲ್ಲಿಯೇ ಮೋಟಾರ ಕಾರುಗಳೆರಡು ದೂರದ ಅಡವಿಯತ್ತ ಧಾವಿಸುತ್ತಿದ್ದವು. ಅಡವಿಯ ಮಧ್ಯದಲ್ಲಿಯೇ ಆ ಎರಡೂ ವಾಹನಗಳು ನಿಂತವು. ಓರ್ವ ಕೈದಿಯನ್ನು ಅವನ ಸಂಗಡಲಿದ್ದ ಸೈನ್ಯಾಧಿಕಾರಿಯು ಕೆಳಗಿಳಿಸಿದ. ಕೈದಿಯ ಕಣ್ಣುಗಳನ್ನು ಕಟ್ಟಲಾಗಿತ್ತು. ಒಂದು ಸ್ಥಳದಲ್ಲಿ ಆ ಕೈದಿಯನ್ನು ನಿಲ್ಲಿಸಿ ಸೈನ್ಯಾಧಿಕಾರಿಯು ಗುಂಡು ಹೊಡೆಯಲಿಕ್ಕೆ ಅಲ್ಲಿಯೇ ಸಿದ್ಧರಾಗಿ ನಿಂತಿದ್ದ ತನ್ನ ಸೈನಿಕರ ಪಡೆಯೊಂದಕ್ಕೆ ಅಜ್ಞೆ ಕೊಟ್ಟ.

ಒಂದೇ ಗುಂಡಿನಿಂದ ಕೈದಿಯ ಜೀವವು ದೇಹದಿಂದ ಹಾರಿಹೋಗಿತ್ತು. ಆ ಕೈದಿಯೇ ಫ್ರಾನ್ಸದ ಘಾತಮಾಡಿದ ಡಾ. ಕಾರ್ಲ್ ರೂಸ್!

೫. ಪೋಲಂಡದಲ್ಲಿಯ ಕಾರಸ್ಥಾನ

ಪೋಲಂಡದ ವಿಚ್ಛೇದ ಮಾಡುವದಕ್ಕಿಂತ ಸ್ವಲ್ಪೇ ದಿನಗಳ ಮೊದಲು ಜರ್ಮನಿಯು ಅದರ ಸಂಗಡ ಸ್ನೇಹದಿಂದಿರುವಂತೆ ನಟಿಸಿತ್ತು. ಆಪ್ತ ಮಿತ್ರರೆಂದು ಗೆಸ್ಟೆಪೋ:ದಲದವರು ಅನೇಕ ತರಹದ ಸೋಗಿನಿಂದ ಪೋಲಂಡದ ಸ್ಥಳ ಪರೀಕ್ಷೆ ಮಾಡಿಕೊಂಡು ಬಂದರು. ಪೋಲಿಶ್ ಜನರು ಜರ್ಮನರನ್ನು ತಮ್ಮ ಆಪ್ತ ಮಿತ್ರರಂತೆ ಕಾಣುತ್ತಿದ್ದರು. ಪಾಪ! ಜರ್ಮನರು ತಮ್ಮ ಮೇಲೆ ಅತ್ಯಾಚಾರ ಮಾಡುವರೆಂದು ಅವರಿ ಗೇನು ಗೊತ್ತು?

ಮೂರುವರೆ ಕೋಟಿ ಜನಸಂಖ್ಯೆ ೨೦ ಲಕ್ಷ ಸುಸಜ್ಜಿತ ಸೈನ್ಯವಿದ್ದ ಪೋಲಂಡ ದೇಶವನ್ನು ಯುರೋಪಖಂಡದ ನಕ್ಷೆಯೊಳಗಿಂದ ಹಿಟ್ಲರನು ಕೇವಲ ೧೫ ದಿನಗಳಲ್ಲಿ ಒರೆಸಿ ಒಗೆದನು.

ಪೋಲಂಡವು ಅಸಹಾಯ ಸ್ಥಿತಿಯಲ್ಲಿದ್ದಿಲ್ಲ. ಬ್ರಿಟನ್, ಫ್ರಾನ್ಸ, ಅಮೇರಿಕೆ ಮೊದಲಾದ ಲೋಕಸತ್ತಾತ್ಮಕ ರಾಷ್ಟ್ರಗಳ ಸಹಾಯದ ಆಶ್ವಾಸನವು ಅದಕ್ಕಿತ್ತು. ಆದರೂ ಜರ್ಮನಿಯ ಒತ್ತಡದಿಂದ ಅದು ಪಾರಾಗ ಲಿಲ್ಲ.

ಹಿಟ್ಲರನು ಝೆಕೋಸ್ಲೋವಾಕಿಯಾ ದೇಶವನ್ನು ನುಂಗುವಾಗ ತನ್ನ ಮೇಲೆಯೂ ಈ ಪ್ರಸಂಗವು ಬರದಿರದೆಂದು ಯೋಚಿಸದೆ, ಹಾವಿನ ಬಾಯಿಯಲ್ಲಿಯ ಕಪ್ಪೆಯು ಹಾವು ಬಾಯ್ತೆರೆದಾಗ ನೊಣನುಂಗಲು ಯತ್ನಿಸುವಂತೆ ಟೆಶಾನ್ ಪ್ರದೇಶವನ್ನು ಝೆಕೋಸ್ಲೋವಾಕಿಯಾದ ವಿಚ್ಛೇದದ ಕಾಲಕ್ಕೆ ಪೋಲಂಡವು ಹರಿದುಕೊಂಡಿತ್ತು. 'ಆಗಲಿ. ಮುಂದೆ ಎಲ್ಲವೂ ದೊರೆಯುವದು. ಈಗೇಕೆ ತಡವುವುದು?' ಎಂದು ಹಿಟ್ಲರನು ಆಗ ಯೋಚಿಸಿರಬಹುದು.

ಪೋಲ್ ಸೈನಿಕರು ವೀರರು. ಯುದ್ಧ ಕಲಾನಿಪುಣರು. ಅವರೂ ಅವರು ಸೋತುದು ಹೇಗೆ? ಅದೂ ಕೇವಲ ೧೫ ದಿನಗಳಲ್ಲಿ! ಇದೇನು ವಿಚಿತ್ರ? ಎಂದು ಯುುರೋಪದ ರಾಷ್ಟ್ರಗಳು ಬೆಚ್ಚಿ ಬಿದ್ದವು.

ಪೋಲ್ ಸೈನಿಕರು ಶೂರರೇನೋ ನಿಜ? ಆದರೆ ಸೈನ್ಯಾಧಿಕಾರಿಗಳು ಸ್ವಾರ್ಥಿಗಳೂ ವಿಲಾಸಪ್ರಿಯರೂ ಆದದ್ದರಿಂದ ಸಕಾಲಕ್ಕೆ ಯೋಗ್ಯಸಿದ್ಧತೆ ಮಾಡದ್ದರಿಂದ ಹೀಗಾಯಿತೆಂದು ಹಲವು ದೇಶಗಳು ನುಡಿದವು. ಪೋಲಂಡದ ಮೇಲೆ ಜರ್ಮನಿಯು ಭೀಕರ ಹಲ್ಲೆ ನಡೆಸಿದಾಗ ಹಿಂದಿನಿಂದ ಬಂದು ರಶಿಯವು ಪೋಲಂಡಕ್ಕೆ ಚೂರಿಹಾಕಿದ್ದರಿಂದ ಇಬ್ಬರು ಶತ್ರುಗಳನ್ನು ಏಕ ಕಾಲಕ್ಕೆ ಎದುರಿಸುವದು ಸಾಧ್ಯವಾಗದೆ ಹೋದುದರಿಂದ ಪೋಲಂಡವು ನಿರ್ನಾಮವಾಯಿತೆಂದು ಇನ್ನು ಹಲವರ ಅಭಿಪ್ರಾಯವಾಯಿತು. ಸಹಾಯದ ವಚನ ಕೊಟ್ಟಿದ್ದರೂ ಇಂಗ್ಲಂಡ, ಫ್ರಾನ್ಸ ದೇಶಗಳು ಸಕಾಲಕ್ಕೆ ಸಹಾಯವನ್ನೊದಗಿಸದ್ದರಿಂದ ಸೋಲುಂಟಾಯಿತೆಂದು ಹಲವು ನಿರೀಕ್ಷಕರು ನುಡಿದರು. ಆದರೆ ಇವೆಲ್ಲವುಗಳ ಜತೆಗೆ ಇನ್ನೂ ಒಂದು ಮಹತ್ವದ ಕಾರಣವಿತ್ತು.

ಜರ್ಮನ್ ಸೈನ್ಯವು ಪೋಲಂಡದ ಮೇಲೆ ದಂಡೆತ್ತಿ ಹೋಗುವದಕ್ಕಿಂತ ಮುಂಚೆ ಎರಡೂ ದೇಶಗಳೂ ಬಹು ಪ್ರೀತಿಯಿಂದಿರುವಂತೆ ತೋರುತಿತ್ತು. ಪೋಲಂಡದ ರಾಜಕಾರಣಿಗಳು ಮತ್ತು ಉಚ್ಚ ಅಧಿಕಾರಿಗಳು ಜರ್ಮನಿಗೂ ಜರ್ಮನಿಯ ಉಚ್ಚ ಅಧಿಕಾರಿಗಳು ಪೋಲಂಡಕ್ಕೂ ಆಗಾಗ್ಗೆ ಸ್ನೇಹಸಂವರ್ಧನೆಯ ದೃಷ್ಟಿಯಿಂದ ಪ್ರವಾಸಮಾಡಿ ಆ ಸರಕಾರಗಳ ಆದರಾತಿಥ್ಯವನ್ನು ಪಡೆದು ಬರುತ್ತಿದ್ದರು.

ಅಂತಹದೇ ಒಂದು ಸಂದರ್ಭ; ೧೯೩೯ನೇ ಫೆಬ್ರುವರಿ ೧೬ನೇ ತಾರೀಖಿನ ದಿನ ಪೋಲಂಡದ ರಾಜಧಾನಿಯಾದ 'ವಾರಸಾ' ಪಟ್ಟಣವು ತಳಿರು ತೋರಣಗಳಿಂದಲೂ ಧ್ವಜ ಪತಾಕೆಗಳಿಂದಲೂ ಶೋಭಾಯಮಾನವಾಗಿ ಕಾಣುತ್ತಿತ್ತು. ಮುಂಬರುವ ಗಂಡಾಂತರದ ಅರಿವಿಲ್ಲದ ಪೋಲ ನಾಗರಿಕನಂತೆ ಪೋಲಂಡದ ಗರುಡ ಧ್ವಜವು (ಇದು ಅವರ ರಾಷ್ಟ್ರೀಯ ಧ್ವಜ) ಜರ್ಮನಿಯ ಸ್ವಸ್ತಿಕ ಪತಾಕೆಯೊಂದಿಗೆ ಸಡಗರದಿಂದ ನಲಿಯುತ್ತಿತ್ತು. ವಾರಸಾದ ನಾಗರಿಕರಿಗೆ ಅದೊಂದು ಹಬ್ಬದ ದಿನ. ಎಲ್ಲೆಲ್ಲಿಯೂ ಆನಂದ ಉತ್ಸಾಹ

ಗಳೇ ಕಾಣುತ್ತಿದ್ದವು. ನಾಗರಿಕರು ತಮ್ಮ ನಿವಾಸಗಳನ್ನು ಸ್ವಸ್ತಿಕ ಮತ್ತು ಗರುಡ ಧ್ವಜಗಳಿಂದಲಂಕರಿಸಿದ್ದರು, ವಾರಸಾ ನಿಲ್ದಾಣವಂತೂ ಒಂದು ಅರಮನೆಯಂತೆ ವಿರಾಜಮಾನವಾಗಿತ್ತು. ಪೋಲಂಡದ ಅರಣ್ಯ ದಲ್ಲಿ ಬೇಟೆಯಾಡಲಿಕ್ಕೆಂದು ಹಿಮ್ಲರನು ತನ್ನ ಪರಿವಾರದೊಂದಿಗೆ ಬಂದಿದ್ದು ಈ ಆದರಣೀಯ ಮಿತ್ರನ ಸ್ವಾಗತಕ್ಕಾಗಿಯೇ ಪೋಲಂಡದ ಎಲ್ಲ ಅಧಿಕಾರಿ ಗಳು ಇಷ್ಟೊಂದು ಸಿದ್ಧತೆ ಮಾಡಿದ್ದರು.

ವೇಳೆಗೆ ಸರಿಯಾಗಿ ಬರ್ಲಿನ್ ಎಕ್ಸ್‌ಪ್ರೆಸ್ ಗಾಡಿಯು ನಿಲ್ದಾಣದಲ್ಲಿ ಬಂದು ನಿಂತಿತು. ಪೋಲಂಡದ ಪರವಾಗಿ ಜನರಲ್ ಝಾಮೋಸ್ಕಿಯವರು ಹಿಮ್ಲರ ಪರಿವಾರವನ್ನು ಸ್ವಾಗತಿಸಿದರು.

ಯಾವಾಗಲೂ ನಿರ್ವಿಕಾರ ಮುಖ ಮುದ್ರೆಯ ಹಿಮ್ಲರನು ಇಂದು ಅತ್ಯಂತ ಹಸನ್ಮುಖಿಯಾಗಿದ್ದನಲ್ಲದೆ ಆಗಾಗ್ಗೆ ತನ್ನ ಮಿತ್ರರ ಸಂಗಡ ಸರಸ ಸಲ್ಲಾಪಗಳನ್ನಾಡುತ್ತಿದ್ದ. ಅತಿಥಿಗಳ ಸ್ವಾಗತದ ನಂತರ ಪರಸ್ಪರ ಕುಶಲ ಪ್ರಶ್ನೆಗಳಾದವು. ಹಿಮ್ಲರನು ಪೋಲಂಡದ ಮುಖ್ಯಾಮಾತ್ಯನಿಗೂ ಮತ್ತು ಪರರಾಷ್ಟ್ರ ಮಂತ್ರಿಗೂ ಹಿಟ್ಲರ ಮತ್ತು ರಿಬೆನ್ ಟ್ರಾಪರ ವಂದನೆಗಳನ್ನರ್ಪಿ ಸಿದನು. ಎರಡೂ ದೇಶಗಳ ಇಭ್ರತಿಗೆ ಒಪ್ಪುವಂತಹ ಆದರಾತಿಥ್ಯದಿಂದ ಹಿಮ್ಲರನೂ ಅವನ ಪರಿವಾರವೂ ಹರ್ಷಭರಿತರಾದರು. ಪೋಲಂಡದ ಪರ ರಾಷ್ಟ್ರ ಮಂತ್ರಿಯಾಗಿದ್ದ ಕರ್ನಲ್ ಬೆಕ್‌ನಲ್ಲಿಗೆ ಹೋಗಿ ಯುರೋಪದ ರಾಜ ಕಾರಣದ ಬಗ್ಗೆ ಮನಬಿಚ್ಚಿ ಹರಟೆ ಹೊಡೆದ. ಸುಪ್ರಸಿದ್ಧ ಬಾಯುಲೋ ಶ್‌ಝಾ ಅರಣ್ಯಕ್ಕೆ ಬೇಟೆಯಾಡಲು ಹಿಮ್ಲರನು ತೆರಳಿದ. “ಪರದೇಶಕ್ಕೆ ಹೋದರೆ ನಾವು ಅಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡದಿದ್ದರೆ ನಮಗೆ ಸೊಗಸೇ ಉಂಟಾಗುವದಿಲ್ಲ” ವೆಂದು ಹಿಮ್ಲರನ ಪರಿವಾರದಲ್ಲಿಯ ಅನೇಕ “ಗೆಸ್ಟೆಪೋ” “ಜನರು ಹಿಂದುಳಿದು ಪ್ರೇಕ್ಷಣೀಯ” (ತಮ್ಮ ದೃಷ್ಟಿಯಿಂದ) ಸ್ಥಳಗಳತ್ತ ಗುಂಪುಗುಂಪಾಗಿ ತೆರಳಿದರು.

ಪೋಲಂಡದಲ್ಲಿಯ ಜರ್ಮನ್ ರಾಯಭಾರ ಕಚೇರಿಯ ಏಕಾಂತ ಸ್ಥಾನದಲ್ಲಿ ಜರ್ಮನ್ ರಾಯಭಾರಿಯಾದ ಹರ್ ಫಾನ್ ಮಾಲ್ಟಕಿಯೂ ಹಿಮ್ಲರನೂ ಒಳ್ಳೇ ಗೂಢವಿಚಾರದಲ್ಲಿದ್ದಂತೆ ತೋರುತ್ತಿತ್ತು. “ಒಳ

ಮುತ್ತಿಗೆಯುನ್ನು ಇಷ್ಟು ಚಾಣಾಕ್ಷತೆಯಿಂದ ನಡೆಸುತ್ತಿದ್ದೀರೆಂಬ ಕಲ್ಪನೆ ಸಹ ನನಗಿದ್ದಿಲ್ಲ. ಎಲ್ಲವೂ ಕಲ್ಪನೆಗಿಂತ ಚನ್ನಾಗಿ ನಡೆದಿದೆ. ಈ ಸುದ್ದಿಯನ್ನು ಕೇಳಿ ಹಿಟ್ಲರನು ನಿಶ್ಚಯವಾಗಿಯೂ ಸಂತೋಷಭರಿತನಾಗುವನು." ಎಂದು ನುಡಿದು ಹಿಮ್ಲರನು ಮೇಲೆದ್ದ.

" ಇನ್ನು ತಮ್ಮ ದರ್ಶನವೆಂದು?" ಎಂದು ರಾಯಭಾರಿಯು ಪ್ರಶ್ನೆ ಮಾಡಿದ. ಸಪ್ಟಂಬರ ಎರಡನೆಯ ವಾರದೊಳಗಾಗಿ ನಾವು ಇಲ್ಲಿ ಬಂದು ಮುಟ್ಟುವದು ಖಂಡಿತ. ಬಾಹ್ಯ ವ್ಯವಸ್ಥೆಯೆಲ್ಲವೂ ಮುಗಿಯುತ್ತ ಬಂದಿದೆ" ಎಂದು ಹಿಮ್ಲರನು ಉತ್ತರಕೊಟ್ಟ.

"ಪ್ರವಾಸವು ಯಶಸ್ವಿಯಾಯಿತೇ?" ಎಂದು ಕೇಳಿದಾಗ "ನನಗೆ ಬೇಕಾದ ಅಲ್ಪ ಸ್ವಲ್ಪ ವಿಷಯವು ತಿಳಿಯಿತಲ್ಲದೆ ನಮ್ಮ ಜನರು ಈವರಿ ಗೊಪ್ಪಿಸಿದ ಕೆಲಸವನ್ನು ಒಳ್ಳೇಯಶಸ್ವಿಯಾಗಿ ಕೊನೆಗಾಣಿಸಿದ್ದಾರೆ. ಅದರಿಂದ ಮುಂದಿನ ನಮ್ಮ ಕಾರ್ಯವು ಬಹು ಸುಲಭವಾಗುವದು. ನಾನು ಸ್ವತಃ ಎಲ್ಲೆಡೆಯಲ್ಲಿಯೂ ತಿರುಗಾಡಿದ್ದೇನೆ. ಆಯುಕಟ್ಟಿನ ಸ್ಥಳಗಳನ್ನು ನಿಶ್ಚಯಿಸಿದ್ದೇನೆ. ಎಲ್ಲಿ ತೋಫುಗಳನ್ನಿಡಬೇಕು, ಬಾಂಬಿನ ದಾಳಿಯನ್ನು ಯಾವಾಗ ಮತ್ತು ಎಲ್ಲಿ ಪ್ರಾರಂಭಿಸಬೇಕು, ನಮ್ಮ ಸೈನಿಕರು ಎಲ್ಲಿಂದ ಮುನ್ನುಗ್ಗಬೇಕು ನಮ್ಮ ಯಾಂತ್ರಿಕ ದಲವು ಹೇಗೆ ತನ್ನ ಚಟುವಟಿಕೆ ಗಳನ್ನು ನಡೆಸಬೇಕು. ಕೊಡೆ ವೈಮಾನಿಕನು ಎಲ್ಲಿಳಿಯಬೇಕು, ಯಾವ ಸ್ಥಳ ವನ್ನಾಕ್ರಮಿಸಿಕೊಳ್ಳಬೇಕು, ನಮ್ಮ ಧ್ವನಿವಾಹಕ ಯಂತ್ರಗಳನ್ನು ಎಲ್ಲಿ ಎಲ್ಲಿ ಮತ್ತು ಯಾವ ಅಂತರದ ಮೇಲೆ ಜೋಡಿಸಬೇಕು ಇವೇ ಮೊದಲಾದ ಸಂಗತಿಗಳನ್ನು ನಾನು ಇಲ್ಲಿಯ ಮೂರುದಿನಗಳ ತಿರುಗಾಟದ ಮೇಲಿಂದ ನಿಶ್ಚಿತ ಗೊಳಿಸಿದ್ದೇನೆ. ಪೋಲಂಡದ ಸೈನಿಕರೇಕೆ ಇಲ್ಲಿಯ ಪ್ರತಿಯೊಬ್ಬನ ಚಟುವಟಿ ಕೆಗಳನ್ನು ನೋಡಿಕೊಳ್ಳುವ ವ್ಯವಸ್ಥೆ ಮಾಡಿದ್ದೇನೆ. ಪೋಲಂಡವು ಮಿಸುಕಾ ಡುವಷ್ಟರಲ್ಲಿ ಅದನ್ನು ಜಬ್ಬುಮಾಡುವ ಏರ್ಪಾಡುಮಾಡಿದ್ದೇನೆ. ಆಗಲಿ, ಬೇಗನೆ ಸಪ್ಟೆಂಬರ ತಿಂಗಳಲ್ಲಿ ಮತ್ತೆ ಕಾಣುವಾ" ಎಂದು ಅವನ ನಿರೋಪ ಪಡೆದುಕೊಂಡು ಹಿಮ್ಲರನು ಬಂದು ಅಮಿತವಾದ ಸನ್ಮಾನ ಆದರಾತಿಥ್ಯಕ್ಕಾಗಿ ಪೋಲಿಶ್ ಅಧಿಕಾರಿಗಳ ಅಭಾರಮನ್ನಿಸಿದನಲ್ಲದೆ ಜರ್ಮನಿ ಪೋಲಂಡಗಳ

ಸ್ನೇಹವರ್ಧನೆಗೆ ಇಂತಹ ಸಂದರ್ಭಗಳು ಬಹುವಾಗಿ ಸಹಾಯ ಮಾಡು ತ್ತಿವೆ. ಎಂದು ಹೇಳಿ ಪೋಲಿಶ್ ಸರಕಾರದ ದೂರ ದೃಷ್ಟಿಗಾಗಿ ಅವನು ಮುಕ್ತ ಕಂಠದಿಂದ ಹೊಗಳಿದ. ಹಿಮ್ಲರನು ತಿರುಗಿ ಜರ್ಮನಿಗೆ ಬಂದ ನಂತರ ಜರ್ಮನಿಯ ಎಲ್ಲ ಪತ್ರಿಕೆಗಳೂ ಅಗ್ರಲೇಖಗಳನ್ನು ಬರೆದು ಈ ಎರಡೂ ದೇಶ ಗಳಲ್ಲಿ ಮಿತ್ರತ್ವವು ಎಷ್ಟು ಧೃಢವಾಗಿ ನೆಲೆಸುವದೆಂಬದನ್ನು ಸಾರಿ ಹೇಳಿದ ವಲ್ಲದೆ ಅಸೂಯಾಬುದ್ಧಿಯುಳ್ಳ ಫ್ರಾನ್ಸ ಇಂಗ್ಲಂಡಗಳು ಈ ಎರಡೂ ದೇಶಗಳಲ್ಲಿ ವಿತುಷ್ಟತೆಯನ್ನು ಹುಟ್ಟಿಸಬೇಕೆಂಬ ಇಚ್ಛೆಯಿಂದ ಅಲ್ಲದ ಸಲ್ಲದ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿವೆಯೆಂದೂ ಆ ದೇಶಗಳಿಗೆ ಹಿಮ್ಲರನ ಪೋಲಂಡ ದರ್ಶನವು ಮತ್ತು ಅಲ್ಲಿಯ ಸ್ನೇಹಯುಕ್ತ ವಾತಾವರಣವು ಒಳ್ಳೇ ಉತ್ತರವಾಗಿದೆ ಎಂದೂ ಸಾರಿದವು.

೬. ಯುಕ್ರೇನದಲ್ಲಿ ಸೈನ್ಯ ಸಿದ್ಧತೆ

ಹಿಟ್ಲರನು ಯುಕ್ರೇನಿಯನ್‌ರಿಗೆ ಎಲ್ಲ ತರಹದ ಅನುಕೂಲತೆಗಳನ್ನೊದಗಿಸಿ ಕೊಡಲು ತನ್ನ ಕಚೇರಿಯಲ್ಲಿ ಅಪ್ಪಣೆ ಕೊಟ್ಟಿದ್ದನು. ಅದರಂತೆ ಅವರೂ ಬರ್ಲಿನದಲ್ಲಿ ಒಂದು ಕಚೇರಿಯನ್ನು ತೆರೆದರು. ಪ್ರಚಾರ ಕಾರ್ಯವು ಭರದಿಂದ ಸಾಗಿತು; ಪೋಲಂಡದ ಯುಕ್ರೇನ ಭಾಗದಲ್ಲಿ ಹಸ್ತ ಪತ್ರಿಕೆಗಳು ಬರಲಾರಂಭಿಸಿದವು. ಎತ್ತರ ಪ್ರದೇಶಗಳಲ್ಲಿ ಯುಕ್ರೇನಿಯನರು ತಮ್ಮ ಪತಾಕೆಗಳನ್ನು ಹಚ್ಚಿದರು. "ಪೋಲಂಡದ ಅಧಃಪಾತವಾಗಲಿ; ಯುಕ್ರೇನವು ಯುಕ್ರೇನಿಯನರದು." ಎಂಬ ಘೋಷಣೆಗಳು ಅಲ್ಲಲ್ಲಿ ಕೇಳಬರಹತ್ತಿದವು.

ಯುಕ್ರೇನದ ಒಳನಾಡಿನಲ್ಲಿ ಪ್ರಚಾರಕಾರ್ಯ ನಡೆಸಬೇಕೆಂದು "ಸ್ವತಂತ್ರ ಯುಕ್ರೇನ" ದ ಚಟುವಟಿಕೆಗಳ ಪ್ರಮುಖನಾದ ಕರ್ನಲ್ ಕನೋವೆಲೆಕ್ ಎಂಬವನು ಯುಕ್ರೇನಕ್ಕೆ ಹೊರಟ. ಅವನಿಗೆ ಸಹಾಯಕ್ಕೆಂದು ಡಿಸಿವೊವ್ಹನೆಂಬ ರಶಿಯನ್‌ನು ಅವನನ್ನು ಕೂಡಿಕೊಂಡನು. ಡಿಸಿವೊವ್ಹನು ಸ್ವಲ್ಪೇ ದಿನಗಳಲ್ಲಿ ಯುಕ್ರೇನಿಯನ್ ಮುಂದಾಳುಗಳ ಸ್ನೇಹವನ್ನು ಸಂಪಾದಿಸಿ ಅವರ ವಿಶ್ವಾಸಕ್ಕೆ ಪಾತ್ರನಾಗಿದ್ದ. ಇಬ್ಬರೂ ಹಾಲಂಡದ ಸಮುದ್ರ ಕರಾವಳಿಯ ಒಂದು ಪಟ್ಟಣದಲ್ಲಿ ಇಕ್ಕಟ್ಟಾದ ದಾರಿಗುಂಟ ನಡೆದಾಗ ಡಿಸಿವೊವ್ಹನು ಕೋನೋವೆಲೆಕ್‌ನಿಗೆ "ನೀನು ಸಾಯಬೇಕ ಅಂದರೆ ನಮ್ಮ ದೇಶಕ್ಕೆ ಹಿತವಾಗುವದು." ಎಂದು ನುಡಿದನು. ಆತನು ಹುಡುಗಾಟಿಕೆ ಮಾಡುತ್ತಿರಬಹುದೆಂದು ಕೋನೋವೆಲೆಕ್‌ನು ಅವನ ಮಾತಿನ ಕಡೆಗೆ ಲಕ್ಷ್ಯಗೊಡದೆ ನಗುತ್ತ ಹಾಗೇ ಮುಂದೆ ಸಾಗಿದ. ಡಿಸಿವೊವ್ಹನ ಒಂದೇ ಗುಂಡಿನಿಂದ ಕೋನೋಪೆಲೆಕ್‌ನು ಸಿಡಿದುಬಿದ್ದ.

'ಗೆಸ್ಟಪೊ' ದಲದವರು ಆವನ ಮರಣದ ನಂತರ ಹತ್ಯಾಕಾರಿಯ ಶೋಧ ನಡೆಸಲು ಪ್ರಾರಂಭಿಸಿದರು. 'ಗೆಸ್ಟೆಪೊ" ದಲದ ಏಜಂಟನೆಂದು ಕೆಲಸ ಮಾಡುತ್ತಿದ್ದ ಡಿಸಿಮೊವ್ಹನು ರಶಿಯಾದ 'ಒಗ್ಪು' ದ ಗುಪ್ತಚಾರ ನೆಂದು ಹಿಂದಿನಿಂದ ತಿಳಿದು ಬಂದಿತು. ಈ ಘಟನೆಯಿಂದ ರೊಚ್ಚಿಗೆದ್ದ ಹಿಪ್ಲರನು ಜರ್ಮನಿಯಲ್ಲಿ ಒಳಸೇರಿದ್ದ ಪ್ರತಿಯೊಬ್ಬ ರಶಿಯನ್‌ನ ಪೂರ್ವೇತಿಹಾಸದ ಮತ್ತು ಆತನು ಜರ್ಮನಿಯಲ್ಲಿ ನಡೆಸಿದ ಚಟುವಟಿಕೆಗಳ ಮೇಲೆ ತೀಕ್ಷ್ಣ ದೃಷ್ಟಿಯನ್ನಿಡಲು 'ಗೆಸ್ಟೆಪೊ' ದಲಕ್ಕೆ ಆಜ್ಞೆ ಮಾಡಿದನು. 'ಗೆಸ್ಟೆಪೊ ದಲದ ಉಗ್ರ ಶಾಸನವನ್ನು ಎದುರಿಸಲಾರದೆ ಅನೇಕ ರಶಿಯನ್ನರು ಕೂಡಲೇ ಕಣ್ಮರೆಯಾದದ್ದು ಕಂಡು ಬಂದಿತು. ಕೋನೋವೆಲೆಕ್‌ನ ಸ್ಥಳದಲ್ಲಿ ಆ್ಯಂಡ್ರೀ ಮ್ಯಾಲ್ಯುಕ್‌ನು ಯುಕ್ರೇನದಲ್ಲಿಯ ಚಟುವಟಿಕೆಗಳ ಸೂತ್ರಧಾರನಾಗಿ ಹಿಮ್ಲರನು ಕೊಟ್ಟ ಪ್ರತಿಯೊಂದು ಆಜ್ಞೆಯನ್ನೂ ಅಕ್ಷರಶಃಪಾಲಿಸಲಾರಂಭಿಸಿದನು. ಯುಕ್ರೇನದ ಅನೇಕ ಭಾಗಗಳಲ್ಲಿ ಜರ್ಮನಿಯ ಹಣವು ಹರಿಯಹತ್ತಿತು. ತ್ವಾವ್, ಟ್ಯಾರ್ನೋಪೋಲ್ ಸ್ಟ್ಯಾನಿಸ್ಲೊವ್ ಮೊದಲಾದೆ ಯುಕ್ರೇನದ ಪ್ರಮುಖ ಕೇಂದ್ರಗಳಿಗೆ ಜರ್ಮನಿಯಿಂದ ಗುಪ್ತ ರೀತಿಯಿಂದ ಶಸ್ತ್ರಾಸ್ತ್ರಗಳು ಬರಲಾರಂಭಿಸಿದವು. ಹೆಸರು ಬದಲಿಸಿಕೊಂಡು ಆನೇಕ ಜನರು ಧ್ವನಿಕ್ಷೇಪಕ ಯಂತ್ರಗಳನ್ನೂ ಬೇರೆಯವರು ಟೆಲಿಫೋನಿನೊಳಗಿಂದ ಮಾತಾಡುವದನ್ನು ತಾವು ತಿಳಿದುಕೊಳ್ಳುವ ಯಂತ್ರಗಳನ್ನೂ ಕೈಯಿಂದ ಒಗೆಯುವ ಬಾಂಬುಗಳನ್ನೂ ಪಿಸ್ತೂಲುಗಳನ್ನೂ ತಮ್ಮ ಪ್ರವಾಸದ ಪೆಟ್ಟಿಗೆಗಳಲ್ಲಿ ತಂದು ತುಂಬಲಾರಂಭಿಸಿದರು. ಪೋಲಂಡದ ಕಡೆಗೆ ಒಲವಿದ್ದ ಯುಕ್ರೆನಿಯನ್ ಜನರ ಹೊಲಗಳ, ವಿಚಿತ್ರ ರೀತಿಯಿಂದ ಸುಟ್ಟು ಭಸ್ಮವಾಗಹತ್ತಿದವು. ಸ್ವತಂತ್ರ ಯುಕ್ರೇನಕ್ಕೆ ಸಕ್ರಿಯ ಸಹಾನುಭೂತಿಯನ್ನು ತೋರದ ಅನೇಕ ಜನರು ಮರಣ ದಂಡನೆಗೆ ಪಾತ್ರರಾಗಬೇಕಾಯಿತು. ಅಲ್ಲಲ್ಲಿ ಗಲಭೆಗಳಿಗಾರಂಭವಾಯಿತು. ಪೋಲಂಡದ ಸರಕಾರೀ ಅಧಿಕಾರಿಗಳ ಕಾರ್ಯಕ್ಕೆ ಮೇಲಿಂದ ಮೇಲೆ ತಡೆಯುಂಟಾಗಹತ್ತಿತು. ಪೋಲಜನರ ಶಾಲೆಗಳಿಗೆ ಪಿಸ್ತೂಲಿನ ಗುಂಡಿನ ಹೊಡೆತಗಳು ಬೀಳಲಾರಂಭಿಸಿದವು. ಪೋಲ್ ಜನರು ನಡೆಸಿದ ವ್ಯವಹಾರಕ್ಕೆ ಬಹಿಷ್ಕಾರವು ಸಾರಲ್ಪಟ್ಟಿತು. ಈ ಬಹಿಷ್ಕಾರಕ್ಕೆ ಅಡ್ಡಬಂದ ಯುಕ್ರೇನಿಯನ್‌ನ

ಪೈರುಗಳಿಗೆ ಬೆಂಕಿ ಬೀಳಲಾರಂಭಿಸಿತು. ತ್ಲಾವ್‌ದಲ್ಲಿ ಪ್ರವಾಸ ಮಾಡುತ್ತಿದ್ದ ಪೋಲಂಡದ ಮಂತ್ರಿಯಾದ ಪೀರೆಕ್ಕಿ ಇವನು ರೇಲ್ವೆ ಡಬ್ಬಿಯಲ್ಲಿಯೇ ಬಾಂಬಿನಿಂದ ಕೊಲ್ಲಲ್ಪಟ್ಟಿದ್ದನು. ಒಬ್ಬ ಒಕ್ಕಲಿಗನು ಇವನ ಹತ್ಯಾಕಾರಿಯಾಗಿದ್ದನು. ಅವನನ್ನು ಬಂಧಿಸಲಾಯಿತು. ಬಾಂಬಿನ ಶೋಧ ನಡೆದು ಅದನ್ನು ಕ್ರ್ಯಾಕೋ ವಿಶ್ವವಿದ್ಯಾಲಯದ ಓರ್ವ ವಿದ್ಯಾರ್ಥಿಯು ಸಿದ್ಧಪಡಿಸಿದ್ದನೆಂದೂ ಅದೇ ವಿದ್ಯಾರ್ಥಿಯು ಕೆಲವೇ ದಿನಗಳ ಮೊದಲು ಶಿಕ್ಷಣ ಪರ್ಯಟನಕ್ಕೆಂದು ಜರ್ಮನಿಗೆ ಹೋಗಿಬಂದಿದ್ದನೆಂದೂ ತಿಳಿದುಬಂತು.

ಜರ್ಮನಿಯ 'ಎಸ್. ಎ' ದಲದಂತೆ ಯುಕ್ರೇನದಲ್ಲಿಯೂ 'ಎಸ್ ಆಯ್. ಸಿ.' ದಲವು ಪ್ರಾರಂಭವಾಯಿತು. ಅದರ ಆಕ್ರಮ ಚಟುವಟಿಕೆಗಳು ಇಡೀ ಯುಕ್ರೇನವನ್ನೇ ಆವರಿಸಿದವು. ಆಸ್ಟ್ರಿಯಾದಲ್ಲಿಯ ಗೆಸ್ಟೆಪೋ' ಜನರು ಆಸ್ಟ್ರಿಯದ ಮೊದಲಿನ ಸೈನ್ಯಾಧಿಕಾರಿಗಳು (ಇವರು ಆಸ್ಟ್ರಿಯನ ಸಾಮ್ರಾಜ್ಯದ ಕಾಲಕ್ಕೆ ಪೂರ್ವ ಗ್ಯಾಲಿಸಿಯಾದಲ್ಲಿ ಕೆಲಸಮಾಡುತ್ತಿದ್ದುದರಿಂದ ಇವರಿಗೆ ಯುಕ್ರೇನದಲ್ಲಿಯ ಭಾಷೆ, ಆಚಾರ – ವಿಚಾರಗಳ ಸಂಪೂರ್ಣ ಜ್ಞಾನವಿತ್ತು.) ಇವರೇ ಮೊದಲಾದವರು ಪೂರ್ವ ಗ್ಯಾಲಿಸಿಯಾದಲ್ಲಿಯ ಎಣ್ಣೆಯ ಕಣಿಗಳತ್ತ ತಮ್ಮ ಚಟುವಟಿಕೆಗಳನ್ನಾರಂಭಿಸಿದರು. ಅವರಲ್ಲಿ ಹಲವರು ತಾವು ಎಂಜಿನಿಯರರೆಂದೂ ಹಲವರು ಖನಿಜಶಾಸ್ತ್ರಜ್ಞರೆಂದೂ ಇನ್ನು ಹಲವರು ಭಾಂಡವಲದಾರರೆಂದೂ ಅಲ್ಲಿ ತಮ್ಮ ಕೆಲಸವನ್ನಾರಂಭಿಸಿದರು. ಮತ್ತು ರಾತ್ರಿ ಸಮಯದಲ್ಲಿ 'ಎಸ್. ಆಯ್. ಸಿ.' ಜನರಿಗೆ ಸುತ್ತಲಿನ ಅರಣ್ಯದಲ್ಲಿ ಕವಾಯಿತು ಕಲಿಸುತ್ತಿದ್ದರಲ್ಲದೆ ಯುದ್ಧ ಶಿಕ್ಷಣವನ್ನು ಕೊಡಲಾರಂಭಿಸಿದರು.

ಹೀಗೆ ಯುಕ್ರೇನದಲ್ಲಿ ಗುಪ್ತವಾಗಿ ಒಂದು ಸೈನ್ಯ ಸಿದ್ಧವಾಗುತ್ತಿತ್ತು.

೨. ಯುಕ್ರೇನ ಪತನದ ಪ್ರಥಮ ಪ್ರವೇಶ

"ಯುಕ್ರೇನವು ಸ್ವತಂತ್ರವಾಗಿ ಬೃಹತ್ ಯುಕ್ರೇನ ರಾಷ್ಟ್ರವಾಗಿ ಮೆರೆಯುವ ಸವಿಗನಸುಗಳನ್ನು ಯುಕ್ರೇನಿಯನ್ನರು ಕಾಣಲಾರಂಭಿಸಿದರು.

ಮ್ಯೂನಿಕ್ ಒಪ್ಪಂದದ ನಂತರ ರುಥೆನಿಯಾ ಪ್ರಾಂತವು (ಕಾರ್ಪೇಥಿಯನ್ ಯುಕ್ರೇನ್) ಸ್ವತಂತ್ರವಾಗಿರುವದೆಂದು ಹಿಟ್ಲರನು ಸಾರಿದನು. ಪೋಲಂಡ ಜರ್ಮನಿಗಳಲ್ಲಿದ್ದ ಯುಕ್ರೇನದ ಒಳಸಂಚುಗಾರರು ಹರ್ಷಭರಿತರಾದರು. ಹಿಟ್ಲರನು ತನ್ನ ಮಾತಿನಂತೆ ನಡೆದೇ ನಡೆಯುವನೆಂಬುದಕ್ಕೆ ಅವರಿಗೆ ಇದೊಂದು ಸಾಕ್ಷಿಯಾದಂತಾಯಿತು. ಬೃಹತ್ ಯುಕ್ರೇನದ ನಿರ್ಮಾಣಕ್ಕೆ ಇದು ಪ್ರಥಮ ಸೋಪಾನವೆಂದು ಅವರು ತಿಳಿದುಕೊಂಡರು. ೧೯೩೯ರ ಮಾರ್ಚ ತಿಂಗಳಲ್ಲಿ ಈ ಪ್ರದೇಶವನ್ನು ಹಿಟ್ಲರನು ಹಂಗೇರಿಗೆ ಒಪ್ಪಿಸಬಹುದೆಂದು ಅವರಿಗೇನು ಗೊತ್ತು? ಪೋಲಂಡ ವಿರೋಧೀ ಚಟುವಟಿಕೆಗಳು ರುಥೇನಿಯದ ಮುಖ್ಯ ಪಟ್ಟಣವಾದ 'ಚಸ್ಟ'ದಲ್ಲಿ ರಭಸದಿಂದ ಪ್ರಾರಂಭವಾದವು. 'ಚಸ್ಟ'ದಲ್ಲಿಯ ಎಲ್ಲ ವಿಶ್ರಾಂತಿ ಗೃಹಗಳಲ್ಲಿಯೂ ಜರ್ಮನಿಯ ಗುಪ್ತಚಾರರ ಸುಳಿದಾಟವು ಹೆಚ್ಚಲಾರಂಭಿಸಿತು. ೧೯೩೯ನೇ ಜಾನೇವರಿಯಲ್ಲಿ ಪೋಲಂಡದಲ್ಲಿ ಯುಕ್ರೇನಿಯನರ ಚಟುವಟಿಕೆಗಳು ಒಂದು ಮೂರ್ತಸ್ವರೂಪವನ್ನು ತಳೆದವು. ಪೋಲಂಡದಲ್ಲಿ ಗುಪ್ತ ಮಾರ್ಗದಿಂದ ಶಸ್ತ್ರಾಸ್ತ್ರಗಳ ಆಯಾತಕ್ಕಾರಂಭವಾಯಿತು. ಯುಕ್ರೇನಿಯನ್ ಭಾಷೆಯಲ್ಲಿ ವ್ಹಿಯೆನ್ನಾ ರೇಡಿಓ ಸ್ಟೇಶನ್ನದಿಂದ ಭಾಷಣಗಳು ಸುರುವಾದವು. ಕಾರ್ಪೇಥಿಯನ್‌ದಿಂದ ಕಾಕೇಸಸ್‌ದವರೆಗೆ ಯುಕ್ರೇನದ ಸ್ವತಂತ್ರರಾಷ್ಟ್ರ ನಿರ್ಮಾಣವಾಗುವದೆಂದೂ ಯುಕ್ರೇನದ ಉದ್ಧಾರವು ಅದರಿಂದಲೇ ಆಗುವದೆಂದೂ ಪ್ರಚಾರ ನಡೆಯಿತು. ಪೋಲಂಡಕ್ಕೆ ಸಂಶಯ ಬರಬಾರದೆಂದು "ಕೇವಲ ಸೋವ್ಹಿಯೆಟ್

ರಶಿಯಾ" ದ ಭಾಗವನ್ನು ಮಾತ್ರ ಸ್ವತಂತ್ರ ಮಾಡಲಾಗುವದೆಂದು ಬಹಿರಂಗವಾಗಿ ಹೇಳಲಾಗುತ್ತಿತ್ತು. ಆದರೆ ಎಸ್. ಆಯ್. ಸಿ. ಜನರು ಮಾತ್ರ ಯುಕ್ರೇನಿಯನ್ನರ ಮನೆ ಮನೆಗೆ ಹೋಗಿ ಎಲ್ಲ ಯುಕ್ರೇಸಿಯನ್ನರೂ ಹಿಟ್ಲರನ ಸಹಾಯದಿಂದ ಸ್ವತಂತ್ರರಾಗುವರೆಂದು ಹೇಳಲಾರಂಭಿಸಿದರು.

ಈ ಮೊದಲೇ ಹೇಳಿದಂತೆ:ಪ್ಹಿ ಎನ್ನಾದೊಳಗಿನ ಒಂದು ಗ್ರಂಥ ಪ್ರಕಾಶನ ಸಮಿತಿಯು ಉದ್ರೇಕಕಾರಕ ಸಾಹಿತ್ಯವನ್ನು ಯುಕ್ರೇನಿಯನರ ಸಲುವಾಗಿ ಬರೆದು ಪ್ರಕಟಿಸಿತು. ಅವೆಲ್ಲವನ್ನೂ ಯುಕ್ರೇನದಲ್ಲಿ ಹಂಚಲಾಯಿತು. ಇಂತಹದೇ ಒಂದು ಚಿಕ್ಕ ಪುಸ್ತಕದಲ್ಲಿ "೧೯೩೯ನೇ ಶರದೃತುವಿನಲ್ಲಿ ಏಡೋಲ್ಫ ಹಿಟ್ಲರನ ೨೦,೦೦,೦೦೦ ಜನ ರಾಷ್ಟ್ರೀಯ ಸೈನಿಕರ ಸಹಾಯ ದಿಂದ ೪ ಕೋಟಿ ೫೦ ಲಕ್ಷ ಯುಕ್ರೇನಿಯರು ತಮ್ಮ ಸ್ವಾತಂತ್ರ್ಯವನ್ನು ಮರಳಿ ಪಡೆಯುವರು. ಈ ಕಾರ್ಯದಲ್ಲಿ ಪೋಲಂಡವಾಗಲಿ ರಶಿಯಾ ಆಗಲಿ ನಮ್ಮನ್ನು ತಡೆಯಲಾರು. ಒಂದು ವೇಳೆ ತಡೆದದ್ದೇ ಆದರೆ ನಾವು ಅದನ್ನು ಎದುರಿಸಬೇಕಾಗುವದು. ಆ ಸಂದರ್ಭದಲ್ಲಿ ಜರ್ಮನಿಯು ನಮಗೆ ಸಂಪೂರ್ಣ ಸಹಾಯಮಾಡುವದು. ಯುಕ್ರೇನದ ಸ್ವಾತಂತ್ರ್ಯವನ್ನು ಯಾರಾದರೂ ಅಲ್ಲಗಳೆದರೆ ಹಿಟ್ಲರನ ಅಚಲ ಇಚ್ಛೆಯನ್ನೂ ಜರ್ಮನಿಯ ವಿಮಾನ ಪಡೆಯನ್ನೂ ಯುಕ್ರೇನಿಯನ್ನರ ದೃಢಪ್ರತಿಜ್ಞೆಯನ್ನೂ ಎದುರಿಸಬೇಕಾಗುವದು" ಎಂದು ಬರೆದಿತ್ತು. ಇದಕ್ಕೆ ಪ್ರಿನ್ಸ್ ರಾಸುಮೊವ್ಸ್ಕಿ ಇವನ ಅಂಕಿತವಿತ್ತು. ಇವನಿಗೂ ಯುಕ್ರೇನದ ರಾಜಕಾರಣಕ್ಕೂ ಏನೂ ಸಂಬಂಧವಿರದಿದ್ದರೂ ಅವನ ಹೆಸರು ಕೇಳಿದ ಕೂಡಲೆ ಯುಕ್ರೆನಿಯನರು ಮಂತ್ರಮುಗ್ಧರಾದರು. ಯಾಕಂದರೆ ಇವನು ರಶಿಯಾದ ಝಾರಿನಾಳಾದ ಎಲಿಜಾಬೇತಳ ಗಂಡ ರಾಜಕುಮಾರ ರಾಸುಮೊವ್ಸ್ಕಿಯ ವಂಶಜ ನಾಗಿದ್ದನು. ಆ ರಾಜಕುಮಾರನು ೧೮ ನೇ ಶತಮಾನದ ಕೊನೆಯಲ್ಲಿ ಯುಕ್ರೇನದ ಕೊನೆಯ ನಾಯಕನಾಗಿದ್ದನು.

ಪ್ರಿನ್ಸ್ ರಾಸುಮೊವ್ಸ್ಕಿಯ ಅಂಕಿತದಿಂದ ಹೊರಟ ಪ್ರಕಟನೆಯಿಂದ ಯುಕ್ರೇನಿಯನರು ಸಂಪೂರ್ಣವಾಗಿ ಹಿಟ್ಲರನ ಬಲೆಯಲ್ಲಿ ಬಿದ್ದರು.

೧೯೩೯ನೇ ಸಪ್ಟೆಂಬರತಿಂಗಳು ಸಮೀಪಿಸುತ್ತ ನಡೆದಂತೆ ಪೋಲಂಡದ ಸೀಮೆಯಾಚೆಗೆ ಪಶ್ಚಿಮ ರಶಿಯವನ್ನು ಆಕ್ರಮಿಸುವ ಗುಪ್ತ ಕಾರಸ್ಥಾನವು ಒತ್ತರದಿಂದ ನಡೆಯಿತು. ಲೌವ್ [Lwow] ಪಟ್ಟಣದಲ್ಲಿ ಜರ್ಮನ್ ಪ್ರವಾಸಿಗಳ ಸಂಖೆ ದಿನಾಲು ಹೆಚ್ಚುತ್ತ ನಡೆಯಿತು. ಈ ಪ್ರವಾಸಿಗಳು ಸುತ್ತುಮುತ್ತಲಿನ ಪ್ರದೇಶದಲ್ಲಿ ಅಡ್ಡಾಡಿ ತಮಗೆ ಬೇಕಾದ ವಿವರಗಳನ್ನು ಕಲೆಹಾಕಿ ಪೋಲಂಡದಲ್ಲಿಯ ಜರ್ಮನ್ ರಾಯಭಾರ ಕಚೇರಿಯೊಡನೆ ಟೆಲಿಫೋನಿನ ಮುಖಾಂತರ ದೀರ್ಘಕಾಲದವರೆಗೆ ಸಂಭಾಷಣೆ ನಡೆಸಲಾರಂಭಿಸಿದರು. ಇವರೆಲ್ಲರ ವಸತಿಯು ಹೋಟೆಲ್ ಜಾರ್ಜೆಸ್ ಎಂಬ ವಸತಿಗೃಹದಲ್ಲಿ ಈ ಜನರು ಸುತ್ತಲೂ ಸ್ಥಳಪರೀಕ್ಷೆ ಮಾಡಿಕೊಂಡು ಬಂದನಂತರ ಆಯಾ ಪ್ರದೇಶದ ಪರಿಚಯವಿದ್ದ ಅಲ್ಲಿಯನಿವಾಸಿಗಳು ಈ ಪ್ರವಾಸಿಗಳನ್ನು ಕಾಣಲು ಬರಲಾರಂಭಿಸಿದರು. ಅವರೆಲ್ಲರಿಗೂ ಒಂದು ಸಂಜ್ಞೆಯು ಕೊಡಲ್ಪಟ್ಟಿತ್ತು. ಈ ಜನರು ತಾವು ಪ್ರವಾಸಿಗಳಿಗೆ ಸುತ್ತುಮುತ್ತಲಿನ ಪ್ರದೇಶವನ್ನು ತೋರಿಸಲು ಬಂದಿದ್ದೆವೆಂದು ಹೇಳುತ್ತಿದ್ದರು. ಇವರೆಲ್ಲರೂ ಯುಕ್ರೇನದಲ್ಲಿಯ 'ಗೆಸ್ಟೆಪೋ'ದಲದವರು. ಗುಪ್ತಕಾರಸ್ಥಾನದಲ್ಲಿ ನುರಿತವರು. ಮತ್ತು ಈ ಪ್ರದೇಶದಲ್ಲಿ ಹಣವನ್ನೂ ಶಸ್ತ್ರಗಳನ್ನೂ ಇತರ ಸಾಧನಗಳನ್ನೂ ಗುಪ್ತರೀತಿಯಿಂದ ಸಾಗಿಸುವಲ್ಲಿ ನಿಷ್ಣಾತರು. ವಿಶೇಷತಃ ಈ ಪ್ರದೇಶದಲ್ಲಿ ಹೀಗೆ ಹಣ ಮತ್ತು ಶಸಗಳನ್ನು ಸಾಗಿಸುವದು ಬಹಳ ಕಠಿಣವಿತ್ತು. ಯಾಕೆಂದರೆ ಒಂದು ಬದಿಗೆ ರಶಿಯಾದ ಗಡಿ ಸಂರಕ್ಷಕರ ಕಾಕದೃಷ್ಟಿ, ಇನ್ನೊಂದೆಡೆಗೆ ಪೋಲಂಡದ ಪೋಲೀಸರ ತೀಕ್ಷ್ಣದೃಷ್ಟಿ. ಇಂಥದರಲ್ಲಿಯೂ ಇವರಿಬ್ಬರಿಗೂ ಯುಕ್ರೇನದೊಳಗಿನ "ಗೆಸ್ಟೆಪೋ"ದಲದವರು ಇಂಗು ಹಚ್ಚುತ್ತಿದ್ದರು.

ಹೀಗೆ ಬಿಡುವಿಲ್ಲದ ಪ್ರಚಾರದಿಂದ ಮತ್ತು ತಡೆಯಿಲ್ಲದ ಒಳಸಂಚಿನಲ್ಲಿ ಇಚ್ಛಿತ ಫಲವನ್ನು ಪಡೆಯುವ ಚಿನ್ಹಗಳು ಹಿಟ್ಲರನಿಗೆ ತೋರಲಾರಂಭಿಸಿದವು. ಯುಕ್ರೇನದಲ್ಲಿಯ ಗುಪ್ತ ರೇಡಿಓ ಸ್ಟೇಶನ್ನುಗಳಿಂದ ಅಲ್ಲಿ ನಡೆದ ಚಟುವಟಿಕೆಗಳ ಸುದ್ದಿಗಳು ಎಡೆಬಿಡದೆ ಜರ್ಮನಿಗೆ ಬರಲಾರಂಭಿಸಿದವು. ಯುಕ್ರೇನದಲ್ಲಿ ಕೊಲೆಸುಲಿಗೆಗಳ ಸಂಖ್ಯೆಯು ದಿನಾಲು ಹೆಚ್ಚಲಾರಂಭಿಸಿತು. ಕೀವ್ದಿಂದ ಮಾಸ್ಕೋಕ್ಕೆ ಹೊರಟಿದ್ದ ಕ್ರುಕ್‌ಟಾವ್ಹ ಎಂಬ ಕಮ್ಯುನಿಸ್ಟ ಪಕ್ಷದ ಕಾರ್ಯದರ್ಶಿಯು ಬಾಂಬಿನಿಂದ ಎಸೆಯಲ್ಪಟ್ಟನು. ಈತನು ರಶಿಯಾದ

ಸ್ಟಾಲಿನ್‌ನ ಆಪ್ತಮಿತ್ರನು. ಯುಕ್ರೇನಕ್ಕೆ ಈತನ ಸಂಬಂಧವಿರದಿದ್ದರೂ "ಟ್ರಾಟ್ಸ್ಕಿ" ಪಕ್ಷದವರ ನಿರ್ಮೂಲನೆಗೆಂದು ೧೯೩೮ರಲ್ಲಿ ಸ್ಟಾಲಿನ್‌ನು ಈತನನ್ನು ಯುಕ್ರೇನಕ್ಕೆ ಕಳುಹಿದ್ದನು. ಈತನು "ಟ್ರಾಟ್ಸ್ಕಿ" ಪಕ್ಷದವರನ್ನು ನಿರ್ನಾಮ ಮಾಡಲು ಸಹಸ್ರಾವಧಿ ಜನರ ಆಹುತಿ ತೆಗೆದುಕೊಂಡು ಯುಕ್ರೇನದಲ್ಲಿ "ಕೊಲೆಗಡುಕ"ನೆಂದು ಹೆಸರುಗೆಟ್ಟಿದ್ದ.

ಫೆಬ್ರುವರಿ ೨೬ನೇ ತಾರೀಖಿನ ದಿನ ತನ್ನ ಇಬ್ಬರು ಸಹಾಯಕರೊಡನೆ ಮಾತನಾಡುತ್ತ ತನ್ನ ಡಬ್ಬಿಯ ಹತ್ತಿರ ನಿಂತಿದ್ದ. ಮಾಸ್ಕೋ ಎಕ್ಸ್‌ಪ್ರೆಸ್ ಗಾಡಿಯು ಬಿಡುವ ವೇಳೆಯೂ ಆಗಿತ್ತು. ಒಬ್ಬ ರೇಲ್ವೇ ಕೂಲಿಯು ಮಾಸ್ಕೋ ಎಕ್ಸ್‌ಪ್ರೆಸ್ ಗಾಡಿಗೆ ಜೋಡಿಸಲ್ಪಟ್ಟಿದ್ದ ಡಬ್ಬಿಗಳ ಗಾಲಿಗಳನ್ನು ತನ್ನ ಉದ್ದವಾದ ಸುತ್ತಿಗೆಯಿಂದ ಬಡಿದು ನೋಡುತ್ತ ನಡೆದಿದ್ದ. ಕ್ರುಕ್‌ಟಾವ್‌ನು ಕುಳಿತ ಡಬ್ಬಿಯ ಸಮೀಪಕ್ಕೆ ಬಂದು ಆ ಡಬ್ಬಿಯ ಗಾಲಿಗಳನ್ನು ಪರೀಕ್ಷಿಸಿ ಎದ್ದು ನಿಂತ. ಮರುಕ್ಷಣದಲ್ಲಿಯೇ ತನ್ನ ಕೈಯಲ್ಲಿದ್ದ ಒಂದು ಕಪ್ಪು ವಸ್ತುವನ್ನು ಕ್ರುಕ್‌ಟಾವ್‌ನ ದಿಶೆಯಲ್ಲಿ ಎಸೆದ. ಸುತ್ತಿಗೆಯೇ ಅವನ ಕೈಯಿಂದ ಜಾರಿರಬೇಕೆಂದು ಆ ಗಾಡಿಯ ಗಾರ್ಡನಿಗೆನಿಸಿತು. ರೇಲ್ವೆ ನಿಲ್ದಾಣದೊಳಗಿನ ಎಲ್ಲ ಸಪ್ಪಳವೂ ಒಂದು ಸ್ಫೋಟದ ಸಪ್ಪಳದಲ್ಲಡಗಿಹೋಯಿತು. ಮಾಸ್ಕೋ ಎಕ್ಸ್‌ಪ್ರೆಸ್ ಗಾಡಿಯ ಕಿಡಿಕಿಗಳು ಒಡೆದು ನುಚ್ಚು ನೂರಾಗಿದ್ದವು. ಹೊಗೆಯು ಹೋಗಿ ನಿಲ್ದಾಣವು ಸ್ವಚ್ಛವಾದಾಗ ಪ್ಲಾಟ್‌ಫಾರ್ಮಿನ ಮೇಲೆ ಮೂರು ಹೆಣಗಳು ಬಿದ್ದಿದ್ದವು. ಕ್ರುಕ್‌ಟಾವ್‌ನಿಗೆ ಕೇವಲ ಸಣ್ಣಪುಟ್ಟ ಗಾಯಗಳಾಗಿದ್ದವು. ಆದರೆ ಅವನ ಇಬ್ಬರೂ ಸಹಾಯಕರೂ ಮತ್ತು ಆ ಬಾಂಬ ಒಗೆದವನೂ ಮರಣಹೊಂದಿದ್ದರು, ಆ ಬಾಂಬು ಒಗೆದವನು ರೇಲ್ವೆ ಕೂಲಿಯ ಸಮವಸ್ತ್ರದಲ್ಲಿದ್ದರೂ ಆ ಸಮವಸ್ತ್ರವು ಕೃತ್ರಿಮವೆಂದೂ ಅವನು ಡ್ಯಾಂಝಿಗ್‌ದಲ್ಲಿಯ ಹತ್ಯಾಕಾರಿ ಚಟುವಟಿಕೆಗಾರರಲ್ಲೊಬ್ಬನೆಂದೂ ಕೆಲವೇ ದಿನಗಳ ಮೊದಲು ಆತನು "ಲೌವ್" ಪಟ್ಟಣಕ್ಕೆ ಬಂದಿದ್ದನೆಂದೂ ಈ ಸಂಧಿ ಸಾಧಿಸಿ ಅಲ್ಲಿ ತನ್ನ ಕೈ ಚಮಕ ನಡೆಸಿದನೆಂದೂ ಶೋಧಾನಂತರ ತಿಳಿಯಿತು.

೮. ಪೋಲಂಡದ ಮೇಲೆ ಜರ್ಮನಿಯ ದಾಳಿ

ಪೋಲಂಡದ ಮೇಲೆ ದಾಳಿಗಾರಂಭವಾಯಿತು. ಪೋಲಂಡ ಸರಕಾರದ ಪ್ರತಿಯೊಂದು ಶಾಖೆಯಲ್ಲಿಯೂ ಜರ್ಮನಿಯ ಗುಪ್ತ ಹೇರರು ಅವಿತು ಕೊಂಡಿದ್ದರು. ಜರ್ಮನ್ ಸೈನ್ಯವು ಕಾರಿಡೋರದ ಮುಖಾಂತರ ಒಳನುಗ್ಗಿದಕೂಡಲೇ ಪೋಲಿಶ್ ಸೈನಿಕರ ಪ್ರತಿಯೊಂದು ಚಲನವಲನವು ವಾಯರಲೆಸ್‌ದ ಮುಖಾಂತರ ಈ ಗುಪ್ತ ಹೇರರಿಂದ ಜರ್ಮನರಿಗೆ ತಿಳಿಸಲ್ಪಡುತ್ತಿತ್ತು.

ಯುಕ್ರೇನದಲ್ಲಿ ಸೋವ್ಹಿಯಟ್ ಅಧಿಕಾರಿಗಳ ಹಾಗೂ ಜನನಾಯಕರ ಕೊಲೆಗಳಾಗಹತ್ತಿದವು. ರುಥೇನಿಯಾ ಪ್ರಾಂತವನ್ನು ಹಂಗೇರಿಯು ಯುಕ್ರೇನದಿಂದ ಸೆಳೆದುಕೊಂಡಿತು. ರುಥೇನಿಯದ ರಾಜಧಾನಿಯಾದ ಚಸ್ಟ್‌ದಿಂದ ಹಿಟ್ಲರನಿಂದ ನಿಯಮಿಸಲ್ಪಟ್ಟ ಮೂ. ವೊಲೊಸಿನ್‌ನು ಈ ಜನರ ಅತ್ಯಾಚಾರಕ್ಕೆ ಹೆದರಿ ಪಲಾಯನ ಮಾಡಿದನು. ಜರ್ಮನ್ ಶಿಕ್ಷಕರಿಂದ ಶಿಕ್ಷಣ ಪಡೆದು ಮತ್ತು 'ಗೆಸ್ಟೆಪೋ' ದಲದಿಂದ ರಾಜಕೀಯ ಚಟುವಟಿಕೆಗಳ ತರಬೇತಿಯನ್ನು ಹೊಂದಿದ ಯುಕ್ರೇನಿಯನ್ ಸ್ವಯಂಸೇವಕರು ಹಿಟ್ಲರನ ತಂತ್ರವನ್ನರಿಯದೆ ಹಂಗೇರಿ ಸೈನ್ಯದ ಗುಂಡಿನ ಬಾಯಿಗೆ ತುತ್ತಾಗಹತ್ತಿದರು. ಆದರೂ ಹಿಟ್ಲರನು ತಮಗೆ ಮೋಸ ಮಾಡುತ್ತಿರುವನೆಂದು ಅವರಿಗನಿಸಿರಲಿಲ್ಲ. ಆ್ಯಂಡ್ರೀಜ್ ಮ್ಯಾಲ್ಯುಕ್‌ನಂತಹ ಒಬ್ಬಿಬ್ಬರು ಈ ಕುಟಿಲ ನೀತಿಯನ್ನು ಕಂಡುಹಿಡಿದು ಸದ್ದಿಲ್ಲದೆ ಒಂದುದಿನ ಜರ್ಮನಿಯನ್ನು ಬಿಟ್ಟು ಓಡಿಹೋಗಿ ಫ್ರಾನ್ಸ್ ದೇಶದಲ್ಲಿ ಅಡಗಿಕೊಂಡರು.

ಆದರೆ ಚಾಣಾಕ್ಷನಾದ ಹಿಮ್ಲರನು ಬರ್ಲಿನದಲ್ಲಿಯ ಇತರ ಎಲ್ಲ ಯುಕ್ರೇನಿಯನ್ ಮುಂದಾಳುಗಳನ್ನು ಕರೆದು ಆ್ಯಂಡ್ರೀಜನಿಗೆ ರಾಜಕಾರಣದ

ಗಂಧವು ಕೂಡ ಇಲ್ಲವೆಂದೂ ಹಂಗೇರಿಗೆ ಈ ರೀತಿ ರುಥೇನಿಯಾ ಪ್ರದೇಶ ವನ್ನು ಕೊಟ್ಟದ್ದು ರಾಜಕಾರಣದಲ್ಲಿಯು ಒಂದು ಗತ್ತು ಇರುವದೆಂದೂ ಹೇಳಿ ಅವರನ್ನು ಸಂತೈಸಿದನು ಮತ್ತು ಯುಕ್ರೇನವು ಸಂಪೂರ್ಣ ಸ್ವತಂತ್ರ ಆಗುವದೆಂದು ಸಾರಿದನಲ್ಲದೆ ಆ್ಯಂಡ್ರ್ರೀಜನಂತೆ ಯಾರೂ ವಿಶ್ವಾಸಘಾತ ಮಾಡಕೂಡದೆಂದು ಎಚ್ಚರಿಕೆಯನ್ನೂ ಕೊಟ್ಟನು. ಹಿಟ್ಲರನ ಸಭೆಗೆ ಬಂದ ಎಲ್ಲ ಯುಕ್ರೇನಿಯನ್‌ರೂ ಸಂತೋಷಭರಿತರಾಗಿ ಹಿಂತಿರುಗಿದರು. ಅವರ ಮನದಲ್ಲಿ ಮೂಡುತ್ತಿದ್ದ ಸಂಶಯವು ಮಾಯವಾಯಿತು. ಆ್ಯಂಡ್ರ್ರೀಜನು ದೇಶದ್ರೋಹಿ ಎಂದು ಸಾರಲ್ಪಟ್ಟು ತೆರವಾದ ಅವನ ಸ್ಥಳವನ್ನು ಮತ್ತೊಬ್ಬ ಹತ್ಯಾಕಾರಿಯು ಆಕ್ರಮಿಸಿದನು.

ಕಾರಿಡೋರ ಮತ್ತು ಅಪರ್ ಸೈಲೇಶಿಯಾ ಮತ್ತು ಸ್ಲೋವಾಕಿಯಾದ ಮುಖಾಂತರ ಜರ್ಮನ ಸೈನ್ಯವು ಪೋಲಂಡದ ಮೇಲೆ ದಾಳಿಯನ್ನು ಪ್ರಾರಂಭಿಸಿತು. ವರ್ಷಾಕಾಲದ ಮೇಘಮಾಲೆಯಂತೆ ಜರ್ಮನ್ ವಿಮಾನ ಪಡೆಯು ಒಂದೇ ಸವನೆ ಬರುತ್ತ ಪ್ರಳಯಕಾಲದ ಮಾರುತನಂತೆ ಪೋಲಂಡ ವನ್ನಾವರಿಸಿ ಸರ್ವ ನಾಶ ಮಾಡಿತು. ಅಸಹಾಯ ಅಬಲೆಯರೂ ಅರ್ಭಕರೂ ಈ ಅಬ್ಬರದ ಒಬ್ಬೆಗೆ ಆಹುತಿಯಾಗಹತ್ತಿದರು. ೧೦ ಲಕ್ಷದ ವರೆಗಿದ್ದ ಹಿಟ್ಲರನ ಯುಕ್ರೇನಿಯನ್‌ರು ಜರ್ಮನ ಸೈನ್ಯಕ್ಕೆ ಸಹಾಯಕರಾದರು. ಪ್ರತ್ಯಕ್ಷ ಕಾರ್ಯ ಮಾಡಲು ಹಾತೊರೆಯುತ್ತಿದ್ದ ಅನೇಕ ಹತ್ಯಾಕಾರಿಗಳನ್ನು ಯುದ್ಧವು ಪ್ರಾರಂಭವಾಗುವದಕ್ಕಿಂತ ಕೆಲವೇ ದಿನ ಮೊದಲು ಪೋಲಂಡದಲ್ಲಿ ಕಳುಹಲಾಗಿತ್ತು. "ಪ್ರತಿಯೊಬ್ಬ ಯುಕ್ರೇನಿಯನ್‌ನೂ ಸಪ್ಟೆಂಬರ ೧ನೇ ತಾರೀಖಿನ ದಿನ ರಾತ್ರಿ ತನಗೆ ಗೊತ್ತು ಮಾಡಿದ ಸ್ಥಳದಲ್ಲಿ ಸಿದ್ಧನಾಗಿರ ಬೇಕೆ"ಂಬ ಆಜ್ಞೆಯು ಹೊರಬಿತ್ತು. ಆದರೆ ಈ ಗಂಡಾಂತರವು ಇನ್ನೂ ತಪ್ಪಬಹುದೆಂದು ಪೋಲಂಡ್ ಸರಕಾರವು ಆಶಿಸುತ್ತಿತ್ತು.

ಪೋಲಂಡ್ ಸರಕಾರದ ನೌಕರಿಯುಲ್ಲಿದ್ದ ಅಸಂಖ್ಯ ಯುಕ್ರೇನಿಯನ್ ಸ್ವಯಂ ಸೇವಕರು ಆಗಸ್ಟ ೩೧ನೇ ತಾರೀಖಿನ ದಿವಸ ಒಂದಿಲ್ಲೊಂದು ನೆವ ಹೇಳಿ ತಮ್ಮ ಕೆಲಸವನ್ನು ತಪ್ಪಿಸಿದ್ದರು. ಬಚ್ಚಿಟ್ಟ ರೇಡಿಯೋ ಯಂತ್ರಗಳು ಕೆಲಸ ಮಾಡಲಾರಂಭಿಸಿದವು. ಟೆಲಿಫೋನ ಮತ್ತು ಟೆಲಿಗ್ರಾಫ್‌ದ

ತಂತಿಗಳನ್ನು ಅಲ್ಲಲ್ಲಿ ಕತ್ತರಿಸಲು ಬೇಕಾದ ಸಾಧನ ಸಲಕರಣೆ
ಗಳನ್ನು ಸಿದ್ಧಪಡಿಸಲಾಯಿತು.

ಜರ್ಮನ್ ಟ್ಯಾಂಕ್ ಪಡೆಯು ಪ್ರವೇಶಿಸಬೇಕಾಗಿದ್ದ ಸೀಮಾ ಪ್ರದೇಶ
ದಲ್ಲಿದ್ದ ಚರ್ಚುಗಳ ಗೋಪುರಗಳು ಸಂಜ್ಞಾಗೃಹಗಳಾಗಿ ಮಾರ್ಪಡಿಸ
ಲ್ಪಟ್ಟವು. ಹಲ ಕೆಲವು ಸಾರಿ ಪೋಲಿಷ್ ಪೋಲೀಸರು ಈ ಗುಪ್ತಚಾ
ರರನ್ನು ಶೋಧಿಸಿ ಅವರನ್ನು ಗುಂಡಿಕ್ಕಿ ಕೊಲ್ಲ ಹತ್ತಿದರು. ಆದರೂ ಅದರ
ಉಪಯೋಗವೇನೂ ಆಗಲಿಲ್ಲ. ಬೇನೆಯು ಬೇರೂರಿ ಬಿಟ್ಟಿತ್ತು. ಒಬ್ಬನು
ಹೋದರೆ ಅವನ ಸ್ಥಳವನ್ನು ತುಂಬಲು ಹತ್ತು ಜನರು ಬರುತ್ತಿದ್ದರು.
ಅಷ್ಟೊಂದು ಶಿಸ್ತನ್ನು ಹಿಮ್ಲರನು ಅವರಿಗೆ ಕಲಿಸಿದ್ದ. ವಾರಸಾ, ಲಾಡ್ಝ್
ಬ್ರೆಸ್ಟ್‌ಲಿಟೋವ್ಸ್ಕ, ಕ್ರಾಕೌ, ಲ್ಯೂಬಿನ್ ಮೊದಲಾದ ಪಟ್ಟಣಗಳಲ್ಲಿ
ಇಂಥ ಸಹಸ್ರಾವಧಿ ಗುಪ್ತಚಾರರು ಅಡ್ಡಿ ಆತಂಕಗಳಿಲ್ಲದೆ ತಮ್ಮ ಕೆಲಸ
ನಡೆಸಿದ್ದರು. ಸಪ್ಟೆಂಬರ ೧ನೇ ತಾರೀಖಿನ ದಿನ ಒಂದು ಅಜ್ಞಾತ ರೇಡಿಯೋ
ಸ್ಟೇಶನ್ನು ಪೋಲಂಡದ ಮನೆ ಮನೆಯಲ್ಲಿ ತನ್ನ ಅಸ್ತಿತ್ವವನ್ನು ತೋರಿತು
ಪೋಲಂಡದ ಪತ್ರಿಕೆಗಳಲ್ಲಿ ದ್ರೋಹದ ವಾತಾವರಣವು ಪಸರಿಸಿತ್ತು.
ಪ್ರಮುಖ ಮಾರ್ಗಗಳಿಂದ ಒಳನುಗ್ಗುತ್ತಿದ್ದ ಜರ್ಮನ ಟ್ಯಾಂಕ್ ಪಡೆಯ
ಆಗಮನವನ್ನೂ ಅದರ ಮುಂದೋಟವನ್ನೂ ಅಡ್ಡಿ ಆತಂಕಗಳಿಲ್ಲದೆ ಪ್ರ
ಕ್ಷಣಕ್ಕೆ ಗುಪ್ತ ಧ್ವನಿಕ್ಷೇಪಕ ಯಂತ್ರವು ಸಾರಲಾರಂಭಿಸಿತು.

ಪೋಲಂಡ ಸರಕಾರದ ಪ್ರಮುಖ ಕಚೇರಿಯಲ್ಲಿಯೂ, ಮಂತ್ರಿಗಳ
ಕಚೇರಿಯಲ್ಲಿಯೂ, ಮಾರ್ಶಲ್ ಸ್ಮಿಗ್ಲಿರಿಡ್ಝ್‌ನ ಸೈನ್ಯ ಕಚೇರಿಯಲ್ಲಿಯೂ
ಪ್ರತಿಯೊಂದು ಸೈನಿಕ ವಿಭಾಗದಲ್ಲಿಯೂ ಯುದ್ಧ ಶಾಖೆಗಳಲ್ಲಿಯೂ ಪ್ರಮುಖ
ಉದ್ಯೋಗಿಗಳ ಕೇಂದ್ರಗಳಲ್ಲಿಯೂ ಪೋಲಂಡದ ದ್ರೋಹಿಗಳು ತಮ್ಮ ಚಟು
ವಟಿಕೆಗಳನ್ನು ನಡೆಸಿದ್ದರು. ಯುದ್ಧವು ಪ್ರಾರಂಭವಾಗುವವರೆಗೆ ದೇಶಕ್ಕಾಗಿ
ಪ್ರಾಣವನ್ನು ಸಹ ಧಾರೆಯೆರೆಯಬಹುದೆಂದು ಗಣಿಸಲ್ಪಟ್ಟ ಉಚ್ಚ ಸರ
ಕಾರೀ ಅಧಿಕಾರಿಗಳು ಸಹ ಯುದ್ಧವು ಸಾರಲ್ಪಟ್ಟ ಕೂಡಲೆ ಪೋಲಂಡಕ್ಕೆ
ದ್ರೋಹಬಗೆಯಲು ಸಿದ್ಧರಾದರು. ನಿಜವಾದ ಪೋಲಂಡದ ದೇಶಾಭಿಮಾ
ನಿಯ ಸ್ಥಿತಿಯು ತೀರ ಕರುಣಾಜನಕವಾಗಿತ್ತಲ್ಲದೆ ಅವನು ನಿರಾಶಾವಾದಿ
ಯಾಗ ಹತ್ತಿದನು.

ಆದರೂ ಅವನಲ್ಲಿಯ ಕ್ಷಾತ್ರತೇಜವು,ಯುದ್ಧದ ಹುಮ್ಮಸವು, ವಾಯು ವಾಗಿದ್ದಿಲ್ಲ. ಪೋಲಿಶ್ ಸೈನಿಕರು ಯುದ್ಧಭೀರುಗಳಿದ್ದಿಲ್ಲ. ಆದರೆ ಅವರ ಜೀವನಾಳಗಳನ್ನು ಪ್ರವೇಶಿಸಿದ್ದ ಗುಪ್ತಹೇರರ ದೇಶದ್ರೋಹದ ಚಟುವಟಿಕೆ ಗಳು ಅವರನ್ನು ದಿಙ್ಮೂಢರನ್ನಾಗಿ ಮಾಡಿದ್ದವು. ಅಂತಸ್ಥ ಕಾರಸ್ಥಾನ ಗಳನ್ನು ನಡೆಸಿದ ಒಳಗಿನ ಶತ್ರುಗಳೊಡನೆ ಮತ್ತು ತಮ್ಮ ದೇಶದ ಮೇಲೆ ದಂಡೆತ್ತಿಬಂದ ಹೊರಗಿನ ಶತ್ರುಗಳೊಡನೆ ಹೀಗೆ ಇಕ್ಕಡೆಗಳಲ್ಲಿ ಪೋಲಂಡವು ಹೋರಾಡಬೇಕಾಗಿತ್ತು. ಜರ್ಮನರ ತರಬೇತು ಹೊಂದಿದ ಗುಪ್ತ ಹೇರರ ಮುಖಾಂತರ ಜರ್ಮನ್ ಸರಕಾರಕ್ಕೆ ಪೋಲಂಡದಲ್ಲಿಯ ಪ್ರತಿ ಯೊಂದು ಮೂಲೆಯಲ್ಲಿಯ ಪ್ರತಿಕ್ಷಣದ ಚಟುವಟಿಕೆಗಳು ತಿಳಿಯುತ್ತಿದ್ದವು. ಪೋಲಿಶ್ ಸೈನ್ಯದ ಪ್ರತಿಯೊಂದು ಚಲನವಲನವು ಗುಪ್ತ ರೇಡಿಓ ಯಂತ್ರ ಗಳಮೂಲಕ ಪೋಲಂಡದ ಮೇಲೆ ದಾಳಿಗೆ ಅಣಿಯಾದ ಜರ್ಮನ್ ಸೈನ್ಯಕ್ಕೂ ಜರ್ಮನಿಯ ಸರಕಾರಕ್ಕೂ ತಿಳಿಯುತ್ತಿದ್ದಿತು. ಎಲ್ಲಿಯಾದರೂ ಪೋಲಂಡದ ಸೈನ್ಯವು ಪ್ರತೀಕಾರಮಾಡುವುದೆಂದೆನಿಸಿದರೆ ಕೂಡಲೆ ಜರ್ಮನ ಸೈನ್ಯಕ್ಕೆ ಅದು ತಿಳಿಯುತ್ತಿತ್ತು. ಜರ್ಮನಿಯ ದೂರಗುರಿಯ ತೋಫುಗಳು ತಮ್ಮ ಗುರಿಯನ್ನು ಸರಿಪಡಿಸಿಕೊಳ್ಳಲು ತಮ್ಮ ಜಾಣತನವನ್ನು ಪಯೋಗಿಸಿ ಕೊಳ್ಳುವ ಅಥವಾ ತಮ್ಮ ವೈಮಾನಿಕರ ಸೂಚನೆಗಳನ್ನು ಕೇಳುವ ಪ್ರಸಂಗವೇ ಬರಲಿಲ್ಲ. ಈ ತೋಫುಗಳಿಂದ ಒಂದು ಗುಂಡು ಹಾರಿಸಿದರೆ ಸಾಕು. " ಗುರಿತಪ್ಪಿತು;ಇನ್ನು ಸ್ವಲ್ಪು ಮುಂದೆ ಸರಿಸಿರಿ " ಎಂಬ ಸೂಚನೆಯನ್ನು ಗುಪ್ತ ವಾಯರ್‌ಲೆಸ್‌ಗಳ ಮೂಲಕ ಜರ್ಮನ್ ಗುಪ್ರಹೇರರು ಈ ತೋಫಿನ ಗುರಿಗಾರರಿಗೆ ಹೇಳುತ್ತಿದ್ದರು. ಪೋಲಂಡದ ಸೈನ್ಯವು ಕೈಕೊಂಡ ವಿಮಾನ ದಾಳಿ ಪ್ರತಿಬಂಧಕ ಉಪಾಯಗಳೆಲ್ಲವೂ ಜರ್ಮನ್ ಸೈನ್ಯಕ್ಕೆ ತಿಳುಹಲ್ಪಟ್ಟವು. ವಿಮಾನ ವಿರೋಧಕ ತೋಫುಗಳಿರುವ ಸ್ಥಳಗಳನ್ನು ಜರ್ಮನ್ ವೈಮಾನಿ ಕರಿಗೆ ತಿಳುಹಲಾಯಿತು. ಜರ್ಮನ್ ವೈಮಾನಿಕರಿಗೂ ಟ್ಯಾಂಕುಪಡೆಗೂ ಕಾಣಬಾರದೆಂದು ಉಪಯೋಗಿಸಿದ ಎಲ್ಲ ಆವರಣಗಳೂ ನಿರುಪಯುಕ್ತ ವಾದವು. ಜರ್ಮನಿಯ ಆರ್ಭಟದೆದುರು ಪೋಲಂಡದ ಸ್ವಾತಂತ್ರ್ಯವು ಜೊಯ್ಯಾಡಹತ್ತಿತು.

ಯುರೋಪದ ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಉದ್ವೇಗಕಾರಕ ಘಟುವಟಿಕೆಗಳು ಕ್ಷಣಾರ್ಧದಲ್ಲಿ ಪ್ರಾರಂಭವಾಗಿದ್ದವು. ಎಲ್ಲಿ ನೋಡಿದಲ್ಲಿ ಟ್ಯಾಂಕಗಳ ಗಡಗಡಾಟ, ವಿಮಾನಗಳ ಹಾರಾಟ, ಸೈನಿಕರ ಹುರುಪಿನ ಏರ್ಪಾಟಗಳೇ ಕಾಣಲಾರಂಭಿಸಿದವು. ಅಖಂಡ ಯುರೋಪಖಂಡವು ಒಂದು ಯುದ್ಧದ ಛಾವಣಿಯಂತೆ ಭಾಸವಾಗಹತ್ತಿತು. ಮನೆಯಲ್ಲಿ, ಮಠದಲ್ಲಿ, ಶಾಲೆಯಲ್ಲಿ, ಕೋಟದಲ್ಲಿ,ವಿಶ್ರಾಂತಿಗೃಹದಲ್ಲಿ, ಕಾರಖಾನೆಯಲ್ಲಿ, ಗಾಡಿಯಲಿ, ಬೀದಿಯಲ್ಲಿ, ಶಸ್ತ್ರಸನ್ನಾಹ ವಾರ್ತೆಯೇ ವಾರ್ತೆ!!

೯. ಪೋಲಂಡದ ಸ್ವಾತಂತ್ರ್ಯಹರಣ

ಪೋಲಂಡದ ಗಡಿಯನ್ನು ಜರ್ಮನ್ ಮುಂದಳವು ದಾಟಿತೆಂಬ ಸುದ್ದಿಯು ರೇಡಿಓಗಳ ಮುಖಾಂತರ ಪೋಲಂಡದಲ್ಲಿಯ ಜರ್ಮನಿಯ ಗುಪ್ತಚಾರರಿಗೆ ತಿಳಿಸಲ್ಪಟ್ಟಿತು. ಈ ಸುದ್ದಿಯನ್ನು ಕೇಳಿದ ಕೂಡಲೇ ಅಂದಿನ ವರೆಗೆ ಧರ್ಮೋಪದೇಶಕರೆಂದು ಕೆಲಸ ನಡೆಸಿದ್ದ ಅನೇಕರು ತಮ್ಮ ಗುಪ್ತ ವೇಷವನ್ನು ಬದಿಗೊತ್ತಿ ಮುಂದೆ ಬಂದರು. ದೇವತೆಗಳ ಭಾವಚಿತ್ರಗಳು, ಅನುಷ್ಠಾನಮಂದಿರಗಳು ಮತ್ತು ಇತರ ಧಾರ್ಮಿಕ ಸ್ಥಾನಗಳು ಮಾಯವಾಗಿ ಅವುಗಳ ಕ್ಷೇತ್ರಗಳಲ್ಲಿ ಸಣ್ಣ ಸಣ್ಣ ತೋಫುಗಳು, ಟೆಲಿಫೋನುಗಳು, ಧ್ವನಿಕ್ಷೇಪಕ ಯಂತ್ರಗಳು ಮತ್ತು ರೇಡಿಓ ಸಲಕರಣೆಗಳು ಕಾಣಿಸಿಕೊಂಡವು.

ಹಿಟ್ಲರನು ನಡೆಸಿದ ಈ ಕೃಷ್ಣಕಾಗಸ್ಥಾನದಲ್ಲಿ ಕೇವಲ ಜರ್ಮನರು, ಯುಕ್ರೇನಿಯರಷ್ಟೇ ಇದ್ದಿಲ್ಲ. ಯುಕ್ರೇನಿಯರಿಗೆ ಯುಕ್ರೇನದ ಆಶೆತೋರಿಸಿ ಅವರನ್ನು ತನ್ನೆಡೆಗೆಳೆದುಕೊಂಡಂತೆ ಬಿಳಿ ರಶಿಯನರನ್ನೂ ಲಿಥ್ವೇನಿಯರನ್ನೂ ತನ್ನ ಪಕ್ಷಕ್ಕೆ ಹಿಟ್ಲರನು ಒಡೆದುಕೊಂಡಿದ್ದನು.

ವ್ಹಿಲ್ನೊ ಪ್ರಾಂತದ ಒಡೆತನದ ಸಂಬಂಧವಾಗಿ ಪೋಲಂಡ ಸರಕಾರಕ್ಕೂ ಲಿಥ್ವೇನಿಯಾ ಸರಕಾರಕ್ಕೂ ಅನೇಕ ವರ್ಷಗಳಿಂದ ತಿಕ್ಕಾಟ ನಡೆದಿತ್ತು. ೧೯೧೯ ರಲ್ಲಿ ಕೇವಲ ಸ್ವಲ್ಪದಿನಗಳ ಮಟ್ಟಿಗೆ ಬಿಳಿ ರಶಿಯಾ ಸರಕಾರವು ಆ ಪ್ರಾಂತದಲ್ಲಿ ಅಸ್ತಿತ್ವದಲ್ಲಿತ್ತು. ಅದೇ ವಿಷಯವನ್ನು ಮುಂದೆ ಮಾಡಿ ಪೋಲಂಡದ ವಿರುದ್ಧ ಲಿಥ್ವೇನಿಯಾವನ್ನೆಬ್ಬಿಸಲು ಪ್ರಚಾರ ಕಾರ್ಯವನ್ನು ಈಗ ಕೈಕೊಳ್ಳಲಾಗಿತ್ತು. ಗೆಸ್ಟೆಪೋ ದಲದ ಈ ಚಟುವಟಿಕೆಗೆ

" ವಿಲ್ನೊ " ಪಟ್ಟಣವೇ ಕೇಂದ್ರವಾಗಿತ್ತು. ಮತ್ತು ಅಲ್ಲಿಯ ಗೆಸ್ಟೆಪೋದ ಪ್ರಮುಖ ಹಸ್ತಕನು ' ಪೋಪ್‌ಟುಲೋಕ್ ' ಎಂಬೊಬ್ಬ ಪಾದ್ರಿ. ಆತನು ಮೇಲಿಂದ ಮೇಲೆ ಯುಕ್ರೇನಿಯನ್ ಮುಖಂಡರನ್ನು ಕೂಡಿಕೊಂಡು ಗುಪ್ತ ಸಭೆಗಳ ಮೂಲಕ ತನ್ನ ಪ್ರಚಾರ ಕಾರ್ಯವನ್ನು ನಡೆಸಿಯೇ ಇದ್ದ. ಮತ್ತು ಒಂದು ವೇಳೆ ಪೋಲಂಡ ಜರ್ಮನಿ ಯುದ್ಧವು ಪ್ರಾರಂಭವೇ ಆದರೆ ಜರ್ಮನ ಸೈನ್ಯದೊಡನೆ ಸಂಪೂರ್ಣ ಸಹಕಾರಮಾಡುವ ಏರ್ಪಾಟನ್ನೂ ಅಲ್ಲಿ ಮಾಡಿದ್ದ. ಇನ್ನು ಬಿಳಿ ರಶಿಯನರು ಪೋಲಂಡದ ಸರ್ವನಾಶಕ್ಕೆ ಇಷ್ಟೊಂದು ಉತ್ಸುಕರಾಗಿರಲಿಕ್ಕೆ ಅಂತಹದೊಂದು ಮಹತ್ವದ ಕಾರಣವಿತ್ತು. ಪೋಲಂಡವು ಹಸ್ತಗತವಾದ ಕೂಡಲೆ ಬಿಳಿ ರಶಿಯನರ ಒಂದು ಸ್ವತಂತ್ರ ದೇಶವನ್ನೇ ನಿರ್ಮಾಣ ಮಾಡಲಾಗುವದೆಂದು ಹಿಟ್ಲರನು ರಶಿಯನರಿಗೆ ವಚನ ಕೊಟ್ಟಿದ್ದನಷ್ಟೇ ಅಲ್ಲದೆ ಬರೆದೂ ಕೊಟ್ಟಿದ್ದ. ಮತ್ತು ಹಿಟ್ಲರನೊಡನೆ ಬಿಳಿ ರಶಿಯನರ ರಾಜಕೀಯ ಒಪ್ಪಂದವೂ ಆಗಿತ್ತು.

ಪೋಲಂಡದವರೇ ಆದ ಗುಪ್ತ ಹೇರರಿಗೆ ಪೋಲಂಡದಲ್ಲಿಯ ಜರ್ಮನ ರಾಯಭಾರಿ ಕಚೇರಿಯ ಕಾರ್ಯದರ್ಶಿಯಾದ " ಸ್ಕ್ರೂವ್ " ನು ನಾಯಕನಾಗಿದ್ದನು. " ಸ್ಕ್ರೂವ್ " ನು ಹಳೇ ಮಾದರಿಯ ಮುತ್ಸದ್ದಿ; ಆಕರ್ಷಕವ್ಯಕ್ತಿಯುವ; ವಿನೋದಿಸ್ವಭಾವಿ; ಈತನ ಹೆಂಡತಿ ಸುಂದರ ಅಮೇರಿಕನ್ ಯುವತಿ. ಈ ದಂಪತಿಗಳು ' ವಾರಸಾ ' ಪಟ್ಟಣದ ಶ್ರೀಮಂತ ವರ್ಗದಲ್ಲಿಯೂ ಬಹು ಪ್ರಿಯರಾಗಿದ್ದರು. ಇವರ ಮೋಹಕ ನಡತೆ ನಡಾವಳಿಗಳು ಅನೇಕರನ್ನು ಮುಗ್ಧರನ್ನಾಗಿ ಮಾಡಿದ್ದವು. ಇವರು ಮೇಲಿಂದ ಮೇಲೆ ಕೊಡುತ್ತಿದ್ದ ಅಲ್ಪೋಪಹಾರಗಳೂ ನೃತ್ಯಕೂಟಗಳೂ ಪೋಲಂಡದ ಮೇಲ್ತರಗತಿಯ ನಾಗರಿಕನೇಕರನ್ನು ಆಕರ್ಷಿಸಿದ್ದವು. ತೋರಿಕೆಗೆ ಇವನೊಬ್ಬ ರಾಯಭಾರ ಕಚೇರಿಯ ಕಾರ್ಯದರ್ಶಿಯಾಗಿದ್ದರೂ ಜರ್ಮನಿಯಲ್ಲಿ ಇವನ ವರ್ಚಸ್ಸು ಫಾನ್ ಮೊಲ್ಟ್ಕೆಯಕಿಂತ ಹೆಚ್ಚಿತ್ತು. ಇವನ ಕುಟಿಲವಾದಕ್ಕೆ ಮರುಳಾಗಿ ಪೋಲಂಡದಲ್ಲಿಯ ಅನೇಕ ಅಧಿಕಾರಿಗಳು ದ್ರೋಹಿಗಳಾದರಲ್ಲದೆ ಒಂದು ವೇಳೆ ಜ… ಲಂಡದ ಮೇಲೆ

ದಂಡೆತ್ತಿಬಂದು ದಾಳಿ ಮಾಡಿದರೆ ಜ್ಯೂಜನರ ಆರ್ಭಟೆಯು ಪೋಲಂಡದಲ್ಲಿಲ್ಲದಂತಾಗುವದೆಂದೂ ಅದಕ್ಕಾಗಿ ಪೋಲಂಡದ ಮೇಲೆ ಜರ್ಮನಿಯು ದಂಡೆತ್ತಿಬಂದರೆ ಅದೇನೂ ತಪ್ಪಲ್ಲವೆಂದೂ ಅನೇಕ ಜನರು ಅಭಿಪ್ರಾಯ ಪಡಹತ್ತಿದರು. ಇವರೆಲ್ಲರ ಸಹಾಯದಿಂದ "ಸ್ಪ್ರೂವ್ಹ"ನು ಜರ್ಮನ ಸೈನ್ಯಮಂಡಲಕ್ಕೆ ಪೋಲಂಡದಲ್ಲಿಯ ಸೈನ್ಯ, ಅದರ ಶಕ್ತಿ, ಅದರ ಹತ್ತರದಲ್ಲಿದ್ದ ಯುದ್ಧೋಪಕರಣಗಳು ಇವುಗಳ ವಿಷಯವಾಗಿ ತಿಳಿಸಿದ್ದ. ಇಷ್ಟೇ ಅಲ್ಲ; ಪೋಲಂಡದ ಸೇನಾಪತಿಗೆ ಗೊತ್ತಿರದ ಸಣ್ಣ ಪುಟ್ಟ ವಿಷಯಗಳನ್ನು ಸಹ ಜರ್ಮನ್ ಸೈನ್ಯ ಕಚೇರಿಗೆ ತಿಳಿಸಿದ್ದ.

ಆದುದರಿಂದ ಅನಾಯಾಸವಾಗಿ ವಿಶೇಷ ತೊಂದರೆಯಿಲ್ಲದೆ ಪೋಲಂಡವನ್ನು ತನ್ನ ದವಡೆಯಲ್ಲಿರಿಸಲು ಹಿಟ್ಲರನು ಯೋಚಿಸಿದ. ಅಗಸ್ಟ ತಿಂಗಳ ಕೊನೆಯ ವರೆಗೂ ಜರ್ಮನಿಯು ದಂಡೆತ್ತಿ ಬರುವದೆಂಬ ನಿಶ್ಚಿತ ಸುದ್ದಿಯು ಪೋಲಂಡದ ನಾಗರಿಕರಿಗೆ ತಿಳಿದಿದ್ದಿಲ್ಲ. ದಾಳಿಯಾಗಬಹುದೆಂದು ಅವರು ಊಹಿಸಿದ್ದರು ಮಾತ್ರ. ಯಾವಾಗ್ಗೆ ಯಾವ ಬಗೆಯ ದಾಳಿಯಾದೀತೆಂಬ ಕಲ್ಪನೆಯೇ ಅವರಿಗಿದ್ದಿಲ್ಲ. ಯುದ್ಧದ ಕರೆ ಬಂದರೆ ೩೦ ಲಕ್ಷ ಜನ ಯೋಧರು ಸಿದ್ಧರಾಗಬಹುದೆಂದು ಪೋಲಂಡದ ನಾಗರಿಕರು ತಿಳಿದಿದ್ದರು. ಆದರೆ ಅವರಲ್ಲಿ ೧೦ ಲಕ್ಷ ಜನರಿಗೆ ಇನ್ನೂ ಕರೆಯೇ ಬಂದಿದ್ದಿಲ್ಲ. ಮತ್ತು ಇನ್ನುಳಿದ ೧೦ ಲಕ್ಷ ಜನರಿಗೆ ಬೇಕಾಗುವ ಸಮವಸ್ತ್ರಗಳಾಗಲಿ ಶಸ್ತ್ರಾಸ್ತ್ರಗಳಾಗಲಿ ಇದ್ದಿದ್ದಿಲ್ಲ.

ಆದರೂ ಇದ್ದುದರಲ್ಲಿಯೇ ವೈರಿಗಳನ್ನು ಎದುರಿಸಿ ಒಂದು ವಾರದ ವರೆಗೆ ಹೋರಾಡಿದ ನಂತರ ಪೋಲಿಶ್ ಸರಕಾರವೂ ಸೈನ್ಯ ಕಚೇರಿಯೂ ವಾರಸಾ ಪಟ್ಟಣದಿಂದ ಹೊರಬೀಳಬೇಕಾಯಿತು. ಪೋಲಂಡದ ಅಧ್ಯಕ್ಷರಾದ ಪ್ರೆಸಿಡೆಂಟ್ ಮೊಸಿಕಿ, ಸೈನ್ಯದ ಅಧಿಕಾರಿಗಳು, ಪರರಾಷ್ಟ್ರ ಮಂತ್ರಿ, ರಾಯಭಾರಿಗಳು ಇವರೇ ಮೊದಲಾದವರು ತಮ್ಮ ವಾಹನಗಳನ್ನು ತೆಗೆದುಕೊಂಡು ಮೊದಲು ಪೂರ್ವಕ್ಕೆ ರಶಿಯಾದ ಗಡಿಯವರೆಗೆ ಸಾಗಿ ಮುಂದೆ ದಕ್ಷಿಣಕ್ಕೆ ರುಮಾನಿಯಾದತ್ತ ಸಾಗಿದರು.

ದಿನ ದಿನಕ್ಕೆ ಒಂದೊಂದು ಊರಲ್ಲಿ ಅವರು ಸರಕಾರವನ್ನು ಸ್ಥಾಪಿಸಿ ಅಲ್ಲಿ ತಮ್ಮ ಕಚೇರಿಗಳನ್ನು ಸಂಘಟಿಸಬೇಕೆಂದು ಯತ್ನಿಸಿದರು. ಆದರೆ ಜರ್ಮನರ ಬಾಂಬರ ವಿಮಾನಗಳು ಅವರ ಬೆನ್ನು ಬಿಡುತ್ತಲೇ ಇರಲಿಲ್ಲ. ಅವರ ಮೇಲೆ ಪ್ರತಿಕ್ಷಣಕ್ಕೂ ವೈರಿ ವಿಮಾನಗಳು ಬಾಂಬುಗಳನ್ನೆಸೆಯುತ್ತ ನಡೆದಿದ್ದವು. ಇಂದು ಈ ಊರಲ್ಲಿ; ಇನ್ನೊಂದು ಗಂಟೆಗೆ ಇನ್ನೊಂದು ಸ್ಥಳದಲ್ಲಿ; ಮತ್ತೊಂದು ಗಂಟೆಗೆ ಒಂದು ಅಡವಿಯಲ್ಲಿ; ಹೀಗೆ ಪೋಲಂಡ ಸರಕಾರವು ಅಲೆದಾಡುತ್ತ ಸಾಗಿತ್ತು. ಅವರಿಗೆ ಒಂದೆಡೆ ಕುಳಿತು ವಿಚಾರ ಮಾಡುವದಕ್ಕಾಗಲಿ ಅಥವಾ ಇದ್ದು ಬಿದ್ದ ತಮ್ಮ ಸೈನ್ಯವನ್ನು ಸಂಘಟಿಸಿ ಹೋರಾಟ ನಡೆಸುವದಕ್ಕಾಗಲಿ ಸಂಧಿಯೇ ದೊರೆಯದ ಹಾಗಾಯಿತು. ಮತ್ತು ವೈರಿ ವಿಮಾನಗಳನ್ನು ತಪ್ಪಿಸಿಕೊಂಡು ಹೋಗಬೇಕೆಂದು ಸರಕಾರದ ಬೇರೆ ಬೇರೆ ಶಾಖೆಗಳು ಒಂದನ್ನೊಂದು ಅಗಲಿ ಬೇರೆ ಬೇರೆ ದಾರಿಯಿಂದ ಮಾರ್ಗಕ್ರಮಣ ಮಾಡಬೇಕಾಯಿತು. ಅದರಿಂದ ಒಂದು ಶಾಖೆಯವರಿಗೆ ಮತ್ತೊಂದು ಶಾಖೆಯ ಸಂಬಂಧವೇ ಉಳಿಯದಂತಾಯಿತು.

ಜರ್ಮನಿಯ ಈ ಅಬ್ಬರದ ಏರಿಕೆಯನ್ನು ತಡೆಯುವದು ತಮಗೆ ಕೇವಲ ಅಸಾಧ್ಯವೆಂದು ಮುಖ್ಯ ಮಂತ್ರಿಗೂ ಮನವರಿಕೆಯಾದಂತಾಯಿತು. ಕೇವಲ ದೈವೀಘಟನೆಯೇನಾದರೂ ಜರ್ಮನಿಗೆ ಪ್ರತಿಕೂಲವಾಗಿ ಅವರ ಮುಂದೋಟವು ನಿಲ್ಲಬೇಕಲ್ಲದೆ ಅದನ್ನು ತಡೆಯುವದು ತಮಗೆ ಸಾಧ್ಯವಿಲ್ಲವೆಂದೇ ಅವರಿಗೆ ತೋರಿತು.

ಆದರೆ ಜರ್ಮನಿಯ 'ಗೆಸ್ಟೆಪೋ'ದಲವು ಮಾತ್ರ ಎಂದಿನಂತೆ ಜಾಗರೂಕತೆಯಿಂದ ಕೆಲಸ ನಡೆಸಿತ್ತು. ಅದೊಂದು ಯಂತ್ರದಂತೆ ತನ್ನ ಚಟುವಟಿಕೆಗಳನ್ನು ನಡೆಸಿತೆನ್ನಬಹುದು. "ಬ್ಲಿಝ್ ಕ್ರಿಗ" ಯುದ್ಧ ಪದ್ಧತಿಯು ಅವರಿಗೆ ಸಂಪೂರ್ಣ ಇಷ್ಟ ಫಲವನ್ನು ತಂದೊಡ್ಡಿತು. ಮತ್ತು ಪೋಲಂಡ ಸರಕಾರದ ಈ ದೈನಂದಿನ ಸ್ಥಳಾಂತರವು ಜರ್ಮನಿಯ ದಾಳಿಗೆ ಮತ್ತಿಷ್ಟು ಪೋಷಕವಾಗಿತ್ತು. ಮೋಸಕಿ, ಸ್ಕ್ಲಾಡೋವ್ಸ್ಕಿ ಮತ್ತು ಬೆಕ್ ಈ ಮೂವರನ್ನೂ ಪೋಲಂಡದಿಂದ ಹೊರದೂಡಬೇಕೆಂದು ಮೊದಲೇ ನಿಶ್ಚಿತವಾಗಿತ್ತು. ಅವರು ರುಮಾನಿಯಾದ ಕಡೆಗೆ ಸಾಗುವಂತೆಯೇ ದಾಳಿಯು ಆರಂಭಿಸಲ್ಪ

ಟ್ಟಿತ್ತು. ಮತ್ತು ಪೋಲಂಡ ರಾಜಕಾರಣದ ಸೂತ್ರಧಾರರಾದ ಈ ಮೂವರು ಒಮ್ಮೆ ದೇಶಭ್ರಷ್ಟರಾಗಿ ರುಮಾನಿಯಾದಲ್ಲಿ ಕಾಲಿಟ್ಟ ಕೂಡಲೇ ರಶಿಯಾದ ಕೆಂಪು ಸೈನ್ಯವು ತನ್ನ ಗಡಿಯನ್ನು ದಾಟಿ ಪೂರ್ವದಿಶೆಯಿಂದ ಪೋಲಂಡದಲ್ಲಿ ನುಗ್ಗಬೇಕೆಂದು ಸಂಕೇತವಾಗಿತ್ತು. ಹೀಗೆ ಎರಡು ಆಘಾತಗಳು ಏಕಸಮಯಾವಚ್ಛೇದದಿಂದ ಪೂರ್ವ ಸೂಚನೆ ಇಲ್ಲದೆ ಪೋಲಂಡದ ಸೈನಿಕರ ಮೇಲೆ ನಡೆದುದೇ ಆದರೆ ಪೋಲಿಶ್ ಸೈನ್ಯವು ಕುಸಿದುಬೀಳುವದು ಖಂಡಿತವೆಂದು ಜರ್ಮನಿಗೆ ಗೊತ್ತಿತ್ತು. ಮತ್ತು ಈ ಮಿಂಚಿನ ವೇಗದಿಂದ ದಿಙ್ಮೂಢವಾದ ಫ್ರೆಂಚ್ ಸೈನ್ಯವು ಮ್ಯಾಜಿನೋ ವ್ಯೂಹದಿಂದ ಸಾರಬ್ರುಕೆನ್ ಪ್ರಾಂತದ ಮೇಲೆ ಏರಿಹೋಗುವ ಧೈರ್ಯ ತೋರಿಸಲಿಕ್ಕಿಲ್ಲೆಂದು ಜರ್ಮನಿಯು ಲೆಕ್ಕ ಹಾಕಿತ್ತು.

ಜರ್ಮನಿಯ ಗೂಢಚಾರರು ಪೋಲಂಡದಲ್ಲಿ ಎಲ್ಲೆಲ್ಲಿಯೂ ತಮ್ಮ ಜಾಲವನ್ನು ಪಸರಿಸಿದ್ದರು. ಅವರ ಹಸ್ತಕರು ಉಪಹಾರ ಗೃಹಗಳಲ್ಲಿ, ಕ್ಷೌರದಂಗಡಿಗಳಲ್ಲಿ, ಹಳ್ಳಿಗಳ ಅಡ್ಡೆಗಳಲ್ಲಿ, ತಮ್ಮ ಚತುರ ಕಾರ್ಯಕಲಾಪಗಳನ್ನು ನಡೆಸಿದ್ದರು. ಪ್ರವಾಸದ ಆಯಾಸದಿಂದ ದಣಿದು, ಬಳಲಿ, ಬೆಂಡಾಗಿ ದಣಿವಾರಿಸಿಕೊಳ್ಳಬೇಕೆಂದು ಪೋಲಂಡದ ಅಧಿಕಾರಿಗಳು ಈ ಸ್ಥಳಗಳಿಗೆ ಬಂದ ಮರುಕ್ಷಣವೆ ಅವರ ಆಗಮನದ ಸುದ್ದಿಯು ಜರ್ಮನರಿಗೆ ತಿಳಿಯುತ್ತಿತ್ತು. ಮತ್ತು ಹರಟೆ ಹೊಡೆಯುತ್ತ ಸರಕಾರವು ಎಲ್ಲಿದೆ ? ಯಾರ ಯಾರ ಪರಿವಾರದಲ್ಲಿ ಯಾರಿದ್ದಾರೆ ? ಅವರ ಚಟುವಟಿಕೆಗಳೇನು ? ಅವರಿದ್ದುದು ಎಲ್ಲಿ? ಮುಂದೆಲ್ಲಿ ಹೋಗುವರು ? ಇವೇ ಮೊದಲಾದ ಇಂಗಿತಗಳನ್ನು ಈ ಅಂಗಡಿಕಾರರು ತಿಳಿದುಕೊಂಡು ಧ್ವನಿಕ್ಷೇಪಕ ಯಂತ್ರಗಳ ಮೂಲಕ ಆ ಸುದ್ದಿಯನ್ನು ಸಂಬಂಧಪಟ್ಟ ಜರ್ಮನ ಅಧಿಕಾರಿಗಳಿಗೆ ತಿಳಿಸುತ್ತಿದ್ದರು. ಮತ್ತು ಅಲ್ಲಿ ಪ್ರಬಲವಾದ ಹೇರರ ಸಂಘಟನೆಯಾಗಿತ್ತು. ದೇಶವನ್ನು ಬೇರೆ ಬೇರೆ ಭಾಗಗಳಲ್ಲಿ ವಿಂಗಡಿಸಲಾಗಿತ್ತು. ಅವುಗಳಲ್ಲಿ ಒಂದೊಂದು ಭಾಗವು ಒಬ್ಬೊಬ್ಬ 'ಕಮಿಸಾರ'ನ ಕೈಯೊಳಗಿತ್ತು. ಅವನೇ ಅಲ್ಲಿಯ "ಗೆಸ್ಟೆಪೋ" ದಲದ ಚಟುವಟಿಕೆಗಳನ್ನು ನಡೆಸುತ್ತಿದ್ದನು. 'ಗೆಸ್ಟೆಪೋ'ದಲದ ಅನಂತ ಜಾಲದೊಳಗಿಂದ ಪಾರಾಗುವದು ಯಾರಿಗೂ ಸಾಧ್ಯವಿದ್ದಿಲ್ಲ. ರಹಸ್ಯವೆಂಬುದಂತೂ ಉಳಿಯಲೇ ಇಲ್ಲ.

ಪೋಲಂಡದಲ್ಲಿ ಹಿಂದಕ್ಕೆ ಬೇಟೆಯಾಡುವದಕ್ಕೋ ಅಥವಾ ನಿಸರ್ಗ ಸೌಂದರ್ಯವನ್ನು ಉಪಭೋಗಿಸಲಿಕ್ಕೋ ಬಂದ ಜರ್ಮನಿಯ 'ಗೆಸ್ಟೆಪೊ' ದಲದವರು ಅಲ್ಲಿಯ ಪ್ರತಿಯೊಂದು ಗೇಣು ಸ್ಥಳದ ವಿವರ ಗಳನ್ನು ದೊರಕಿಸಿದ್ದರು. ಪ್ರತಿಯೊಂದು ಪಟ್ಟಣದ ಕೂಟದಲ್ಲಿ ಗೆಸ್ಟೆಪೋ ದಲದವರು ಪೋಲಂಡ ಸೈನಿಕರ ಗಣವೇಷಗಳನ್ನು ಹಾಕಿಕೊಂಡು ಅಲ್ಲಿದ್ದ ಪೋಲಂಡದ ಪೋಲೀಸನನ್ನು ಗತಿಗಾಣಿಸಿ ಆ ಸ್ಥಳಗಳನ್ನು ತಾವು ಆಕ್ರ ಮಿಸುತ್ತಿದ್ದರು. ಪೋಲಿಶ್ ಭಾಷೆಯನ್ನಾಡಲು ಅವರಿಗೆ ಶಿಕ್ಷಣವೂ ದೊರೆ ತಿತ್ತು. ಆದುದರಿಂದ ಅವರು ಪೋಲಂಡದ ಪೋಲೀಸರಂತೆಯೇ ತಮ್ಮ ಕೆಲಸ ನಡೆಸುತ್ತಿದ್ದರು. ಪೋಲಂಡದ ಸರಕಾರೀ ಅಧಿಕಾರಿಗಳು ಜರ್ಮನ ವಿಮಾನಗಳ ಕಣ್ಣು ತಪ್ಪಿಸುತ್ತ ಓಡಿ ಹೋಗುವಾಗ ಈ 'ಪೋಲೀಸರು' ಅವರ ವಾಹನಗಳು ಬರುವದನ್ನು ನೋಡಿದ ಕೂಡಲೆ ಅವರಿಗೆ ತಮ್ಮ ವಂದನೆಗಳನ್ನರ್ಪಿಸಿ ಮಾರ್ಗ ತೋರಿಸುತ್ತಿದ್ದರು.

ಪೋಲಂಡದಲ್ಲಿ ಜರ್ಮನ್ ಸೈನ್ಯವು ಒಳನುಗ್ಗಿ ದಾಳಿಯನ್ನಾರಂಭಿ ಸಿದ ಕೂಡಲೆ ಪಂಚಮುದಲವೂ ತನ್ನ ಚಟುವಟಿಕೆಗಳನ್ನು ಇಮ್ಮಡಿ ರಭಸ ದಿಂದ ಪ್ರಾರಂಭಿಸಿತು. ಕಚೇರಿಗಳನ್ನು, ಪ್ರಮುಖ ಔದ್ಯೋಗಿಕ ಮತ್ತು ಸಂಪ ರ್ಕದ ಕೇಂದ್ರಗಳನ್ನು ಮತ್ತು ಪ್ರಮುಖ ಬೀದಿ ಮಾರ್ಗಗಳನ್ನು ಆಕ್ರಮಿಸ ಬೇಕೆಂದು ಗೆಸ್ಟೆಪೋ ಕೇಂದ್ರದಿಂದ ಆಜ್ಞೆ ಬಂದಿತ್ತು. ಮತ್ತು ಅದಕ್ಕೆ ಬೇಕಾಗುವ ಅವಶ್ಯಕ ಏರ್ಪಾಟನ್ನೂ ಮಾಡಲಾಗಿತ್ತು. ಅಷ್ಟೇಕೆ, ಪೋಲ ಸೈನಿಕರ ಮತ್ತು ಪೋಲೀಸರ ಗಣವೇಷಗಳನ್ನು ಸಹ ಹೇರಳವಾಗಿ ಸಿದ್ಧ ಪಡಿಸಲಾಗಿತ್ತು.

ಈ ಗಣವೇಷಗಳು ಜರ್ಮನಿಯಲ್ಲಿ ಸಿದ್ಧವಾಗಿ ಡ್ಯಾಂಝಿಗ್‌ದ ಮಾರ್ಗ ವಾಗಿ ಪೋಲಂಡದೊಳಗೆ ಕಳಿಸಲ್ಪಟ್ಟಿದ್ದವು. ಗುಪ್ತ ಸುದ್ದಿಗಳನ್ನು ಎಲ್ಲಿ ಕಳಿಸಬೇಕು ? ಅದಕ್ಕೆ ಸಮೀಪದ ಸ್ಥಳವಾವುದು ? ಮತ್ತು ಆ ಗಣವೇಷ ಧಾರಿಯ ಕರ್ತವ್ಯವೇನು ? ಇವೆಲ್ಲ ಸೂಚನೆಗಳು ಪ್ರತಿಯೊಂದು ಗಣವೇಷದ ಜೇಬಿನಲ್ಲಿದ್ದವು. ವಿಮಾನ ಕೊಡೆಗಳ ಸಹಾಯದಿಂದ ಆಯಾ ಭಾಗಗಳಲ್ಲಿ ಇಳಿದ ಜರ್ಮನ್ನ ಸೈನಿಕರಿಗೆ ಇವರು ಎಲ್ಲ ಅನುಕೂಲತೆಗಳನ್ನೊದಗಿಸಿಕೊಡ

ಬೇಕೆಂದು ಸೂಚನೆ ಕೊಡಲ್ಪಟ್ಟಿತ್ತು.

ಕೊಡೆ ವೈಮಾನಿಕರು ಈ ರೀತಿಯಾಗಿ ತಂಡ ತಂಡವಾಗಿ ಆಕಾಶದಿಂದ ಕೆಳಗಿಳಿದು ಸಂಪೂರ್ಣವಾಗಿ ಮಾಯವಾಗುವದನ್ನು ನೋಡಿ ಪೋಲ ಸೈನಿಕರು ಮತಿಗೆಟ್ಟಂತಾದರು. ಈ ಕೊಡೆ ವೈಮಾನಿಕರು ತಮ್ಮ ತೋಫು ದಳದ ಮೇಲೆ ಹಿಂಬದಿಯಿಂದ ಏರಿ ಹೋಗಬಹುದೆಂದು ಅವರು ಗ್ರಹಿಸಿದರು. ಆದರೆ ಈ ಕೊಡೆ ವೈಮಾನಿಕರಲ್ಲಿ ಪ್ರತಿಯೊಬ್ಬನು ಜರ್ಮನ ಗುಪ್ತಹೇರರ ಪಡೆಯ ಗುಪ್ತಚಾರನೆಂಬುದು ಅಥವಾ ಪೋಲಿಶ ಭಾಷೆಯನ್ನಾಡಲು ಬಲ್ಲ ಕೈ ಬಾಂಬು ಮತ್ತು ಇತರ ಸ್ಫೋಟಕ ದ್ರವ್ಯಗಳಿಂದ ಆಸ್ತಿನಾಶಕ ಚಟುವಟಿಕೆಗಳನ್ನಾರಂಭಿಸಬಲ್ಲ ತಜ್ಞ ವಿನಾಶಕಾರಿಯೆಂಬುದು ಅವರ ಊಹೆಗೆ ನಿಲುಕಲಿಲ್ಲ. ಈ ಕೊಡೆ ವೈಮಾನಿಕರಿಗೆ ತಾವು ಇಳಿದ ಪೋಲಂಡದ ಭಾಗದ ಸಂದಿಮೂಲೆಗಳ ಪರಿಚಯವಿತ್ತು. ಆದುದರಿಂದ ತಾವು ಚಟುವಟಿಕೆಗಳನ್ನಾರಂಭಿಸಬೇಕಾದ ಪ್ರದೇಶದ ಬಗ್ಗೆ ಬೇರೆಯವರನ್ನು ಕೇಳುವ ಪ್ರಸಂಗವೇ ಅವರಿಗೆ ಬರಲಿಲ್ಲ. ತಮಗಾಗಿ ಗೊತ್ತುಪಡಿಸಲ್ಪಟ್ಟ ಸ್ಥಳಕ್ಕೆ ನೇರವಾಗಿ ಹೋಗಿ ತಮ್ಮ ಕರ್ತವ್ಯವನ್ನು ಸಾಗಿಸುವಷ್ಟು ಅವರ ಸಿದ್ಧತೆ ಇತ್ತು.

ಮೋಟರ ವಾಹನಗಳಲ್ಲಿ, ಕುದುರೆಗಾಡಿಗಳಲ್ಲಿ ತಮ್ಮ ಚರಾಸ್ತಿಯನ್ನು ಹೇರಿಕೊಂಡು ಓಡಿ ಹೋಗುತ್ತಿದ್ದ ಸಹಸ್ರಾವಧಿ ಪೋಲ ನಿರ್ವಾಸಿತರಲ್ಲಿ ಸಹ ಒಂದು ದೊಡ್ಡ ಜರ್ಮನ ಗುಪ್ತಹೇರರ ತಂಡವು ನುಸುಳಿಕೊಂಡು ಅಲ್ಲಿಯೂ ತನ್ನ ಚಟುವಟಿಕೆಗಳನ್ನಾರಂಭಿಸಿತ್ತು.

ನಿರ್ವಾಸಿತರಲ್ಲಿ ಬೆರೆತುಕೊಂಡ ಈ ಗುಪ್ತ ಹೇರರು ಓಡಿ ಹೋಗುತ್ತಿದ್ದವರಲ್ಲಿ ಮತ್ತಷ್ಟು ಭೀತಿಯನ್ನು ಹುಟ್ಟಿಸಿದ್ದರು. ಓಡಿಹೋಗದೆ ಮನೆ ಹಿಡಿದುಕೊಂಡಿದ್ದವರು ಸಹ ಇವರ ಭೀಕರ ಸುದ್ದಿ ಪ್ರಸಾರದ ಜಾಲದಲ್ಲಿ ಸಿಲುಕಿ ದಿಕ್ಕೆಟ್ಟು ಓಡಲಾರಂಭಿಸಿದರು. ಇದರಿಂದ ಸಂದಿ, ಓಣಿ, ಬೀದಿ, ರಾಜಮಾರ್ಗ ಮೊದಲಾದ ಎಲ್ಲ ಸಾರಿಗೆ ಸೌಕರ್ಯದ ಸಾಧನಗಳು ಈ ಓಡಿ ಹೋಗುವ ಜನರಿಂದ ಮತ್ತು ಅವರ ವಾಹನಗಳಿಂದ ತುಂಬಿ ಹೋದವು. ಎಲ್ಲಿ ನೋಡಿದಲ್ಲಿ ಈ ಜನ ಸಮೂಹ. ಎತ್ತ ನೋಡಿದತ್ತ ಈ ಜನರ ಭಯಗ್ರಸ್ತ ಮುಖಗಳು ಕಾಣುತ್ತಿದ್ದವು. ಇಂಥ ಜನರಿಂದ ನಾಡಿನ

ದಾರಿಗಳು ತುಂಬಿ ಹೋಗಿ ಸೈನಿಕರ ಓಡಾಟಕ್ಕೂ ಸರಕಾರದ ಇತರ ಆಡಳಿತದ ವ್ಯವಹಾರಕ್ಕೂ ದಾರಿ ದೊರೆಯದಂತಾಯಿತು.

ಮಾರ್ಗಗಳ ಕೂಟದಲ್ಲಿ ಪೋಲಂಡದ ಪೋಲೀಸರ ಗಣವೇಷ ಹಾಕಿದ ಜರ್ಮನ ಗುಪ್ತ ಹೇರರು ಪೋಲಂಡ ಸರಕಾರದ ಅಧ್ಯಕ್ಷ ಮತ್ತು ಅವನ ಪರಿವಾರವು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಭೀತಿಯಿಂದ ಅಂಡಲೆಯುತ್ತಿದ್ದಾಗ ಈ ಪರಿವಾರದ ಚಟುವಟಿಕೆಗಳನ್ನು ತಮ್ಮ ಕೇಂದ್ರಕ್ಕೆ ಸಂಜ್ಞಾ ಭಾಷೆಯಲ್ಲಿ ತಿಳಿಸುತ್ತಿದ್ದರು. ಇಂಥ ಪೋಲೀಸರು ಇಲ್ಲದ ಭಾಗಗಳಲ್ಲಿ ಈ ಪೋಲಂಡದ ಅಧಿಕಾರೀ ವರ್ಗವು ಸಾಗುತ್ತಿದ್ದರೆ ನಿರ್ವಾಸಿತರ ಗುಂಪುಗಳಲ್ಲಿ ಹುದುಗಿಕೊಂಡಿದ್ದ ಗುಪ್ತ ಹೇರರು ಆ ಕೆಲಸ ಮಾಡುತ್ತಿದ್ದರು.

ತಾವು ಎಂಥ ಅಸಹಾಯ ಪರಿಸ್ಥಿತಿಯಲ್ಲಿ ಸಿಕ್ಕು ಬಿದ್ದಿರುವೆವೆಂಬ ಅರಿವು ಆವಾಗ ಪೋಲಂಡದ ಆಡಳಿತಗಾರರಿಗೆ ಈಗ ಸ್ಪಷ್ಟವಾಗಹತ್ತಿತು. ಯಾರಿಗೂ ಗೊತ್ತಾಗಬಾರದೆಂದು ಪೋಲಂಡದ ಉನ್ನತಾಧಿಕಾರಿಗಳು ಗುಪ್ತ ರೀತಿಯಿಂದ ಸ್ಥಳಾಂತರಿಸಿ ಯಾವುದೊಂದು ಹಳ್ಳಿಯಲ್ಲಿ ಅಡಿಗಿಕೊಂಡು ತಮ್ಮ ಗಂಟು ಗದಡೆ ಬಿಚ್ಚಿ ಇತರ ಸರಕಾರೀ ಅಧಿಕಾರಿಗಳೊಡನೆ ತಮ್ಮ ಸಂಬಂಧ ಬೆಳೆಸಿಕೊಳ್ಳಬೇಕೆಂದು ಟೆಲಿಫೋನ ತಂತಿಗಳನ್ನು ಜೋಡಿಸಿ ಯಾಂತ್ರಿಕ ಸಲಕರಣೆಗಳನ್ನು ಬಿಚ್ಚುತ್ತಿರುವಾಗಲೇ ಮೇಲಿನಿಂದ ನೇರವಾಗಿ ಅವರ ಸುತ್ತಲು ಬಾಂಬುಗಳ ಸುರಿಮಳೆಯಾಗುತ್ತಿತ್ತು.

ಯಾವುದೊಂದು ಸಣ್ಣ ಪಟ್ಟಣದಲ್ಲಿ ತಂಗಿಕೊಂಡು ಪೋಲಂಡದ ಆಡಳಿತ ವರ್ಗವು ಏನಾದರೂ ಸರಕಾರೀ ಕೆಲಸ ಪ್ರಾರಂಭಿಸಬೇಕೆಂದು ಸಮೀಪದ ಕಚೇರಿಯಲ್ಲಾಗಲಿ, ಮನೆಯಲ್ಲಾಗಲಿ ಪ್ರವೇಶಿಸಬೇಕೆಂದರೆ ಅದೇ ಮನೆಯಲ್ಲಿ ತಮ್ಮ ಚಟುವಟಿಕೆಗಳನ್ನು ನಿರೀಕ್ಷಿಸುತ್ತಿರುವ ಗುಪ್ತ ಹೇರರು ಇರುವರೆಂಬುದೂ, ಆ ಗುಪ್ತ ಹೇರರು ಜರ್ಮನ ವೈಮಾನಿಕರಿಗೆ ವಾಯುರಲೆಸದ ಮೂಲಕ ತಮ್ಮ ಇರುವಿಕೆಯನ್ನು ತಿಳಿಸಬಹುದೆಂದೂ ಮನವರಿಕೆಯಾಯಿತು. ಆದರೆ ಆ ಗುಪ್ತಹೇರರನ್ನು ಹುಡುಕಿ ತೆಗೆಯುವದು ಮಾತ್ರ ಅವರಿಗೆ ಅಸಾಧ್ಯಕಾರ್ಯವಾಗಿ ಕಂಡುಬಂತು. ಯಾಕೆಂದರೆ ಎಲ್ಲಿಯಾದರೂ ಒಂದೆಡೆ ಆ ಗುಪ್ತಚಾರರನ್ನು ಹಿಡಿದರೆ ಮರು

ಕ್ಷಣದಲ್ಲಿ ಇಡೀ ಸರಕಾರೀ ಪರಿವಾರವೇ ಆ ಸ್ಥಳದಿಂದ ಪಲಾಯನ ಹೇಳಿಸುವ ಪ್ರಸಂಗ ಬರುತ್ತಿತ್ತು. ಮತ್ತು ಓಡಿ ಹೋಗಿ ಅವಿತುಕೊಂಡ ಹೊಸ ಸ್ಥಳದಲ್ಲಿ ಸಹ ಮತ್ತೆ ಈ ಗುಪ್ತಹೇರರ ತಂಡದ ದವಡೆಯಲ್ಲಿಯೇ ಬೀಳಬೇಕಾಗುತ್ತಿತ್ತು.

ಇಷ್ಟೇ ಅಲ್ಲ, ಅನೇಕ ಸಂದರ್ಭಗಳಲ್ಲಿ ಪೋಲಂಡ ಸರಕಾರವು ತಾವು ತಾತ್ಪೂರ್ತಿಕವಾಗಿ ಆರಿಸಿಕೊಂಡ ರಾಜಧಾನಿಯ ಸ್ಥಳಕ್ಕೆ ಬಂದು ಮುಟ್ಟಿದ ಸುದ್ದಿಯನ್ನು ತನ್ನ ಇತರ ಅಂಗ ಸಂಸ್ಥೆಗಳಿಗೆ ತಿಳಿಸುವದಕ್ಕಿಂತ ಮುಂಚಿತವಾಗಿ ಜರ್ಮನ ವಿಮಾನುಗಳು ಆ ಸ್ಥಳದ ಮೇಲೆ ಬಾಂಬು ಚೆಲ್ಲುತ್ತಿದ್ದವು.

ಮೊಸಕಿ, ಸ್ಮಿಗ್ಲಿರಿಝ್ ಮತ್ತು ಬೆಕ್ ಇವರು ಹಳ್ಳಿಯಲ್ಲಿಯ ತಮ್ಮ ಸ್ಥಾನಗಳನ್ನು ಬಿಟ್ಟು ಕದಲಿದ ಕೂಡಲೇ ಆ ಹಳ್ಳಿಯಲ್ಲಿಯ ಜರ್ಮನ ಗುಪ್ತ ಹೇರರು ಆ ಸುದ್ದಿಯನ್ನು ಜರ್ಮನ ಸೈನಿಕ ಕೇಂದ್ರಗಳಿಗೆ ತಿಳಿಸುತ್ತಿದ್ದರು. ಮತ್ತು ಜರ್ಮನ್ ವೈಮಾನಿಕ ದಲದವರು ಅವರ ಬೆನ್ನು ಹತ್ತುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಹೀಗೆ ಪಲಾಯನ ಹೇಳುತ್ತ ಗಂಟೆಗೊಂದು ಹಳ್ಳಿಯಲ್ಲಿ ಸರಕಾರವನ್ನು ಸ್ಥಾಪಿಸಿ ಆಡಳಿತ ನಡೆಸುತ್ತಿದ್ದ ಪೋಲಿಶ ಸರಕಾರವು ತನ್ನ ಸೈನಿಕ-ಕೇಂದ್ರಕ್ಕೂ, ಸೇನಾಪತಿಗಳಿಗೂ ಮತ್ತು ಇತರ ಆಡಳಿತ ಶಾಖೆಗಳಿಗೂ ಟೆಲಿಪೋನುಗಳ ಮೂಲಕ ಆಜ್ಞೆ ವಿಧಿಸುತ್ತಿದ್ದಾಗ ಆ ಆಜ್ಞೆಗಳನ್ನು ಅರಿತುಕೊಳ್ಳುವದಕ್ಕಾಗಿ ಟೆಲಿಫೋನ ತಂತಿಗಳನ್ನು ಕತ್ತರಿಸದೆ ಅವುಗಳಿಗೆ ತಮ್ಮ ಯಂತ್ರ ಸಲಕರಣೆಗಳನ್ನು ಜೋಡಿಸಿ ಆ ಆಜ್ಞೆಗಳನ್ನರಿತುಕೊಳ್ಳುತ್ತಿದ್ದರು.

ಬ್ರಿಟಿಶ ಮತ್ತು ಫ್ರೆಂಚ ರಾಯಭಾರಿಗಳು ಒಂದು ಮನೆಯಿಂದ ಇನ್ನೊಂದು ಮನೆಯೊಳಗೆ ಪ್ರವೇಶಿಸಿದ ಮರುಕ್ಷಣದಲ್ಲಿ ಅದರ ಟೆಲಿಫೋನ ತಂತಿಗಳು ಕತ್ತರಿಸಲ್ಪಡುತ್ತಿದ್ದವು. ಕೇವಲ ಅಮೇರಿಕನ್ ರಾಯಭಾರಿ ಕಚೇರಿಯ ತಂತಿಗಳು ಮಾತ್ರ ಸುರಕ್ಷಿತವಾಗಿದ್ದವು. ಆದರೆ ಅವನು ಮಾತಾಡಿದ ಪ್ರತಿಯೊಂದು ಶಬ್ದವು ತಮಗೆ ತಿಳಿಯುವಂತೆ ಹಿಮ್ಲರನ ಪರಿವಾರದವರು ಏರ್ಪಾಟು ಮಾಡಿದ್ದರು. ಅಲ್ಲದೆ ವಾರಸಾ ಪಟ್ಟಣದಲ್ಲಿದ್ದ ಅಮೇರಿಕನ್ ರಾಯಭಾರಿ ಕಚೇರಿ ಮತ್ತು ಅವನ ವಾಸ

ಸ್ಥಳವು ಜರ್ಮನಿಯ ವೈಮಾನಿಕ ಬಾಂಬುಗಳಿಂದ ಉಧ್ವಸ್ತವಾದ ಸುದ್ದಿಯು ಕೂಡಲೆ ಗೊತ್ತಾಗುವಂತೆ ಏರ್ಪಡಿಸಲಾಗಿತ್ತು.

ಅಮೇರಿಕೆಯ ರಾಯಭಾರಿಯ ಕಚೇರಿಯು ಉಧ್ವಸ್ತವಾದುದು ಅಚಾನಕ ರೀತಿಯಿಂದಾದದ್ದಿದ್ದಿಲ್ಲ. ಪೋಲಂಡದಲ್ಲಿಯ ಜರ್ಮನ್ ಸರಕಾರದ ಪ್ರತಿನಿಧಿಯ ಕಾರ್ಯದರ್ಶಿಯಾದ ಹರ್ ಸ್ಟ್ರೂವ್ಹನು ಒಂದು ಸಮಾರಂಭಕ್ಕೆ ಹೋದಾಗ ಅಮೇರಿಕನ್ ರಾಯಭಾರಿಯು ಸ್ಟ್ರೂವ್ಹನ ಹೆಂಡತಿಯ ಮುಂದೆ ಸ್ಟ್ರೂವ್ಹನ ಮನನೋಯುವಂತೆ ವಿನೋದ ಮಾಡಿದ್ದನಂತೆ. ಅದನ್ನೇ ಮನ ದಲ್ಲಿ ಹಿಡಿದಿದ್ದ ಸ್ಟ್ರೂವ್ಹನು ಒಂದೊಮ್ಮೆ ಪೋಲಂಡದ ಮೇಲೆ ಜರ್ಮನಿಯು ಏರಿಹೋದದ್ದೇ ಆದರೆ ಅಮೇರಿಕೆಯ ರಾಯಭಾರಿಗೆ ಕಾಲಿಡಲು ಕೂಡ ಸ್ಥಳವಿಲ್ಲದಂತೆ ಅವನ ಕಚೇರಿಯನ್ನು ಉಧ್ವಸ್ತ ಮಾಡಿಸುವದಾಗಿ ಸಾರಿದ್ದ ನಂತೆ. ಈ ರೀತಿಯಾಗಿ ಸ್ಟ್ರೂವ್ಹನು ತನ್ನ ವಚನ ಪಾಲಿಸಿದ.

ಈ ರೀತಿಯಿಂದ ಪೋಲಂಡವು ತನ್ನ ದೃಶ್ಯಾದೃಶ್ಯ ಎದುರಾಳಿಯೊಡನೆ ಹೋರಾಡುತ್ತ ಹೋರಾಡುತ್ತ ಯುರೋಪದ ಭೂಪಟಲದಿಂದ ಕೆಲದಿನಗಳ ವರೆಗಾದರೂ ಮಾಯವಾಯಿತು.

ತನ್ನ ತಾಯ್ನಾಡಿನ ಸ್ವಾತಂತ್ರ್ಯವು ಅಳಿದು ಹೋದ ಕೂಡಲೆ ಸ್ವಾತಂತ್ರ್ಯ ಪ್ರಿಯರಾದ ಅನೇಕ ಪೋಲಂಡದ ನಾಯಕರು ಪೋಲಂಡ ದಿಂದ ಕಾಲ್ತೆಗೆದರು. ಅಸಹಾಯ ಪೋಲಂಡದ ಜನತೆ ತಬ್ಬಲಿಯಾ ಯಿತು. ಅನೇಕರು ಆ ಯಾತನೆಯನ್ನನುಭವಿಸುತ್ತ ಅಲ್ಲಿಯೇ ಕಾಲ ಹರಣ ಮಾಡಲಾರಂಭಿಸಿದರು. ಲಕ್ಷಾವಧಿ ಜನರು ಓಡಿ ಹೋಗಿ ಪ್ರಪಂಚದ ಬೇರೆ ಬೇರೆ ಭಾಗಗಳಿಗೆ ಹೋಗಿ ಪರಕೀಯ ರಾಷ್ಟ್ರಗಳ ಸಹಾಯ ದಿಂದ ಅಲ್ಲಲ್ಲಿ ನೆಲೆಸಿ ಜೀವನ ಸಾಗಿಸಲಾರಂಭಿಸಿದರು. ಭಾರತವೂ ಇಂಥ ಲಕ್ಷಾವಧಿ ಕುಟುಂಬಗಳಿಗೆ ನೆರವನ್ನಿತ್ತಿತು. ಪೋಲಂಡದಿಂದ ಓಡಿಹೋದ ರಾಜಕೀಯ ಮುಂದಾಳುಗಳು ಲಂಡನದಲ್ಲಿ ತಮ್ಮ ರಾಷ್ಟ್ರೀಯ ಸರಕಾರ ವನ್ನಾರಂಭಿಸಿದರು. ಮತ್ತು ಪೋಲಂಡದ ಪುನರ್ವಿಮೋಚನೆಗಾಗಿ ಯತ್ನ ನಡೆಸಿದರು.

ಉಪಸಂಹಾರ

ಈ ರೀತಿಯಾಗಿ ಮೊದಲನೆಯ ಮಹಾ ಯುದ್ಧದಲ್ಲಿ ಸೋತು ಅಧೋಗತಿಗಿಳಿದಿದ್ದ ಜರ್ಮನಿಯು ಮುಂದೆ ಕೇವಲ ಹದಿನೈದು ವರ್ಷಗಳಲ್ಲಿ ಹಿಟ್ಲರನ ನೇತೃತ್ವದಲ್ಲಿ ಚೇತರಿಸಿಕೊಂಡೆದ್ದು ಮತ್ತೊಮ್ಮೆ ಪ್ರಪಂಚದಲ್ಲಿಯ ಪ್ರಥಮ ಶ್ರೇಣಿಯ ಬಲಾಢ್ಯ ರಾಷ್ಟ್ರವಾಗಿ ಹತ್ತು ವರ್ಷಗಳ ಕಾಲ ಮೆರೆಯಿತು. ಜರ್ಮನಿಯಲ್ಲಿಯ ಶಾಸ್ತ್ರಜ್ಞರು, ಯಂತ್ರಕಲಾವಿದರು, ಅರ್ಥಶಾಸ್ತ್ರಜ್ಞರು, ಯೋದ್ಧಾ ಜನರು ಎಲ್ಲರೂ ತಮ್ಮ ಶಕ್ತಿ ಸರ್ವಸ್ವವನ್ನು ಕೇಂದ್ರೀಕರಿಸಿ ಜರ್ಮನಿಯ ಹೆಸರು ಇಡೀ ಪ್ರಪಂಚದಲ್ಲಿ ದುಮುದುಮಿಸುವಂತೆ ಮಾಡಿದರು.

ಇಷ್ಟಕ್ಕೇ ಅವರು ನಿಂತಿದ್ದರೆ ಇಡೀ ಪ್ರಪಂಚವೇ ಜರ್ಮನಿಯನ್ನು ತಮ್ಮ ಆದರ್ಶವನ್ನಾಗಿರಿಸಿಕೊಂಡು ಅದು ಹಾಕಿ ಕೊಟ್ಟ ದಾರಿಯಿಂದ ತಮ್ಮ ದೇಶಗಳನ್ನು ಊರ್ಜಿತಾವಸ್ಥೆಗೆ ಒಯ್ಯಲು ಹೆಣಗುತ್ತಿದ್ದಿತು. ಆದರೆ ಜರ್ಮನಿಯ ಮಹಾತ್ವಾಕಾಂಕ್ಷೆಯೇ ಬೇರೆಯಾಗಿದ್ದಿತು. ಜರ್ಮನರ ರೋಮರೋಮಗಳಲ್ಲಿ ಸೇಡಿನ ವಿಷವು ಹರಿದಾಡುತ್ತಿತ್ತು. ಮೊದಲನೆಯ ಮಹಾ ಯುದ್ಧದಲ್ಲಾದ ಅರ್ಥಹಾನಿ, ಪ್ರಾಣಹಾನಿ, ಮಾನಹಾನಿ ಇವೆಲ್ಲವುಗಳನ್ನು ತುಂಬಿ ತರಲು ಇನ್ನೊಂದು ಮಹಾ ಯುದ್ಧವನ್ನು ಹೂಡಿಯೇ ತೀರಬೇಕು; ಆ ಮಹಾ ಯುದ್ಧದಲ್ಲಿ ತಮಗೆ ಎದುರು ನಿಂತವರೆಲ್ಲರನ್ನು ನಿಃಪಾತ ನೆಲಸಮ ಮಾಡಬೇಕು; ಅಂದರೆ ಮಾತ್ರ ಜರ್ಮನಿಯು ಪ್ರಪಂಚದಲ್ಲಿಯ ಏಕಮೇವಾದ್ವಿತೀಯ ರಾಷ್ಟ್ರವಾಗಿ ಮೆರೆಯುವದು ಸಾಧ್ಯವೆಂಬ ಕಲ್ಪನೆಯನ್ನು ಜರ್ಮನಿಯ ಪ್ರತಿಯೊಬ್ಬ ವ್ಯಕ್ತಿಯ ತಲೆಯಲ್ಲಿ ತುಂಬಲಾಯಿತು. ಈ ತರಹದ ವಿಚಾರಪೂರಿತನಾದ ಜರ್ಮನ ಪ್ರಜೆಯು ತನ್ನ ಪಿತೃಭೂಮಿಗಾಗಿ ಸರ್ವಸ್ವವನ್ನು ಬಲಿದಾನ ಮಾಡಲು ಸಿದ್ಧನಾಗಿ ಹಿಟ್ಲರನ ಬೆನ್ನುಹತ್ತಿದನು. ಇಡೀ ಜರ್ಮನಿಯು ಈ ರೀತಿಯಾಗಿ ಹಿಟ್ಲರನ ಬೆಂಗಾವಲಿಗೆ ಸಿದ್ಧತೆ ನಡೆಸಿದಾಗ ಅವನ ವಿರೋಧಿಗಳಿಗೆ ಅಲ್ಲಿ ಅವಕಾಶವಿಲ್ಲದಾಯಿತು. ಒಬ್ಬೊಬ್ಬರಾಗಿ ಅವರು ಅಲ್ಲಿಂದ ಕಾಲ್ತೆಗೆಯಲಾರಂಭಿಸಿದರು. ಆದರೆ ಎಲ್ಲರೂ ಹೊರಬೀಳಲಿಲ್ಲ. ಅಂಥವರನ್ನು ಹುಡುಕಿ ತೆಗೆಯುವದೇ ಮೊದಮೊದಲು ಹಿಮ್ಲರನ 'ಗೆಸ್ಟೆಪೋ' ದಲದ ಕೆಲಸವಾ

ಗಿತ್ತು. ಆ ಕಾರ್ಯವು ಪೂರ್ತಿಯಾಗಿ ಜರ್ಮನಿಯಲ್ಲಿ ಅಂತಸ್ಥ ಶತ್ರುಗಳ ಉಚ್ಚಾಟನವಾಗಿ ಹಿಟ್ಲರನ ಗೃಹರಂಗವು ಸುಭದ್ರವಾಯಿತು.

ಆವಾಗ ಈ "ಗೆಸ್ಟೆಪೋ" ದಲದ ಚಟುವಟಿಕೆಗಳು ಯುರೋಪದ ಬೇರೆ ಬೇರೆ ದೇಶಗಳಲ್ಲಿ ಪ್ರಾರಂಭವಾದವು. ಮಹಾಚಾಣಾಕ್ಷನೂ ಕುಟಿಲ ನೀತಿ ತಜ್ಞನೂ ಆದ ಹಿಮ್ಲರನು ತನ್ನ ಕೈಯಲ್ಲಿ ನುರಿತ ಈ ದಲದವರನ್ನು ಬೇರೆ ಬೇರೆ ದೇಶಗಳಿಗೆ ಕಳಿಸಿದ. ಅವರು ಪಾದ್ರಿಗಳ ಸೋಗಿನಲ್ಲಿ, ಯಾಂತ್ರಿಕರ ವೇಷದಲ್ಲಿ, ಪ್ರವಾಸಿಕರ ಭೂಮಿಕೆಯಲ್ಲಿ, ವ್ಯಾಪಾರಿಗಳ ಪಾತ್ರದಲ್ಲಿ, ಪತ್ರಿಕೋದ್ಯಮಿಗಳೆಂಬ ನೆವದಲ್ಲಿ ಆಯಾ ಪ್ರದೇಶಗಳಲ್ಲಿಯ ಜನತೆಯೊಡನೆ ಅವರು ಸಮರಸರಾಗಿ ತಮ್ಮ ಚಟುವಟಿಕೆಗಳನ್ನು ಅತಿ ರಹಸ್ಯವಾಗಿ ಪ್ರಾರಂಭಿಸಿದರು. ಇವರ ಈ ಚಟುವಟಿಕೆಗಳ ಪರಿಣಾಮವಾಗಿ ಒಂದು ತೊಟ್ಟು ರಕ್ತ ಬೀಳದೆ ಆಸ್ಟ್ರಿಯಾ ದೇಶವು ನಾತ್ಸಿಗಳ ವಶವಾಯಿತು. ಝೆಕೋಸ್ಲೊವಾಕಿಯಾ ದೇಶವು ಮಣ್ಣುಮುಕ್ಕಿತು. ಪೋಲಂಡವು ಅಧೋಗತಿ ಗಿಳಿಯಿತು. ಡೆನ್ಮಾರ್ಕ್, ಹಾಲಂಡಗಳು ಜರ್ಮನಿಯ ತೊತ್ತಾದವು. ಎರಡೇ ಶತಮಾನಗಳ ಪೂರ್ವದಲ್ಲಿ ಸಮಗ್ರ ಯುರೋಪವನ್ನೇ ಜಯಿಸಿದ ವೀರ ನೆಪೋಲಿಯನ್ ಬೋನಾಪಾರ್ಟೆಯ ಫ್ರಾನ್ಸ್ ದೇಶವಂತೂ ಜರ್ಮನಿಯ ಅಬ್ಬರದ ಏರಾಟಿಕೆಯನ್ನು ಇಪ್ಪತ್ತೆರಡು ದಿನಗಳವರೆಗೆ ಸಹಿತ ತಡೆಯುವದಾಗದೆ ಹಿಟ್ಲರನ ಪಾದದ ಮೇಲೆ ಬಿತ್ತು. ಪ್ರಪಂಚದಲ್ಲಿ ಸೂರ್ಯನು ಮುಳುಗದ ಸಾಮ್ರಾಜ್ಯವಾದ ಬ್ರಿಟಿಶ ಸಾಮ್ರಾಜವು ತತ್ತರಿಸಲಾರಂಭಿಸಿತು.

ಜರ್ಮನಿಯ ಪ್ರಳಯಕಾರೀ ವೈಮಾನಿಕ ದಾಳಿಗಳಿಂದ ಇಂಗ್ಲಂಡದ ಜನತೆ ಹೌಹಾರಿ ಹೋಯಿತು. ಬೋಲ್ಶೆವಿಕ್ ಕ್ರಾಂತಿಯನಂತರ ಉಕ್ಕಿನ ದೇಶವಾಗಿದ್ದ ರಶಿಯವು ಕೂಡ ನಿಃಪಾತವಾಗುವ ಲಕ್ಷಣಗಳು ಕಾಣಿಸ ತೊಡಗಿದವು. ಇನ್ನು ಜರ್ಮನಿ, ಜಪಾನ, ಇಟಲಿಗಳ ಮುಂದೋಟವನ್ನು ತಡೆಯುವ ಶಕ್ತಿ ಪ್ರಪಂಚದಲ್ಲಿ ಯಾರಿಗೂ ಇಲ್ಲವೆಂಬಂತೆ ತೋರಲಾರಂಭಿಸಿತು.

ಆದರೆ ಯಾವುದಕ್ಕೂ ಒಂದು ಇತಿಮಿತಿ ಇದೆ.ಚಕ್ರನೇಮಿಕ್ರಮದಂತೆ ಪ್ರತಿಯೊಂದು ದೇಶಕ್ಕೂ ಪ್ರತಿಯೊಂದು ವ್ಯಕ್ತಿಗೂ ಉತ್ಕರ್ಷ ಅಪಕರ್ಷಗಳ

ದಿನಗಳು ಬಂದೇ ತೀರುವವು. ಜರ್ಮನಿಯು ಅಲ್ಪಾವಧಿಯಲ್ಲಿ ಮೇಲಕ್ಕೇರಲು ನ್ಯಾಯ ನೀತಿಗಳ ಪರಿವೆಯಿಲ್ಲದೆ ಮುಂದೋಡುತ್ತ ಮುಂದೋಡುತ್ತ ಅವಸರದಿಂದ ಶಕ್ತಿ ಪಡೆದು ಆ ಶಕ್ತಿಯ ವಿನಿಯೋಗವನ್ನು ತನ್ನ ಮಹತ್ವಾಕಾಂಕ್ಷೆಯನ್ನೀಡೇರಿಸಲು ಉಪಯೋಗಿಸಿಕೊಂಡಿದ್ದೇ ಅದಕ್ಕೆ ಮುಳುವಾಯಿತು. ಹನ್ನೆರಡು ವರ್ಷಗಳವರೆಗೆ ಪ್ರಪಂಚದ ರಾಷ್ಟ್ರ ರಾಷ್ಟ್ರಗಳ ಕಣ್ಣಲ್ಲಿ ಒತ್ತುತ್ತಿದ್ದ ಜರ್ಮನಿಗೆ ಎರಡನೇ ಮಹಾ ಯುದ್ಧದಲ್ಲಿ ಮೊದ ಮೊದಲು ಜಯ ದೊರಕಿದರೂ ಮುಂದೆ ಪ್ರಪಂಚದ ಇತರ ಎಲ್ಲ ರಾಷ್ಟ್ರಗಳ ಸಂಯುಕ್ತ ಬಲದ ಎದುರು ನಿಲ್ಲುವದಾಗಲಿಲ್ಲ. ಬಡಿದಾಡುತ್ತ ಬಡಿದಾಡುತ್ತ ಜರ್ಮನಿಯು, ಯುರೋಪದಲ್ಲಿಯ ಅತಿ ಬಲಾಢ್ಯ ರಾಷ್ಟ್ರವಾದ ಜರ್ಮನಿಯು, ಈ ಯಂತ್ರ ಯುಗದಲ್ಲಿ ನವನವೀನ ಶೋಧಗಳಿಂದ ಪ್ರಪಂಚವನ್ನೇ ಬೆರಗುಗೊಳಿದ ಜರ್ಮನಿಯು, ಯುರೋಪದಲ್ಲಿಯೇ ಹೇಳ ಹೆಸರಿಲ್ಲದಂತೆ ಮಾಯವಾಯ್ತು. ಇಡೀ ಯುರೋಪದ ತುಂಬೆಲ್ಲ ತನ್ನ ಪ್ರಭುತ್ವವನ್ನು ಸ್ಥಾಪಿಸಲು ಹೊರಬಿದ್ದ ಜರ್ಮನಿಯು ಕೊನೆಗೆ ಫ್ರಾನ್ಸ್, ಬ್ರಿಟನ್, ರಶಿಯಾ ಮತ್ತು ಅಮೇರಿಕೆಗಳ ತೊತ್ತಾಗಿಹೋಯಿತು. ನಾತ್ಸೀ ಜರ್ಮನಿಯ ಅನೇಕ ನಾಯಕರು ಆತ್ಮಹತ್ಯೆ ಮಾಡಿಕೊಂಡರು. ಇನ್ನು ಹಲವರು ವಿಜಯೀ ರಾಷ್ಟ್ರಗಳಿಂದ ಸೆರೆ ಹಿಡಿಯಲ್ಪಟ್ಟು ದೀರ್ಘ ಕಾಲದ ವರೆಗೆ ಶಿಕ್ಷಿಸಲ್ಪಟ್ಟರು. ಹಿಮ್ಲರನು ಆತ್ಮಹತ್ಯೆ ಮಾಡಿಕೊಂಡ. ಹಿಟ್ಲರನೂ ಆತ್ಮಹತ್ಯೆ ಮಾಡಿಕೊಂಡನಂತೆ. ಆದರೆ ಅವನು ಜೀವಂತನಿರುವನೆಂದು ಅನೇಕರ ಭಾವನೆ. ಜರ್ಮನರಂತೂ ಅವನು ಇನ್ನೂ ಜೀವಿಸಿರುವನೆಂದೂ ಯೋಗ್ಯ ಸಮಯಕ್ಕೆ ಮುಂದೆ ಬಂದು ಮತ್ತೊಮ್ಮೆ ಜರ್ಮನಿಯನ್ನು ಉದ್ಧರಿಸುವನೆಂದೂ ತಿಳಿದುಕೊಂಡಿದ್ದಾರೆ.

ಅಂತೂ ಯುರೋಪಖಂಡದ ರಾಜಕೀಯ ರಂಗಭೂಮಿಯ ಮೇಲೆ ಹನ್ನೆರಡು ವರ್ಷಕಾಲ ತಮ್ಮ ಪ್ರಮುಖ ಭೂಮಿಕೆಗಳಿಂದ ಹಿಟ್ಲರ, ಹಿಮ್ಲರ, ಗ್ಯೊರಿಂಗ್, ಗ್ಯೋಬೆಲ್ಸ ಮೊದಲಾದ ಜರ್ಮನಿಯ ಪ್ರಥಮ ಶ್ರೇಣಿಯ ನಾಯಕರು ಪ್ರಪಂಚದ ಆಧುನಿಕ ಇತಿಹಾಸದಲ್ಲಿ ಒಂದು ಮಹತ್ವದ ಸ್ಥಾನವನ್ನು ಪಡೆದಿರುವರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಸಮಾಪ್ತ

ಕೆಂಪು ಕೂದಲ ಸಮಿತಿ

ಹೋದ ಶರತ್ಕಾಲದಲ್ಲಿ ಶ್ರೀಮಾನ್ ಸರಲಾಕ್ಷ ಹುಲಿಮೀಶೆಯವರು ಒಂದು ದಿನ ತಮ್ಮಲ್ಲಿಗೆ ಉಪಹಾರಕ್ಕೆ ಬರಬೇಕೆಂದು ಬಿನ್ನವಿಸಿಕೊಂಡರು. ಆ ಪ್ರಕಾರ ನಾನು ಅವರ ಮನೆಗೆ ಆ ದಿನ ಹೋದೆನು. ಅವರು ಕುಳಿತ ಕೋಣೆಯನ್ನು ಪ್ರವೇಶಿಸಿದೆನು. ಹುಲಿಮೀಶೆಯವರು ಆಗ ಒಬ್ಬರ ಸಂಗಡ ಏನೋ ಮಾತಾಡುತ್ತ ಕುಳಿತಿದ್ದರು. ಇಬ್ಬರೂ ಮಾತಿನಲ್ಲಿ ತಲ್ಲೀನರಾಗಿದ್ಧರು. ಆ ಇನ್ನೊಬ್ಬ ವ್ಯಕ್ತಿಯು ನನಗೆ ಪೂರ್ಣ ಅಪರಿಚಿತನು. ವಯಸ್ಸಾದವನು, ಬಹು ಸ್ಥೂಲವಾದ ದೇಹ, ಉದ್ದನ್ನ ಮುಖ, ಕೆಂಪು ಕೂದಲಿನ ತಲೆ, ಇವು ಅವನಲ್ಲಿ ಎದ್ದು ಕಾಣುತ್ತಿದ್ದವು.

ಇಬ್ಬರೂ ಮಾತಿನಲ್ಲಿ ಇದ್ದುದನ್ನು ಕಂಡು "ಕ್ಷಮಿಸಿರಿ" ಎಂದು ನಾನು ಹೊರ ಹೊರಡುವವನಿದ್ದೆನು. ಅಷ್ಟರಲ್ಲಿ ಹುಲಿ ಮೀಶೆಯವರು ನನ್ನನ್ನು ಎಳೆದು ಒಂದು ಕುರ್ಚಿಯಲ್ಲಿ ಕುಳ್ಳಿರಿಸಿ ಕೋಣೆಯ ಬಾಗಿಲನ್ನು ಇಕ್ಕಿ "ಪ್ರಿಯ ವಾಮನರಾಯರೇ, ಎಂಥ ಸರಿಯಾದ ಹೊತ್ತಿನಲ್ಲಿ ನೀವು ಬಂದುಬಿಟ್ಟಿರಿ." ಎಂದು ನನ್ನನ್ನು ಸ್ವಾಗತಿಸಿದರು.

ನಾನು:— "ಆದರೆ, ನೀವಿಬ್ಬರೂ ಯಾವದೋ ಮಾತಿನಲ್ಲಿರುವಿರಿ."

ಹುಲಿ:— ನಿಜ ಒಂದು ವಿಷಯವನ್ನು ವಿವೇಚಿಸುತ್ತಿದ್ದೆವು.

ನಾನು:—ಹಾಗಾದರೆ ಸಾಗಲಿ. ನಿಮ್ಮ ಮಾತು ಕಥೆಗಳು ಮುಗಿಯುವ ವರೆಗೆ ನಾನು ಕೆಳಗೆ ದಿವಾನಖಾನೆಯಲ್ಲಿ ಕುಳಿತುಕೊಳ್ಳುವೆನು.

ಹುಲಿ:— ಛೆ ಛೆ! ನಿಮ್ಮಿಂದ ಅಂತರವೇ ? (ವ್ಯಕ್ತಿಯನ್ನು ಉದ್ದೇಶಿಸಿ) ವಿನಾಯಕರಾಯರೇ, ಈ ಮಹಾಶಯರು ನನ್ನ ಗೆಳೆಯರು. ನನಗೆ ಅನೇಕ

ವೇಳೆ ಪತ್ತೇದಾರಿ ಮೊಕದ್ದಿಮೆಗಳಲ್ಲಿ ಸಹಾಯಕರಾಗಿ ವರ್ತಿಸಿದ್ದಾರೆ. ಈಗ ನಿಮ್ಮ ಮೊಕದ್ದಿಮೆಯಲ್ಲಿಯೂ ಇವರಿಂದ ಸಹಾಯವು ಬಹುಮಟ್ಟಿಗೆ ದೊರಕ ಬಹುದೆಂಬ ಆಶೆಯಿದೆ.

ಸ್ಥೂಲಕಾಯದ ಮನುಷ್ಯನು ತಾನು ಕುಳಿತ ಕುರ್ಚಿಯಿಂದ ತುಸು ಮೇಲಕ್ಕೆದ್ದು ವಾಮನರಾಯರಿಗೆ ನಮಿಸಿದನು. ಆದರವನ್ನು ತೋರುವ ಅವನ ಕಣ್ಣುಗಳು ಅವರಿಗೆ ಸ್ವಾಗತವನ್ನಿತ್ತವು.

ಹುಲಿ ಮೀಶೆಯವರು ಆರಾಮ ಖುರ್ಚಿಯಲ್ಲಿ ಒರಗಿಕೊಂಡರು. ಕೈಬೆರಳುಗಳ ತುದಿಗಳಿಂದ ಚಪ್ಪಾಳೆಯನ್ನಿಕ್ಕುತ್ತ ನುಡಿದರು:—

"ಏಕೆ? ಹರಟಿ ಸಾಗಬಹುದಲ್ಲಾ............ ಈಗ ಇಲ್ಲಿ ಈ ವಿನಾಯಕರಾಯರು ಬಂದು ಕುಳಿತಿದ್ದಾರೆ. ಒಂದು ಕತೆಯನ್ನು ವಿವರಿಸುತ್ತಿದ್ದಾರೆ. ಇದು ಬಹು ವಿಲಕ್ಷಣವಾದ ಸನ್ನಿವೇಶಗಳುಳ್ಳ ಕತೆಯಿರಬಹುದೆಂದು ನನಗಂತೂ ಅನಿಸುವದು. ಬಹು ವಿಲಕ್ಷಣವಾದ ಸನ್ನಿವೇಶಗಳುಳ್ಳ ಕತೆಯಿದ್ದರೆ ಅಲ್ಲಿ ಬಹು ಘೋರವಾದ ಅಪರಾಧಗಳು ಜರುಗಿರಲೇ ಬೇಕು, ನಿಸ್ಸಂಶಯವಾಗಿ ಜರುಗಿರಬೇಕು. ವಿನಾಯಕರಾಯರು ಹೇಳುವ ಕತೆಯನ್ನು ಕೇಳಿದರೆ ಅಪರಾಧವು ಸಂಭವಿಸಿರುವದೋ ಇಲ್ಲವೋ ಹೇಳಲಾರೆ. ಆದರೆ ಈ ಕತೆಯು ಮಾತ್ರ ವಿಲಕ್ಷಣವಾದದ್ದು...ವಿನಾಯಕರಾಯರೇ, ಈ ಕತೆಯನ್ನು ಮತ್ತೆ ಮೊದಲಿನಿಂದ ಹೇಳಿರಿ. ಈ ಕತೆಯಲ್ಲಿಯ ಪ್ರತಿಯೊಂದು ಭಾಗದ ವಿವರವನ್ನು ಸಾದ್ಯಂತವಾಗಿ ತಿಳಿದುಕೊಳ್ಳುವದು ನನಗೆ ಅವಶ್ಯವಿದೆ.''

ಸ್ಥೂಲ ಕಾಯದ ವಿನಾಯಕರಾಯರು ಗಂಭೀರರಾಗಿ ಎದೆಯುಬ್ಬಿಸಿ ಕುಳಿತರು. ಕೋಟಿನ ಒಳಕಿಸೆಯಲ್ಲಿಂದ ಒಂದು ಹಳೇ ವರ್ತಮಾನಪತ್ರವನ್ನು ತೆಗೆದರು. ಅದು ಮುದುಡಿ ಮುದುಡಿಯಾಗಿ ಬಹು ಹೊಲಸಾಗಿದ್ದಿತು. ಅದನ್ನು ತಮ್ಮ ತೊಡೆಯಮೇಲಿಟ್ಟುಕೊಂಡು, ಅಲ್ಲಿ ಛಾಪಿಸಿದ ಜಾಹೀರಾತನ್ನು ಓದುವದಕ್ಕಾಗಿ ತಲೆಬಾಗಿಸಿದರು. ಆಗ ನಾನು ಅವರ ಆಕೃತಿ, ಉಡುಪು ತೊಡಪುಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದೆನು. ಅವರ ವೇಷಭೂಷಣಗಳು ನಮ್ಮಲ್ಲಿಯ ವ್ಯಾಪಾರಿಯಂತೆಯೇ ಇದ್ದವು......! ತಲೆಯ ಮೇಲೆ ಹೊಳೆಯುವ ಕೆಂಪು ಕೂದಲು, ಮುಖದ ಮೇಲೆ ನಿರಾಶೆ

ಮತ್ತು ನಿಸ್ಸತ್ವದ ಕಳೆ, ಇವೆರಡನ್ನು ಬಿಟ್ಟರೆ ಮತ್ತೇನೂ ಹೆಚ್ಚು ಅವರ ಆಗಿನ ಮುಖಮುದ್ರೆ ಅಥವಾ ವೇಷಭೂಷಣಗಳಿಂದ ಕಂಡು ಬರಲಿಲ್ಲ.

ನಾನು ಸರಲಾಕ್ಷರ ಕಡೆಗೆ ನೋಡಿದೆನು. ನನ್ನ ನೋಟಕ್ಕೆ ಉತ್ತರ ವೆಂದು ಅವರು ಮುಗುಳು ನಗೆ ನಕ್ಕರು. “ಎಷ್ಟು ಸಂಗತಿ ದೊರಕಿಸಿದಿರಿ” ಎಂದು ಕೇಳುವವರಂತೆ ತಲೆಯನ್ನು ಅಲ್ಲಾಡಿಸಿದರು, ಮತ್ತು ನುಡಿದರು. “ವಿನಾಯಕರಾಯರು ದೈಹಿಕ ಕೆಲಸವನ್ನು ಕೆಲವು ದಿನಗಳ ಮಟ್ಟಿಗೆ ಕೈ ಕೊಂಡಿದ್ದರು. ಇವರು ಇತ್ತಿತ್ತಲಾಗಿ ಬರೆಯುವದರಲ್ಲಿ ಕಾಲ ಕಳೆಯು ತ್ತಿದ್ದರು. ಇಷ್ಟೇ ನಾನು ಸದ್ಯದ ಮಟ್ಟಿಗೆ ಹೇಳಬಲ್ಲೆ.”

ವಿನಾಯಕರಾಯರು ಹಾರಿಬಿದ್ದಂತೆ ಕುರ್ಚಿಯಲ್ಲಿ ನೆಟ್ಟಗೆ ಕುಳಿತರು. ಕೈ ಬೆರಳು ವರ್ತಮಾನಪತ್ರದ ಮೇಲೆಯೇ ಇತ್ತು. “ಇವೆಲ್ಲ ನಿಮಗೆ ಹೇಗೆ ತಿಳಿದವು ಸರಲಾಕ್ಷರೇ, ಅದರಲ್ಲಿಯೂ ನಾನು ದೈಹಿಕ ಶ್ರಮದ ಕೆಲಸ ವನ್ನು ಕೈಕೊಂಡದ್ದು ನಿಮಗೆ ತಿಳಿದುದು ಬಹು ಆಶ್ಚರ್ಯ.” ಎಲ್ಲಕ್ಕೂ ಮೊದಲು ಚಿಕ್ಕಂದಿನಲ್ಲಿ ಬಡಿಗತನ ಮಾಡಿ ನಾನು ಜೀವನ ಸಾಗಿಸುತ್ತಿದ್ದೆನು.

ಹುಲಿ:— ಇದನ್ನು ನಾನು ನಿಮ್ಮ ತೋಳುಗಳಿಂದ ತಿಳಿದುಕೊಂಡೆನು. ನಿಮ್ಮ ಬಲದೋಳು ಎಡತೋಳಿನಕಿಂತ ಹೆಚ್ಚು ಪುಷ್ಟವಾಗಿದೆ. ನೀವು ಬಲಗೈ ಯಿಂದ ಕೆಲಸ ಮಾಡಿರುವಿರಿ. ಆದುದರಿಂದ ಎಡತೋಳಿನಕಿಂತ ಅದರಲ್ಲಿಯ ಸ್ನಾಯುಗಳು ಹೆಚ್ಚು ವೃದ್ಧಿ ಹೊಂದಿವೆ......

ವಿನಾ:— ಸರಿಯಾಯಿತು. ಆದರೆ ನಾನು ಬರೆಯುವದನ್ನು ಕೈಕೊಂಡದ್ದು......

ಹುಲಿ— ನಿಮ್ಮ ಶರ್ಟಿನ ಬಲದ ಕಫ್ಪು (Cuff) ಎಡಕಪ್ಪಿನಷ್ಟು ಸ್ವಚ್ಛವಾಗಿಲ್ಲ. ಮತ್ತು ಎಡ ಮೊಳಕೈಯನ್ನು ಡೆಸ್ಕಿನ ಮೇಲೆ ಊರಿರುವದ ದರಿಂದ ಅಲ್ಲಿ ಕೋಟು ಮಲಿನವಾಗಿದೆ,

ವಿನಾಯಕರಾಯರು ಗಹಗಹಿಸಿ ನಕ್ಕರು.

ವಿನಾ:— ವಾ! ಎಷ್ಟು ಚಾಣಾಕ್ಷರಿರುವಿರಿ ನೀವು! ನಿಮ್ಮ ಮಾತಿಗೆ ಮೊದಲು ನನಗೆ ಬಹು ಆಶ್ಚರ್ಯವಾಯಿತು. ಆದರೆ ಈಗ ನೀವು ನನ್ನನ್ನು ಸೂಕ್ಷ್ಮ ದೃಷ್ಟಿಯಿಂದ ನೋಡಿ ಊಹಿಸಿದ್ದನ್ನು ಕಂಡರೆ ಇದರಲ್ಲಿ ಆಶ್ಚರ್ಯ

ಪಡುವಂತಹದೇನೂ ಇಲ್ಲವೆಂದು ಅನಿಸುವದು.

ಹುಲಿ:— ವಾಮನರಾಯರೇ, ನಾನು ಈ ರೀತಿ ವಿವರಿಸಬಾರದಿತ್ತು ಏಕಂದರೆ 'ದೂರಿನ ಗುಡ್ಡ ಕಣ್ಣಿಗೆ ನುಣುಪು.' ನನ್ನ ಯೋಗ್ಯತೆಯ ವಿಷಯಕ್ಕೆ ಹೆರವರಲ್ಲಿದ್ದ ಅಗಾಧವಾದ ಭಾವನೆಯು ಇನ್ನು ಮುಂದೆ ಅಳಿಯಬಹುದಲ್ಲಾ ಎಂಬ ಅಂಜಿಕೆಯಾಗಿದೆ ನನಗೆ......ವಿನಾಯಕರಾಯರೇ ಆ ಜಾಹೀರಾತು ಸಿಕ್ಕಿತೇನು ?

ವಿನಾ:— ಓಹೋ ಸಿಗದೇ ಏನು! ನೀವೇ ಓದಿ ನೋಡಿರಿ, ಇಲ್ಲಿಯೇ ಇದೆ!! ಎನ್ನುತ್ತ ನನ್ನ ಕೈಯಲ್ಲಿ ಆ ಪತ್ರವನ್ನು ಕೊಟ್ಟರು. ನಾನು ಓದ ತೊಡಗಿದೆನು.

ಬೇಕಾಗಿದೆ ! ಬೇಕಾಗಿದೆ !!

ಕೆಂಪು ಕೂದಲದ ಸಮಿತಿಗಾಗಿ ಒಬ್ಬ ಕೆಲಸಗಾರನು ಬೇಕಾಗಿದ್ದಾನೆ. ಈಗಿದ್ದ ಲಿಂಗಪ್ಪ ಎಂಬುವನು ತನ್ನ ಅಬಚಿಗೆ ದತ್ತಕನಾಗಿ ಹೋದನು. ಆ ಸ್ಥಳ ತೆರವಾಗಿದೆ. ಅದಕ್ಕಾಗಿ ಒಬ್ಬನು ಬೇಕಾಗಿದ್ದಾನೆ. ಪ್ರತಿವಾರಕ್ಕೆ ೬೦ ರೂಪಾಯಿ ಪಗಾರ. "ಕೆಲಸ"... ಹೆಸರಿಗೆ ಮಾತ್ರ ತುಸು ಕೆಲಸ. ಕೆಂಪು ತಲೆಗೂದಲುಳ್ಳವರು ಮಾತ್ರ ಅರ್ಜಿ ತರಬೇಕು. ದೃಢಕಾಯನಾಗಿದ್ದು ಉಮೇದವಾರನು ೨೧ ವಯಸ್ಸಿಗೆ ಮೀರಿದವನಿರಬೇಕು. ನಾಳಿನ ಸೋಮವಾರ ಮಧ್ಯಾನ್ಹ ಸರಿಯಾಗಿ ಹನ್ನೊಂದು ಘಂಟಿಗೆ ಸ್ವತಃ ಉಮೇದವಾರರೇ ಅರ್ಜಿಯನ್ನು ತೆಗೆದುಕೊಂಡು ನಮ್ಮ ಕಚೇರಿಗೆ ಬರಬೇಕು.

—ಸಮಿತಿ ಕಚೇರಿ

ದೇಸಾಯರ ಓಣಿ

ಪುನಃ ಇದನ್ನು ಓದಿದೆನು. ಎಂತಹ ವಿಲಕ್ಷಣವಾದ ಜಾಹೀರಾತಿದು!

ಸರಲಾಕ್ಷ ಹುಲಿ ಮೀಶೆಯವರು ನಕ್ಕರು. ಉತ್ಸಾಹದಿಂದ ಕುರ್ಚಿ ಯಲ್ಲಿಯೇ ಜಿಗಿದು ಕುಳಿತುಕೊಂಡರು.

"ಬಲಿಯನ್ನು ಹೇಗೆ ಒಗೆದಿದ್ದಾನೆ ನೋಡಿದಿರಾ? ವಿನಾಯಕರಾಯರೇ ನಿಮ್ಮ ಸ್ಥಿತಿಗತಿ, ಮನೆತನದ ವಿಷಯ ಈ ಜಾಹೀರಾತು ನಿಮಗೆ ಸಿಕ್ಕ ಬಗೆ ಎಲ್ಲವನ್ನೂ ವಿಶದವಾಗಿ ಹೇಳಿರಿ. ವೈದ್ಯ ಮಹಾಶಯ, ನೀವು ಈ ವರ್ತಮಾನಪತ್ರದ ಹೆಸರು, ಮತ್ತು ತಾರೀಖುಗಳ ಟಿಪ್ಪಣೆಯನ್ನು ತೆಗೆದುಕೊಳ್ಳಿರಿ.

ನಾನು:—ಇದು ಎಪ್ರಿಲ್ ೨೭ನೇ ತಾರೀಖಿನ "ಕನ್ನಡಿಗ" ಅಂದರೆ ಇಂದಿಗೆ ಎರಡು ತಿಂಗಳ ಹಿಂದಿನದು.

ಸರಲಾಕ್ಷ:—ಒಳ್ಳೇದು......ಹುಂ ವಿನಾಯಕರಾಯರೇ............

"ನಾನು ನಿಮಗೆ ಹೇಳಿದೆನಲ್ಲಾ" ವಿನಾಯಕ ರಾಯರು ಹಣೆಯ ಮೇಲಿನ ಬೆವರನ್ನು ಬೆರಳಿನಿಂದ ಒರಿಸಿತೆಗೆದು ಅತ್ತ ಕೊಡವಿದರು "ಅಲ್ಲಿಯೇ, ದುರಗನಹೊಟ್ಟೆ ಓಣಿಯಲ್ಲಿ ಒಂದು ಮನೆಯಲ್ಲಿ ಇದ್ದು ಒಂದು ಬಂಗಾರದ ಅಂಗಡಿಯನ್ನು ಚಿಕ್ಕ ಪ್ರಮಾಣದಲ್ಲಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೇನೆ. ಬಡ್ಡೀ ವ್ಯವಹಾರವೂ ಇದೆ. ಆದರೂ ವ್ಯವಹಾರ ಚನ್ನಾಗಿಲ್ಲ. ಹೋದ ವರುಷವಂತೂ ಹೊಟ್ಟೆ ಬಟ್ಟೆ ಸಾಗಿಸಬೇಕಾದರೆ ಸಾಕುಬೇಕಾಗಿ ಹೋಯಿತು. ಮೊದಲು ಇಬ್ಬರು ಕಾರಕೂನರನ್ನು ಇಟ್ಟುಕೊಂಡಿದ್ದೆನು. ಈಗ ಒಬ್ಬನೇ ಇರುವನು. ಇವನಿಗೆ ಪಗಾರ ಕೊಡುವದು ಸಹ ಕಷ್ಟವಾಗಿತ್ತು. ಆದರೆ "ಈ ವ್ಯವಹಾರ ಕಲಿಯಲು ನಾನು ನಿಮ್ಮಲ್ಲಿ ನೌಕರಿಗಾಗಿ ಬಂದಿದ್ದೇನೆ. ಮೊದಲಿನವನಿಗೆ ಕೊಡುವುದರ ಅರ್ಧಪಗಾರ ನನಗೆ ಕೊಡಿರಿ ಸಾಕು" ಎಂದು ನಮ್ಮಲ್ಲಿ ಬಂದು ನಿಂತನು. ಅದಕ್ಕಾಗಿ ನಾನು ಅವನನ್ನು ಇಟ್ಟುಕೊಂಡಿದ್ದೇನೆ.

ಸರಲಾಕ್ಷಃ— ಇಂತಹ ತರುಣನಾರು ?

ವಿನಾ:— ಈ ತರುಣನ ಹೆಸರು ವಸಂತರಾಯನೆಂದು. ಇವನ ವಯಸ್ಸೆಷ್ಟು ಹೇಳಲಾರೆ. ಆದರೆ ಇವನು ಬಹು ಚುರುಕು ಬುದ್ಧಿಯವನು ಬಡ್ಡೀ ವ್ಯವಹಾರವನ್ನು ನನಗಿಂತಲೂ ಜಾಣತನದಿಂದ ಮಾಡಿ ತನಗೆ ಸಲ್ಲತಕ್ಕ ಪಗಾರದ ಎರಡರಷ್ಟು ಲಾಭವನ್ನು ತೋರುವನು. ಆದರೂ ನಾನು ಕೊಟ್ಟಷ್ಟಕ್ಕೇ ಸಂತುಷ್ಟನಾಗಿದ್ದಾನೆ.

ಸರಲಾಕ್ಷ:— ಸರಿ ಇಂಥ ಜಾಣನಾದ ಕಾರಕೂನನು ಇಷ್ಟು ಸಣ್ಣ

ಪಗಾರಕ್ಕೆ ದೊರೆತನೆಂದ ಮೇಲೆ ನೀವೇ ಸುದೈವಿಗಳು. ಹೀಗೆ ಸಿಗುವದು ತೀರ ವಿರಲ.

ವಿನಾ:—ಇವನಲ್ಲಿಯೂ ಅನೇಕ ಕುಂದುಗಳಿವೆ. ಫೋಟೋ ತೆಗೆಯುವ ಉಬ್ಬು ಬಹಳ ಇವನಿಗೆ. ಯಾವದಾದರೊಂದು ಸುಂದರವಾದ ವಸ್ತು ಅಥವಾ ದೃಶ್ಯಗಳನ್ನು ಕಂಡರೆ ಅವುಗಳ ಫೋಟೋ ತೆಗೆದುಕೊಂಡೇ ಬಿಡುವನು. ಆ ಮೇಲೆ ನೆಲಮನೆಯಲ್ಲಿ ಕುಳಿತು ಅವುಗಳನ್ನು ತೊಳೆಯತೊಡಗುವನು. ಇದರಲ್ಲಿಯೇ ತನ್ನ ಎಲ್ಲ ವೇಳೆಯನ್ನು ವೆಚ್ಚಮಾಡುವನು. ಆದರೂ ಒಳ್ಳೆಯ ಹುಡುಗ. ವ್ಯವಹಾರವನ್ನು ಚನ್ನಾಗಿ ಮಾಡುತ್ತಾನೆ. ಮತ್ತು ಯಾದ ದುಶ್ಚಟಗಳೂ ಅವನಲ್ಲಿದ್ದಂತೆ ಇನ್ನೂ ನನಗೆ ಕಂಡುಬಂದಿಲ್ಲ.

ಸರಲಾಕ್ಷ:—ಈಗವನು ನಿಮ್ಮಲ್ಲಿಯೇ ಇದ್ದಾನೆ!

ವಿನಾ:— ಅಹುದು. ಅವನು, ಅವನ ಅಣ್ಣನ ಹೆಂಡತಿ ವಿಧವೆ, ಮತ್ತು ನಾನು. ಹೀಗೆ ಮೂವರೂ ಒಂದೇ ಮನೆಯಲ್ಲಿರುವೆವು. ಆ ವಿಧವೆಯು ಮನೆಗೆಲಸ ನೋಡಿಕೊಂಡಿರುವಳು. ನನ್ನ ಹೆಂಡತಿ ಸತ್ತಿದ್ದಾಳೆ. ಪುನಃ ಮದುವೆಯಾಗುವ ವಿಚಾರ ನನಗಿಲ್ಲ. ಬಡ್ಡೀವ್ಯವಹಾರ ಮಾಡಿಕೊಂಡು ಬಂದದ್ದರಲ್ಲಿ ಸುಖವಾಗಿರಬೇಕೆಂದರೆ ಈ ಜಾಹೀರಾತು ಇಷ್ಟೆಲ್ಲ ಗೊಂದಲದಲ್ಲಿ ನನ್ನನ್ನು ಕೆಡವಿತು. ಈಗ ಎಂಟು ವಾರಗಳ ಹಿಂದೆ ವಸಂತನು ಇದೇ ವರ್ತಮಾನಪತ್ರವನ್ನು ತೆಗೆದುಕೊಂಡು ಬಂದು ನನ್ನೆದುರು ನಿಂತು "ದೇವಾ ನನಗೆ ಕೆಂಪು ಕೂದಲುಗಳನ್ನು ಕೊಟ್ಟಿದ್ದರೆ ನನ್ನ ಮೇಲೆ ನಿನ್ನದೆಷ್ಟು ಉಪಕಾರವಾಗುತ್ತಿತ್ತಲ್ಲಾ..." ಎಂದನು.

"ಅದೇಕಪ್ಪಾ ?" ಎಂದು ನಾನು ಪ್ರಶ್ನಿಸಿದೆನು.

ವಸಂತ:— 'ಏಕೆ' ಎಂದು ಕೇಳುವಿರಾ ? ಇಲ್ಲಿ ನೋಡಿರಿ ಕೆಂಪು ಕೂದಲ ಸಮಿತಿಯಲ್ಲಿ ಒಂದು ಸ್ಥಳ ತೆರವಾಗಿದೆಯಂತೆ. ಆ ಸ್ಥಳದಲ್ಲಿ ಕೆಲಸ ಮಾಡಲು ಅರ್ಜೀದಾರರನ್ನು ಬೇಡಿದ್ದಾರೆ. ನೌಕರಿ ಸಿಕ್ಕ ಉಮೇದವಾರನು ಸುದೈವಿಯು. ನನ್ನ ತಲೆಗೂದಲು ಕೆಂಪು ಬಣ್ಣದವಿದ್ದರೆ ಎಷ್ಟು ಒಳಿತಾಗುತ್ತಿತ್ತು!

"ನೀನು ಹೇಳುವದೇ ನನಗೆ ತಿಳಿಯಲೊಲ್ಲದು" ಎಂದು ನಾನಂದೆನು.

ವಸಂತನಂದನು:— 'ಕೆಂಪುಕೂದಲ ಸಮಿತಿ' ಎಂಬ ಸಂಸ್ಥೆಯೊಂದಿರುವದು. ಅಲ್ಲಿ ಒಂದು ಸ್ಥಳ ತೆರವಾಗಿದೆ. ಅದಕ್ಕಾಗಿ ಒಂದು ಅರ್ಜಿ ಕಳಿಸಿರಿ.

ನಾನು:— ಪಗಾರ ಎಷ್ಟು ?

ವಸಂತ:— ವರುಷಕ್ಕೆ ಸಾವಿರ, ಎರಡು ಸಾವಿರ ಸಿಗಬಹುದು. ಮತ್ತು ಹೇಳಿಕೊಳ್ಳುವಂಥ ಕೆಲಸವೇನೂ ಅಲ್ಲಿಲ್ಲ. ಆ ಕಚೇರಿಯ ಕೆಲಸದ ವೇಳೆಯು ನಿಮ್ಮ ವ್ಯವಹಾರಕ್ಕೆ ಅಡ್ಡ ಬರುವಂತೆಯೂ ಇಲ್ಲ.

ನನ್ನ ಬಾಯಲ್ಲಿ ನೀರು ಒಡೆಯಿತು. ನಮ್ಮ ವ್ಯವಹಾರವೂ ಈಗ ಪ್ರತಿದಿನ ಕಡಿಮೆಯಾಗುತ್ತ ನಡೆದಿದೆ. ಹೀಗಿರುವಾಗ ವರುಷಕ್ಕೆ ಸಾವಿರ, ಎರಡು ಸಾವಿರ ಸಿಕ್ಕರೆ ಕೆಟ್ಟತೇನು ?

ನಾನು ವಸಂತನಿಗಂದೆನು:— "ಏನಿದು ? ಎಲ್ಲವನ್ನೂ ವಿಸ್ತಾರವಾಗಿ ಹೇಳಿ ಬಿಡು" ಎಂದು.

ವಸಂತನು ಜಾಹೀರಾತಿನ ಈ ಪತ್ರವನ್ನು ನನ್ನ ಕೈಯಲ್ಲಿತ್ತನು:—'ಈ ಸಮಿತಿಯಲ್ಲಿ ಒಂದು ಸ್ಥಳ ತೆರವಾಗಿದೆ. ವಿಶೇಷ ವಿವರವನ್ನು ತಿಳಿಯಲು ಒಂದು ವಿಳಾಸವನ್ನು ಕೊಟ್ಟಿದ್ದಾರೆ. ನನಗೆ ತಿಳಿದ ಮಟ್ಟಿಗೆ ಈ ಸಮಿತಿಯನ್ನು ಉತ್ತರದೇಶದ ಹಣಮಂತರಾವ ಜಮೀನದಾರ ಎಂಬವರು ಸ್ಥಾಪಿಸಿದ್ದಾರೆ. ಅವರಿಗೆ ಮಕ್ಕಳಿರಲಿಲ್ಲ. ಅವರ ತಲೆಗೂದಲು ಕೆಂಪುಬಣ್ಣದವಿದ್ದವು. ಅವರು ತೀರಿಕೊಂಡರು. ಅವರ ಮೃತ್ಯುಪತ್ರದಲ್ಲಿ ಹೀಗೆ ಬರೆದದ್ದು ಕಂಡು ಬಂದಿತು 'ನಾನು ಕೂಡಿಟ್ಟ ಧನದ ಬಡ್ಡಿಯನ್ನು ಕೆಂಪುಬಣ್ಣದ ತಲೆಗೂದಲಿದ್ದವರಲ್ಲಿ ಹಂಚಿ ಬಿಡಬೇಕು' ಎಂದು. ಆದುದರಿಂದ ಇಂತಹ ಸಮಿತಿಗಳನ್ನು ಪಂಚರು ಊರೂರಲ್ಲಿ ಸ್ಥಾಪಿಸಿ ಇವರ ಇಚ್ಛೆಯು ಈಡೇರುವಂತೆ ವ್ಯವಸ್ಥೆ ಮಾಡಿದ್ದಾರೆ.

ಆಗ ನಾನಂದೆನು:— ನನ್ನಂತಹ ಕೆಂಪುತಲೆಯವರು ಎಷ್ಟು ಮಂದಿ ಅರ್ಜಿ ಹಾಕಿದ್ದಾರೋ......!

ವಸಂತ:— ಕೆಂಪುಕೂದಲುಳ್ಳ ಜನರು ನೀವು ತಿಳಿದುಕೊಂಡಷ್ಟು ಇಲ್ಲವೇ ಇಲ್ಲ. ಈ ಊರಿನ ಸಮಿತಿಗೆ ಕೇವಲ ಈ ಊರಿನವರೇ ಅರ್ಜಿ

ಹಾಕಬೇಕೆಂಬ ನಿಯಮವಿದೆ. ಅರ್ಜೀದಾರನ ತಲೆಯಮೇಲೆ ತುಸು ಕೆಂಪು ಕೂದಲಿದ್ದರೆ ಅಥವಾ ಅವು ಕೆಂಪುಮೋಡಿಯ ಮೇಲಿದ್ದರೆ ಆಗದು. ಅವು ಅಚ್ಚ ಕೆಂಪುಬಣ್ಣದವಿರಬೇಕು. ಹೀಗೆ ತಲೆಗೂದಲುಳ್ಳವರು ತೀರ ವಿರಳ. ನಿಮ್ಮ ಕೂದಲು ಅಚ್ಚ ಕೆಂಪುಬಣ್ಣದವಿರುವವು. ನೀವು ಪ್ರಯತ್ನ ಮಾಡಿದರೆ ನಿಮಗೇ ಆ ನೌಕರಿ ಸಿಗಬಹುದೆಂದು ನನಗಂತೂ ಅನಿಸುವದು. ಅವನನ್ನು ವದೆಲ್ಲವೂ ನಿಜವೆಂದು ನನಗೆ ತೋರಿತು.

ಆಗ ನಾನು:—" ನನಗಿಂತಲೂ ನಿನಗೆ ಈ ವಿಷಯದಲ್ಲಿ ಹೆಚ್ಚು ಗೊತ್ತಿದೆ. ಕಾರಣ ಒಂದು ದಿನದ ಮಟ್ಟಿಗೆ ಅಂಗಡಿಯನ್ನು ಮುಚ್ಚಿ ನನ್ನ ಸಂಗಡ ನೀನೂ ಬಂದು ಬಿಡು. ಈ ವಿಳಾಸವು ತೋರುವಲ್ಲಿಗೆ ಹೋಗೋಣ" ಎಂದು ಅಂದೆನು. ಒಂದು ದಿನದ ರಜೆ ಸಿಕ್ಕಿದ್ದಕ್ಕೆ ಅವನಿಗೂ ಆನಂದವಾಯಿತು. ನನ್ನ ಸಂಗಡ ಬರಲು ಒಪ್ಪಿದನು.

ಸರಲಾಕ್ಷ ಹುಲಿಮೀಶೆಯವರೇ, ಆ ದಿನ ಬಹಳ ಜನ ಉಮೇದವಾರರು ಬಂದಿದ್ದರು. ಇಷ್ಟು ಜನ ಅರ್ಜಿದಾರರಿರುವಾಗ ಸಮಿತಿಯು ನನ್ನನ್ನೇ ಆರಿಸಬಹುದೆಂಬ ಆಶೆಯು ದೂರಾಗತೊಡಗಿತು. ವಸಂತನಿಗೆ ಮಾತ್ರ ನನ್ನನ್ನೇ ಆರಿಸುವರೆಂಬ ಭರವಸೆ ಇದ್ದಿರಬೇಕು. ಅವನು ಅಷ್ಟು ಉತ್ಸಾಹದಲ್ಲಿದ್ದನು. ಈ ಸಂದಣಿಯೊಳಗಿಂದ ನನ್ನನ್ನು ಎಳೆದೊಯ್ಯತೊಡಗಿದನು. ಅತ್ತಿತ್ತ ಗುದ್ದಾಡುತ್ತ, ತಿಕ್ಕಾಡುತ್ತ, ಅಂತೂ ಒಮ್ಮೆ ಸಮಿತಿಯ ಕಚೇರಿಯಲ್ಲಿ ಪ್ರವೇಶಿಸಿದೆವು.

"ನಿಮ್ಮ ವರ್ಣನೆಯಲ್ಲಿ ಅದ್ಭುತ ಚಮತ್ಕೃತಿಯಿದೆ" ಎಂದರು ಸರಲಾಕ್ಷರು !

" ಆ ಮೇಲೆ ? "

ವಿನಾ:—ಕಚೇರಿಯ ಆಡಂಬರಗಳೇನೂ ಅಲ್ಲಿ ಕಾಣಲಿಲ್ಲ. ಒಂದು ಟೇಬಲ್ಲು ಎರಡು ಖುರ್ಚಿಗಳು ಮಾತ್ರ ಅಲ್ಲಿ ಇದ್ದವು. ಒಂದು ಖುರ್ಚಿಯಲ್ಲಿ ಒಬ್ಬ ತೆಳ್ಳಗಿನ ಗಿಡ್ಡ ವ್ಯಕ್ತಿಯು ಕುಳಿತಿದ್ದನು. ಅವನ ತಲೆಗೂದಲು ನನ್ನವುಗಳಿಗಿಂತ ಕೆಂಪು ಇದ್ದವು. ಪ್ರತಿಯೊಬ್ಬ ಅರ್ಜೀದಾರನಿಗೆ ಅವನು ಕೆಲವು ಪ್ರಶ್ನೆಗಳನ್ನು ಕೇಳುತ್ತಿದ್ದನು. ಅರ್ಜೀದಾರನು ಕೊಟ್ಟ ಉತ್ತರದಲ್ಲಿ

ಏನಾದರೊಂದು ತಪ್ಪುತೆಗೆದು 'ನಿಮಗೆ ನೌಕರಿ ಸಿಗಲಾರದು' ಎಂದು ಹೇಳಿ ಕಳುಹಿ ಬಿಡುತ್ತಿದ್ದನು. ಇದನ್ನೆಲ್ಲ ನೋಡಲಾಗಿ ನೌಕರಿಯನ್ನು ದೊರಕಿಸುವದು ಸುಲಭಸಾಧ್ಯವಲ್ಲವೆಂಬುದು ನನಗೆ ಆಗ ಗೊತ್ತಾಯಿತು. ಇರಲಿ, ಕಡೆಗೊಮ್ಮೆ ನನ್ನ ಸರತಿಯು ಬಂದಿತು. ನಾನು ಸುದೈವಿಯೆಂದೇ ಹೇಳಬೇಕು, ಆ ಅಧಿಕಾರಿಯು ನನ್ನ ಸಂಗಡ ಬಹು ಮೆತ್ತಗೆ ಮಾತಾಡಿದನು. ನಾವು ಕುಳಿತ ಕೋಣೆಯ ಬಾಗಿಲನ್ನು ಇಕ್ಕಿ ನನ್ನ ಸಂಗಡ ಹೆಚ್ಚು ಸಲಿಗೆಯಿಂದ ಮಾತನಾಡಿದನು.

ವಸಂತನೇ ಪ್ರಾರಂಭಿಸಿದನು:—"ಇವರು ವಿನಾಯಕರಾಯರು ನಿಮ್ಮ ಸಮಿತಿಯಲ್ಲಿ ನೌಕರರಾಗಿರಲು ಬಂದಿದ್ದಾರೆ.''

"ನಾವು ಜಾಹೀರಾತಿನಲ್ಲಿ ಕೇಳಿದ ಎಲ್ಲ ಗುಣಗಳೂ ಇವರಲ್ಲಿ ಇದ್ದಂತೆ ತೋರುವದು. ಇವರಕಿಂತ ಹೆಚ್ಚಿನ ಯೋಗ್ಯತೆಯುಳ್ಳ ಉಮೇದವಾರರು ಯಾರೂ ಇಂದು ಬಂದಿಲ್ಲ'' ಎಂದು ಕಾರ್ಯದರ್ಶಿಯು ನುಡಿದನು. ತಾನು ಕುಳಿತಲ್ಲಿಯೇ ಕುರ್ಚಿಯ ಬೆನ್ನನ್ನು ಗೋಡೆಗೆ ಆನಿಸಿ ನನ್ನ ಕೆಂಪು ತಲೆಯನ್ನು ಒಂದೇ ಸವನೇ ದಿಟ್ಟಿಸಿ ನೋಡತೊಡಗಿದನು, ನನಗೆ ನಾಚಿಕೆಯೆನಿಸಿ ತಲೆ ತೆಳಗೆ ಮಾಡಿದೆನು. ಆಗ ಆ ಗಿಡ್ಡ ವ್ಯಕ್ತಿಯ ತಾನು ಕುಳಿತಲ್ಲಿಂದ ಎದ್ದು ನನ್ನೆಡೆಗೆ ಬಂದನು. ನನ್ನ ತಲೆಯ ಮೇಲಿನ ಕೂದಲನ್ನು ತನ್ನ ಕೈಗಳಿಂದ ಸಿಕ್ಕಂತೆ ತಿಕ್ಕಾಡಿದನು. ನಾನು ಕೂದಲಿಗೆ ಬಣ್ಣ ಬಡಿದಿಲ್ಲವೆಂದೂ ಅವು ಸ್ವಾಭಾವಿಕವಾಗಿಯೇ ಕೆಂಪು ಬಂಣದವಿರುವವೆಂದೂ ಮನಗಾಣುವವರೆಗೆ ತಿಕ್ಕಾಡಿದನು "ಇನ್ನು ಸಾಕು ಸಾಕು'' ಎಂದು ಅನಿಸಿಬಿಟ್ಟನು.

ಕಾರ್ಯದರ್ಶಿ:— ಏಕೆ! ನಿಮ್ಮ ಕಣ್ಣಲ್ಲಿ ನೀರು ಬಂದವೇನು " ನಿಮ್ಮ ತಲೆಗೂದಲು ನಿಜವಾಗಿಯೂ ಕೆಂಪು ಬಣ್ಣದವಿರುವವು. ಹಿಂದಕ್ಕೆ ಒಮ್ಮೆ ಹೀಗೆಯೇ ಉಮೇದವಾರನನ್ನು ಆರಿಸುವದಿತ್ತು. ಆಗ ಒಬ್ಬನು ಕೆಂಪು ಬಣ್ಣದ ಟೋಪಣವನ್ನು ಹಾಕಿಕೊಂಡು ಬಂದಿದ್ದನು. ಮತ್ತೊಬ್ಬನು ಬಣ್ಣವನ್ನು ಬಳಿದುಕೊಂಡು ಬಂದಿದ್ದನು. ಆದರೆ ಅದು ನನಗೆ ಆಗ ತಿಳಿಯಲೇ ಇಲ್ಲ. ಮೋಸ ಹೋಗಿ ಬಿಟ್ಟಿದ್ದೆನು. ಆದಕ್ಕಾಗಿ ನಿಮಗೆ ಇಷ್ಟು ತೊಂದರೆ ಕೊಡಬೇಕಾಯಿತು'' ಹೀಗೆ ನುಡಿದು ಆ ಕೋಣೆಯ ಕಿಡಿಕಿಯಿಂದ ಹೊರಗೆ

ಮುಖಹಾಕಿ "ಜಾಗಾ ಭರ್ತಿ ಆತು ನೀವೆಲ್ಲಾರೂ ಹೋಗ್ರಿ" ಎಂದು ಉಚ್ಚ ಸ್ವರದಲ್ಲಿ ಕೆಳಗೆ ನಿಂತ ಅರ್ಜೀದಾರರಿಗೆ ಕೇಳಿಸುವಂತೆ ಕೂಗಿಕೊಂಡನು. ಅರ್ಜೀದಾರರೆಲ್ಲರೂ ನಿರಾಶರಾಗಿ ಏನೇನೋ ಒದರಾಡುತ್ತ ಹೋಗಿಬಿಟ್ಟರು. ಕಡೆಗೆ ನಾನು, ನನ್ನ ಕಾರಕೂನ, ಮತ್ತು ಸಮಿತಿಯ ಕಾರ್ಯದರ್ಶಿಗಳು ಹೀಗೆ ಮೂವರೇ ಉಳಿದೆವು.

ಕಾರ್ಯದರ್ಶಿ:— ನಿಮಗೆ ಈ ನೌಕರಿ ಕೊಡಲು ಬಹು ಆನಂದವಾಗುವದು. ನನಗೆ ದಾಮೋದರರಾಯನೆಂದು ಕರೆಯುವರು. ಸಮಿತಿಯ ಪಂಚರಲ್ಲಿ ನಾನೊಬ್ಬನು ನಾನೂ ಪಿಂಚಣೀದಾರನು........ಇರಲಿ. ಕೆಲಸಕ್ಕೆ ಎಂದು ಹಾಜರಾಗುವಿರಿ ?

" ನಾನು ವ್ಯವಹಾರಸ್ಥನು ಒಮ್ಮೆಲೆ ಏನೆಂದು ಹೇಳಲಿ ! " ಎಂದೆನು.

ವಸಂತ:—ವಿನಾಯಕರಾಯರೇ ನೀವೇಕೆ ಇಷ್ಟು ಯೋಚಿಸುವಿರಿ ? ನಾನಿರುವೆನಲ್ಲ. ನಿಮ್ಮ ವ್ಯವಹಾರವನ್ನು ನಾನು ನೋಡಿಕೊಳ್ಳುತ್ತೇನೆ. ನೀವು ಕೆಲಸದ ಮೇಲೆ ಹಾಜರಾಗಿರಿ.

ನಾನು:— ಕೆಲಸದ ವೇಳೆ ಯಾವುದು ?

ಕಾರ್ಯದರ್ಶಿ:— ಮುಂಜಾನೆ ಹತ್ತುಗಂಟೆಯಿಂದ ಮಧ್ಯಾನ್ಹ ಎರಡರ ವರೆಗೆ ಮಾತ್ರ ನಮ್ಮ ಕಚೇರಿಯು ಚಾಲೂ ಇರುವದು.

ನಾನು:— ಕಚೇರಿಯ ವೇಳೆಯೇನೋ ನನಗೆ ಅನುಕೂಲವಾಗಿಯೇ ಇದೆ, ಎಂದೆನ್ನಬಹುದು. ಆದರೆ ಪಗಾರ......! ?!

ಕಾರ್ಯ:— ವಾರಕ್ಕೆ ೬೦ ರೂಪಾಯಿ.

ನಾನು:— ಕೆಲಸವು ಯಾವ ತರಹದ್ದು ?

ಕಾರ್ಯ:— ಕೆಲಸವೇನು ? ಹೆಸರಿಗೆ ಮಾತ್ರ ಕೆಲಸ. ಹಾಗೆ ನೋಡಿದರೆ ಮಾಡತಕ್ಕಂತಹದು ಯಾವ ಕೆಲಸವೂ ಇಲ್ಲ.

ನಾನು;— ಅಂದರೆ ?

ಕಾರ್ಯ:— ಮುಂಜಾನೆ ಹತ್ತರಿಂದ ಮಧ್ಯಾನ್ಹ ಎರಡರವರೆಗೆ ನೀವು ಆಫೀಸಿನಲ್ಲಿ ಇರಲೇಬೇಕು. ಈ ಮಧ್ಯದಲ್ಲಿ ಆಫೀಸಿನ ಕೊಠಡಿಯನ್ನು ಬಿಟ್ಟು

ಹೊರಗೆ ಹೋದರೆ ಸಾಕು, ನಿಮ್ಮನ್ನು ನೌಕರಿಯಿಂದ ತೆಗೆಯಲಾಗುವದು. ಈ ರೀತಿ ಆ ಮೃತ್ಯುಪತ್ರದಲ್ಲಿಯೇ ಸ್ಪಷ್ಟವಾಗಿ ನಮೂದಿಸಲ್ಪಟ್ಟಿದೆ. ಈ ನಿಯಮವನ್ನು ಯಾರೂ ಎಂದೂ ಮುರಿಯಲಾಗದು.

ನಾನು:— ಕೇವಲ ನಾಲ್ಕು ತಾಸುಗಳವರೆಗೆ ಇದ್ದಲ್ಲಿಯೇ ಇರುವದು ನನ್ನಿಂದಾಗದೇ !

ಕಾರ್ಯ:— ನೀವು ಯಾವ ಕಾರಣವನ್ನು ಹೇಳಿಯೂ ಕಚೇರಿಗೆ ಬರುವದನ್ನು ತಪ್ಪಿಸಲಾಗದು. ಜಡ್ಡಾಗಿದೆಯಂದಾಗಲೀ, ವ್ಯವಹಾರವಿದೆ ಯೆಂದಾಗಲೀ, ಅಥವಾ ಬೇರೆ ಯಾವುದೆ ಕಾರಣಗಳನ್ನು ಮುಂದೆ ಮಾಡಿ ನೀವು ಹೊರಗೆ ಹೋಗಬಾರದು.

ನಾನು:— ಮಾಡುವ ಕೆಲಸವಾದರೂ ಏನು ?

ಕಾರ್ಯ:—ಕುಮಾರವ್ಯಾಸ ಜೈಮಿನೀ ಭಾರತವನ್ನು ಕಾಪೀ ಮಾಡ ತಕ್ಕದ್ದು. ಇದೇ ಕೆಲಸ. ಆ ಪುಸ್ತಕದ ಮೊದಲನೆಯ ಕಟ್ಟು ಈ ಕಪಾಟ ನಲ್ಲಿದೆ ನೋಡಿರಿ. ನಿಮಗೆ ಬೇಕಾಗುವ ಮಸಿ, ಟಾಕು, ಒತ್ತುವ ಖರಡ ಮೊದಲಾದ ಬರವಣಿಗೆಯ ಸಾಮಾನುಗಳನ್ನು ನೀವೇ ನಿಮ್ಮ ಖರ್ಚಿನಿಂದ ತರಬೇಕು. ಕುರ್ಚಿ ಮೇಜುಗಳು ಇಲ್ಲಿ ಇವೆ...... ಹಾಗಾದರೆ ನಾಳಿನಿಂದ ನೀವು ಬರುವಿರಿ !

ನಾನು:— ಅವಶ್ಯವಾಗಿ ಬರುವೆನು.

ಕಾರ್ಯ:—ನಮಸ್ಕಾರ. ಇನ್ನು ನಿಮಗೆ ಅಪ್ಪಣೆ ಕೊಡುವೆನು.

ಈ ನೌಕರಿಯು ದೊರೆತದ್ದಕ್ಕಾಗಿ ನನಗೆ ಬಹಳೇ ಆನಂದವಾಯಿತು ಏನು ಮಾಡಬೇಕು, ಏನು ಮಾತಾಡಬೇಕು ಎಂಬುದೇ ತಿಳಿಯಲಿಲ್ಲ. ನನ್ನ ಕಾರಕೂನನ ಸಂಗಡ ನೇರವಾಗಿ ಮನೆಗೆ ಬಂದುಬಿಟ್ಟೆನು. ಆ ದಿನವನ್ನು ವಿಚಾರದಲ್ಲಿಯೇ ಕಳೆದೆನು. ಮರುದಿನ ಮುಂಜಾನೆ ಹತ್ತು ಘಂಟೆಗೆ ಬರಹದ ಸಾಹಿತ್ಯ ಸಹಿತವಾಗಿ ಕೆಂಪುಕೂದಲು ಸಮಿತಿಯ ಕಚೇರಿಯ ಹಾದಿ ಹಿಡಿದೆನು.

ಕಚೇರಿಯ ಹಾಲಿನಲ್ಲಿ ನಾನು ಪ್ರವೇಶಿಸಿದಾಗ ದಾಮೋದರರಾಯರು ಇದ್ದರು. ನಾನು ತಂದ ಬರಹದ ಸಾಮುಗ್ರಿಗಳನ್ನು ನೋಡಿದರು. ಸರಿಯಾಗಿ

ಹತ್ತುಘಂಟೆಗೆ ನಾನು ಕೆಲಸಕ್ಕೆ ಕುಳಿತೆನು. 'ಆದಿಪರ್ವ, ಪೀಠಿಕಾಸಂಧಿ, ದೇವತಾಸ್ತುತಿಗಳು' ಇಲ್ಲಿಂದ ಕಾಪಿಮಾಡಲು ಪ್ರಾರಂಭಿಸಲು ನನಗೆ ಹೇಳಿ ದಾಮೋದರರಾಯರು ಹೊರಟುಹೋದರು. ಅವರು ಆಗಾಗ ಬರುತ್ತಿದ್ದರು. ನನ್ನ ಕೆಲಸವು ಸುಸೂತ್ರವಾಗಿ ಸಾಗುತ್ತಿರುವದನ್ನು ನೋಡುತ್ತಿದ್ದರು. ಮತ್ತೆ ವಾಪಸು ಹೋಗುತ್ತಿದ್ದರು. ಮಧ್ಯಾಹ್ನ ಸರಿಯಾಗಿ ಎರಡುಘಂಟೆಗೆ ದಾಮೋದರರಾಯರು ತಪ್ಪದೇ ಬರುವರು. ಮನೆಗೆ ಹೋಗಲು ನನಗೆ ಸೂಚಿಸುವರು. ನಾನು ಬರೆದುದನ್ನು ನೋಡಿ "ಚನ್ನಾಗಿ ಬರೆದಿದ್ದೀರಿ!" ಎಂದು ನನ್ನನ್ನು ಹೊಗಳುವರು. ನಾನು ಹೊರಟಹೋದ ಮೇಲೆ ಕಚೇರಿಗೆ ಬೀಗಹಾಕಿ ತಾವೂ ಹೊರಟುಹೋಗುವರು.

ದಿನಗಳು ಹೀಗೆಯೇ ಸಾಗಿದವು. ಹುಲಿಮೀಶೆಯವರೇ, ಪ್ರತಿ ಶನಿವಾರ ತಪ್ಪದೇ ನಮ್ಮ ಕಾರ್ಯದರ್ಶಿಯು ಬಂದು ೬೦ ರೂಪಾಯಿಗಳನ್ನು ನನ್ನ ಟೇಬಲ್ ಮೇಲಿಟ್ಟು "ನಿಮ್ಮ ಪಗಾರವನ್ನು ತೆಗೆದುಕೊಳ್ಳಿರಿ" ಎಂದನ್ನುತ್ತಿದ್ದನು. ಈ ರೀತಿಯಲ್ಲಿ ಎಂಟು ವಾರಗಳು ಸರಿದವು. (೧) ಸಂಭವ ಪರ್ವ (೨) ಜತುಗ್ರಹಪರ್ವ, (೩) ಹಿಡಂಬವಧಪರ್ವ (೪) ಬಕವಧಪರ್ವ. (೫) ಚೈತ್ರರಥಪರ್ವ, (೬) ಸ್ವಯಂವರಪರ್ವ ಮತ್ತು (೭) ರಾಜಲಾಭಪರ್ವಗಳನ್ನು ಬರೆದು ಮುಗಿಸಿ ಬಿಟ್ಟಿದ್ದೆನು. ಇನ್ನು ತೀರ್ಥಯಾತ್ರಾಪರ್ವವನ್ನು ಪ್ರಾರಂಭಿಸುವವನಿದ್ದೆನು— ಕಾಗದದ ಖರ್ಚೇಖರ್ಚು. ಉಳಿದ ಯಾವ ತೊಂದರೆಗಳೂ ನನಗಿರಲಿಲ್ಲ.—ಆದರೆ ಒಮ್ಮೆಲೇ ಈ ಸಮಿತಿಯು ಮುರಿದು ಹೋಯಿತು.........

"ಮುರಿದು ಹೋಯಿತು?"

"ಹೌದರೀ, ಮುರಿದೇ ಹೋಯಿತು. ಮರುದಿನ ಮುಂಜಾನೆ ವಾಡಿಕೆಯಂತೆ ನಾನು ನನ್ನ ಕೆಲಸಕ್ಕೆ ಹೋದೆನು. ಆದರೆ ಸಮಿತಿಯ ಕಚೇರಿಯ ಬಾಗಿಲು ಮುಚ್ಚಿತ್ತು. ಬಾಗಿಲಿಗೆ ಬೀಗ ಜಡದಿತ್ತು. ಬಾಗಿಲಿಗೆ ಒಂದು ರಟ್ಟಿನ ಚೂರನ್ನು ಮಳೆಯಿಂದ ಹೊಡೆದಿದ್ದರು. ಇದೇ ಆ ರಟ್ಟು, ನಾನು ಕಿತ್ತು ತಂದಿದ್ದೇನೆ. ಇದರ ಮೇಲೆ ಬರೆದಿದ್ದನ್ನು ನೀವೇ ಓದಿರಿ." ಹೀಗೆ ನುಡಿದು ವಿನಾಯಕರಾಯನು ಬಿಳೀ ರಟ್ಟನ್ನು ಸರಲಾಕ್ಷ ಹುಲಿ

ಮೀಶೆಯವರಿಗೆ ಕೊಟ್ಟನು. ಅದು ನೋಟಬುಕ್ಕಿನ ಹಾಳಿಯ ಅರ್ಧದಷ್ಟು (೧/೮ ಫೂಲ್ಸಕೇಪು) ದೊಡ್ಡದಿತ್ತು. ಅದರ ಮೇಲೆ ಹೀಗೆ ಬರೆದಿತ್ತು.

ಕೆಂಪು ಕೂದಲ ಸಮಿತಿಯು ಮುರಿದುಹೋಯಿತು.

೯ ಅಕ್ಟೋಬರ ೧೯......

ನಾನು ಮತ್ತು ಹುಲಿಮೀಸೆಯವರೂ ಓದಿದೆವು. ಬಹುನಿರಾಶರಾದೆವು. ಎಷ್ಟು ಒರಟುತನದಿಂದ ಬರೆದಿದ್ದಾನೆ ಈ ಪ್ರಕಟನೆಯನ್ನು, ಎಂದು ನಮಗೆ ನಗೆ ಬಂದು ಬಿಟ್ಟಿತು. ನಕ್ಕೂ ಬಿಟ್ಟೆವು.

ಹುಲಿ।— ಈ ರಟ್ಟಿನಲ್ಲಿ ಬರೆದುದನ್ನು ಓದಿ ನೋಡಿಕೊಂಡು ಮುಂದೆ ನೀವು ಏನು ಮಾಡಿದಿರಿ?

ಈ ಪ್ರಕಟನೆಯನ್ನು ಓದಿದ ಕೂಡಲೆ ನನ್ನ ದೇಹವೆಲ್ಲ ನಡುಗಿ ಹೋಯಿತು. ಏನು ಮಾಡಬೇಕೆಂಬುದೇ ತಿಳಿಯದಾಯಿತು. ಕಚೇರಿಯ ಎಡಬಲದಲ್ಲಿ ವಿಚಾರಿಸಿದೆನು. ಆದರೆ ಯಾರೂ ನನಗೆ ತೃಪ್ತಿಕರವಾದ ಉತ್ತರವನ್ನೀಯಲಿಲ್ಲ. ಆ ಇಮಾರತಿನ ಯಜಮಾನನು ಅಲ್ಲಿಯೇ ಕೆಳಗೆ ಇರುವನು. ಅವನಲ್ಲಿ ಹೋಗಿ ಕೇಳಿದೆನು.

ಸಮಿತಿಯ ಕಾರ್ಯದರ್ಶಿಯ ಹೆಸರು ದಾಮೋದರರಾಯನಲ್ಲ, ವಿಠ್ಠಲ ರಾಯನೆಂಬುದು ತಿಳಿಯಿತು. ಅವನು ವಕೀಲನು. ತನಗೆ ಒಳ್ಳೇ ಕೊಠಡಿ ಸಿಕ್ಕಿದ್ದರಿಂದ ನಿನ್ನೆಯೇ ಇದನ್ನು ಬಿಟ್ಟನು. ಗುಡೀ ಓಣಿಯಲ್ಲಿಯ ೧೭ನೇ ನಂಬರ ಇಮಾರಿತನಲ್ಲಿಯೇ ಅವನು ತನ್ನ ಕಚೇರಿಯನ್ನು ತೆರದಿರಬಹು ದೆಂದು ಈ ಇಮಾರಿತನ ಒಡೆಯನು ಹೇಳಿದನು.

ಆಗಲೇ ನಾನು ಗುಡಿ ಓಣಿಯ ಕಡೆಗೆ ಸಾಗಿದೆ. ೧೭ನೇ ನಂಬರ ಮನೆ ಯನ್ನು ಶೋಧಿಸಿದೆನು. ಒಳಹೊಕ್ಕೆನು. ಮೊಳಕಾಲವೊಂಡೆಯ ಕೃತ್ರಿಮ ಪರಡೆಯನ್ನು ಮಾಡುವ ಕಾರಖಾನೆಯದು. ಅಲ್ಲಿಯೂ ವಿಚಾರಿಸೆದೆನು. ದಾಮೋದರರಾಯ ಅಥವಾ ವಿಠ್ಠಲರಾಯನೆಂಬ ಹೆಸರಿನವರು ಅಲ್ಲಿ ಯಾರೂ ಇಲ್ಲವೆಂದೂ, ಹೊಸದಾಗಿ ಯಾರೂ ಬಂದಿಲ್ಲವೆಂದೂ ತಿಳಿದು ಬಂದಿತು.

“ ಆ ಮೇಲೆ ” ಸರಲಾಕ್ಷರು ಕೇಳಿದರು.

ನಾನು ನನ್ನ ಮನೆಗೆ ಬಂದು ಬಿಟ್ಟೆನು. ಮುಂದೇನು ಮಾಡಬೇಕೆಂಬು ದನ್ನು ವಸಂತರಾಯನ ಸಂಗಡ ವಿಚಾರಮಾಡಿದೆನು. ಆದರೆ ಅವನು ಈ ಬಗ್ಗೆ ಹೆಚ್ಚಿಗೆ ಮಾತಾಡಲಿಲ್ಲ. ಆ ಮೇಲೆ ಪಾಮರರಿಗೆ ಸಹಾಯ ಮಾಡಲು ನೀವಿರುವಿರೆಂದು ನನಗೆ ತಿಳಿಯಿತು. ನೇರವಾಗಿ ಇಲ್ಲಿಗೆ ಬಂದು ಬಿಟ್ಟೆನು.

ಹುಲಿ :— ಬಹು ಒಳ್ಳೆಯ ಕೆಲಸ ಮಾಡಿದಿರಿ. ನಿಮ್ಮ ಸಂಶಯವನ್ನು ನಿವಾರಿಸಲು ನಾವು ಪ್ರಯತ್ನಿಸುತ್ತೇವೆ. ಇರಲಿ, ನಿಮಗೆ ನಾನು ಒಂದೆರಡು ಪ್ರಶ್ನೆಗಳನ್ನು ಕೇಳುವೆನು... ಈ ನಿಮ್ಮ ಕಾರಕೂನನು—ಈ ಜಾಹೀರಾತನ್ನು ನಿಮಗೆ ತೋರಿಸಿದನಲ್ಲಾ—ಆ ದಿನಕ್ಕೆ ಅವನು ನಿಮ್ಮಲ್ಲಿ ಬಂದು ಎಷ್ಟು ದಿನ ಗಳಾಗಿದ್ದವು ?

ವಿನಾ :— ಸುಮಾರು ಒಂದು ತಿಂಗಳಾಗುತ್ತ ಬಂದಿತ್ತು.

ಹುಲಿ:— ಇವನು ನೋಡಲು ಹೇಗಿರುವನು ?

ವಿನಾ:— ವಸಂತನು ಗಿಡ್ಡನಾಗಿದ್ದು ದಪ್ಪನಾಗಿರುವನು. ಚುರುಕು ಬುದ್ಧಿಯವನು, ಸುಮಾರು ಮೂವತ್ತು ವರುಷದವನಾಗುತ್ತ ಬಂದರೂ ಇದೀಗ ಮೋರೆಯ ಮೇಲೆ ಗಡ್ಡ ಮೀಶೆಗಳು ಬರತೊಡಗಿವೆ. ಮೊಗದ ಮೇಲೆ ಬಿಳಿಛಾಯೆಯು ಕಳೆಯಿದೆ.

ಹುಲಿಮೀಶೆಯವರು ಒಳ್ಳೇ ಹುರುಪಿನಿಂದ ಕುರ್ಚಿಯಲ್ಲಿ ಕುಳಿತು ಕೊಂಡರು:— ನೀವು ಹೇಳಿದುದರಂತೆಯೇ ಅವನು ಇರಬಹುದೆಂದು ನಾನು ಮೊದಲೇ ಊಹಿಸಿದ್ದೆನು. ಚೌಕಳಿಗಳನ್ನಿಡಲು ಕಿವಿಚುಚ್ಚಿಸಿಕೊಂಡಿರುವ ನೇನು ?

ವಿನಾ:— ಹೌದು, ಚಿಕ್ಕಂದಿನಲ್ಲಿ ಅಕ್ಕಸಾಲಿಗನಿಂದ ಇವನ ಹಡೆದ ವರು ಇವನ ಕಿವಿ ಚುಚ್ಚಿಸಿದ್ದರಂತೆ.

"ಹೀಗೇನು !" ಪುನಃ ಸರಲಾಕ್ಷ ಹುಲಿಮೀಶೆಯವರು ವಿಚಾರದಲ್ಲಿ ಮುಳುಗಿದರು. "ಈಗ ಇವನು ನಿಮ್ಮಲ್ಲಿಯೇ ಇದ್ದಾನೆ !"

ವಿನಾ :— ಹೌದು, ಅವನನ್ನು ಅಂಗಡಿಯಲ್ಲಿ ಕೂಡ್ರಿಸಿಯೇ ನಾನು ನಿಮ್ಮಲ್ಲಿಗೆ ಬಂದಿದ್ದೇನೆ.

ಹುಲಿ:— ಸಾಕು. ವಿನಾಯಕರಾಯರೇ, ಇನ್ನು ಎರಡು ಮೂರು ದಿನಗಳಲ್ಲಿ ಏನೆಂಬುದನ್ನು ನಾನು ನಿಮಗೆ ಹೇಳಿ ಬಿಡುವೆನು. ಇಂದು ಶನಿವಾರ; ಸೋಮವಾರ ಇದರ ಇತ್ಯರ್ಥವನ್ನು ನಿಮಗೆ ತಿಳಿಸಿಬಿಡುವೆನು.

ವಿನಾಯಕರಾಯರು ಹುಲಿಮೀಶೆಯವರಿಗೆ ನಮಸ್ಕರಿಸಿ ಹೊರಟು ಹೋದರು. ಆ ಮೇಲೆ ಹುಲಿ:— ವಾಮನರಾಯರೇ, ಏನಾದಂತಾಯಿತು ?

ವಾಮನ :— ನನಗಂತೂ ಏನೂ ತಿಳಿಯಲಿಲ್ಲ. ಇದು ಬಹು ವಿಚಿತ್ರವಾದ ಕತೆಯು.

ಹುಲಿ:— ಆದರೂ ಬೇಗನೆ ಇದರ ಶೋಧನೆಯ ಕಾರ್ಯವನ್ನು ನಾವು ಕೈಕೊಳ್ಳಬೇಕು.

ವಾಮನ:— ಹಾಗಾದರೆ ಈಗ ಏನು ಮಾಡಬೇಕೆನ್ನುವಿರಿ ?

ಹುಲಿ:— ವಿಚಾರ ಮಾಡುವೆನು. ಸುಮಾರು ಒಂದು ತಾಸಿನವರೆಗೆ ನನ್ನನ್ನು ಮಾತಾಡಿಸಬೇಡಿರಿ. ಮೂರು ಸಿಗರೇಟು ಸೇದಿ ಒಗೆದೆನೆಂದರೆ ಏನು ಮಾಡಬೇಕೆಂಬುದು ಬೇಗನೆ ಹೊಳೆದುಬಿಡುವದು.

ಸುಖಾಸನದಲ್ಲಿ ಪದ್ಮಾಸನವನ್ನು ಹಾಕಿಕೊಂಡು ಸರಲಾಕ್ಷ ಹುಲಿಮೀಶೆಯವರು ಕುಳಿತುಕೊಂಡರು. ಬಾಯಲ್ಲಿ ಸಿಗರೇಟೊಂದನ್ನಿಟ್ಟು ಅದಕ್ಕೆ ಬೆಂಕೀ ಕೊಟ್ಟರು. ವಿಚಾರದಲ್ಲಿ ತನ್ಮಯರಾಗಿ ಕಣ್ಣು ಮುಚ್ಚಿದರು. ಅವರಿಗೆ ನಿದ್ರೆ ಬಂದಿತೇನೋ ಎಂದು ಅಂದುಕೊಂಡೆನು. ಆದರೆ...ನಿಜ...ಅವರು ನಿದ್ರೆಯಿಂದ ಎಚ್ಚತ್ತವರಂತೆ ಟಣಕ್ಕನೇ ಕುರ್ಚಿಯಿಂದ ಜಿಗಿದು ಎದ್ದು ನಿಂತರು. ನಿರ್ಣಯಕ್ಕೆ ಬಂದವರಂತೆ ಲಟಕಿಯನ್ನು ಹೊಡೆದರು.

ಹುಲಿ:— ವೀಣೆಯ ಶೇಶಣ್ಣನವರು ನಗರಭವನದ ಹಾಲಿನಲ್ಲಿ ಈ ಸಂಜೆಗೆ ವೀಣೆ ಬಾರಿಸುವರಂತೆ, ಕೇಳಲು ಬರುವಿರೇನು ?........ರೋಗಿಗಳ ಚಿಕಿತ್ಸೆಗೆ ಹೋಗುವದದೆ ಏನು ಮತ್ತೆ ?

ವಾಮನ:— ಈ ದಿನ ನನಗೇನೂ ಕೆಲಸವಿಲ್ಲ. ಮೇಲಾಗಿ ನನಗೆಂದು ಅಷ್ಟು ದೊಡ್ಡ ಪ್ರಾಕ್ಟೀಸು ಇದ್ದದ್ದು ! ?!

ಹುಲಿ:— ಹಾಗಾದರೆ ಏಳಿರಿ. ನಾನು ಮೊದಲು ಊರಲ್ಲಿ ಹೋಗಬೇಕು. ಆ ಮೇಲೆ ಕ್ಲಬ್ಬಿಗೆ ಹೋಗಿ ಚಹ ತೆಗೆದುಕೊಂಡು ನಗರಭವನಕ್ಕೆ ಹೋಗೋಣ.

ನಾವಿಬ್ಬರೂ ಸಾಗಿದೆವು. ರಾಜಬೀದಿಗುಂಟ ಸಾಗದೇ ಅಡ್ಡ ದಾರಿ ಹಿಡಿದು ನಡೆದೆವು. ಅಗ್ರಹಾರದ ಗೇಟಿನಿಂದ ಹಾಯ್ದು ತುಸು ದೂರ ಹೋದೆವು. ದುರಗನ ಹೊಟ್ಟಿ ಓಣಿಗೆ ಬಂದೆವು. ಇದೇ ಮುಂಜಾನೆ ಕತೆಯನ್ನು ಹೇಳಿ ಹೊರಟುಹೋದ ವಿನಾಯಕರಾಯರ ಮನೆಯು ಇಲ್ಲಿಯೇ ಇದೆ. ಇಲ್ಲಿಂದ ಮುಂದೆ ಸಂದಿಗಳು ಸುರುವಾಗುವವು. ಒಂದು ಸಂದಿಯ ಮೂಲೆಯಮನೆಗೆ ಒಂದು ಕರೇಹಲಿಗೆಯನ್ನು ತೂಗು ಬಿಟ್ಟಿರುವರು. '**ವಿನಾಯಕರಾವ ಸರಾಫ**' ಎಂದು ಬಿಳೀ ಅಕ್ಷರದಿಂದ ಅದರಲ್ಲಿ ಬರೆದದ್ದು ಕಾಣುವದು. ನಾವಿಬ್ಬರೂ ಅಲ್ಲಿಗೆ ಹೋದೆವು. ಹುಲಿಮೀಶೆಯವರು ಆ ಮನೆಯ ಸುತ್ತಲೆಲ್ಲ ನೋಡಿದರು. ಆ ಮೇಲೆ ಸಾವಕಾಶವಾಗಿ ಸಾಗುತ್ತ ಆ ಮನೆಯ ಸುತ್ತು ಮುತ್ತು ತನ್ನ ತೀಕ್ಷ್ಣವಾದ ದೃಷ್ಟಿ ಚಲ್ಲುತ್ತಿದ್ದರು. ಸಂದಿಗೊಂದಿಗಳಲ್ಲಿ ಇಣಿಕಿ ಹಾಕಿದರು. ಮತ್ತೆ ಆ ಮನೆಯ ಮುಂದೆ ಬಂದು ನಿಂತರು. ಮನೆಯ ತೆರಬಾಗಿಲು ಇಕ್ಕಿತ್ತು, ಕೈಯಲ್ಲಿಯ ದಪ್ಪ ವಾಕಿಂಗಸ್ಟಿಕ್ಕಿನಿಂದ ಮನೆಯ ಮುಂದಿನ ಪಟಾಂಗಣಕ್ಕೆ ಹುಲಿಮೀಶೆಯವರು ಬಡೆದರು. ಬಾಗಿಲನ್ನು ತಟ್ಟಿದರು. ಬಾಗಿಲು ಒಮ್ಮೆಲೇ ತೆರೆಯಲ್ಪಟ್ಟಿತು. ಒಬ್ಬ ಕಾಂತಿಯುತ ತರುಣನು ನಮ್ಮೆದುರು ನಿಂತನು. ಅವನು ಇಂದೇ ಮಕ್ಕಷ್ಟವನ್ನು ಮಾಡಿಕೊಂಡಿರಬೇಕು.

ತರುಣ:— ಬರಬೇಕು. ಹೀಗೆ ಬನ್ನಿರಿ ರಾಯರೇ!

ಹುಲಿ:— ಇರಲಿ, ತುಂಬಾ ಸಂತೋಷ, ದರಬಾರ ಓಣಿಗೆ ಹೇಗೆ ಹೋಗಬೇಕು ಇಷ್ಟೇ ಬೇಕಾಗಿದೆ. ಅದಕ್ಕಾಗಿ ಬಾಗಿಲು ತಟ್ಟಿದೆ...

ತರು:— ಮೊದಲು ಬಲಗಡೆ ಸಂದಿಯಲ್ಲಿ ಹೊಳ್ಳಿರಿ, ಮತ್ತೆ ಹೊಳ್ಳಿರಿ ಹೀಗೆ ಮೂರು ಸಾರೆ ಹೋದ ಮೇಲೆ ನಾಲ್ಕನೆಯ ಸಾರೆ ಎಡಗಡೆಗೆ ಹೊಳ್ಳಿರಿ ಅದೇ ದರಬಾರ ಓಣಿ......ಹೀಗೆ ಹೇಳಿ ಬಾಗಿಲನ್ನು ಮುಚ್ಚಿಕೊಂಡನು.

ನಾವು ಮುಂದೆ ಸಾಗಿದೆವು. "ಹುಡುಗನು ಬಹು ಚುರುಕು ಕಾಣುವನು." ಎಂದರು ಹುಲಿಮೀಶೆಯವರು. ಇವನ ವಿಷಯವು ಒಮ್ಮೆ ನನ್ನ ಕಣ್ಣಿಗೆ ಬಿದ್ದಿತ್ತು.

ನಾನು:— ಹಾಗಾದರೆ ಕೆಂಪು ಕೂದಲ ಸಮಿತಿಯ ಕಾರಸ್ಥಾನದಲ್ಲಿ ಇವನೂ ಒಬ್ಬನು ಎಂದಾಂತಾಯಿತು. ಇವನನ್ನು ನೋಡುವದಕ್ಕಾಗಿ ನೀವು ಸುಮ್ಮನೇ ಏನೇನೋ ಕೇಳಿದಂತಿದೆ?

ಹುಲಿ :—ಇವನನ್ನು ನೋಡುವದಕ್ಕಾಗಿ ಅಲ್ಲ, ಇವನ ಮೊಳಕಾಲುಗಳನ್ನು ನೋಡುವದಕ್ಕಾಗಿ.

ನಾನು :— ಅಲ್ಲೇನು ನೋಡಿದಿರಿ ?

ಹುಲಿ :— ಏನು ಬೇಕಿತ್ತೋ ಅದನ್ನು !

ನಾನು :— ಪಟಾಂಗಣವನ್ನು ಸ್ಟಿಕ್ಕಿನಿಂದ ಏಕೆ ಬಡೆದಿರಿ ?

ಹುಲಿ :— ಪ್ರಿಯ ವೈದ್ಯರೇ ಮಾತಾಡಲು ಇದು ಸಮಯವಲ್ಲ. ಈಗ ನಾವು ಶೋಧನಾಸಕ್ತರು. ಅಪರಾಧಿಗಳ ಕೃತ್ಯಗಳನ್ನು ಶೋಧಿಸಲು ಈಗ ಸಾಗಿದ್ದೇವೆ.........ಈಗ ದುರಗನಹೊಟ್ಟೆ ಓಣಿಯ ಸಂದಿಗೊಂದಿಗಳನ್ನು ನೋಡಿದ್ದಾಯಿತು. ಇನ್ನು ಈ ಸಂದಿಗಳ ಹಿಂದಿನ ಮಗ್ಗಲನ್ನು ತುಸು ನಿರೀಕ್ಷಿಸೋಣ ನಡೆಯಿರಿ.

ನಾವಿಬ್ಬರೂ ಅದೇ ಪ್ರಕಾರ ಸಾಗಿದೆವು. ಈ ಹಿಂದಿನ ಮಗ್ಗಲಿನ ನೋಟವು ಮುಂಬದಿಗಿಂತ ತೀರ ವಿರುದ್ಧವಾದುದು. ಈ ಊರಿನ ಮುಖ್ಯ ರಾಜಬೀದಿಯು ಈ ದಿಕ್ಕಿನಿಂದಲೇ ಸಾಗಿದೆ.

ಸರಲಾಕ್ಷ ಹುಲಿಮೀಶೆಯವರು ಮನೆಗಳ ಸಾಲಿನ ಒಂದು ಮೂಲೆಗೆ ಸರಿಯಾಗಿ ನಿಂತರು :—"ಈ ಇಮಾರತುಗಳ ಸಾಲು ಯಾವ ರೀತಿಯಲ್ಲಿ ಸಾಗಿದೆಯೆಂಬುದನ್ನು ನೋಡೋಣ. ನಮ್ಮೂರ ಕಟ್ಟಡಗಳ ಪೂರ್ಣ ಪರಿಚಯವು ನನಗಿರಬೇಕೆಂಬುದೇ ನನ್ನ ಆಶೆ. ಇದು ಔಷಧದ ಅಂಗಡಿ. ಆ ಮೇಲೆ ಚುಟ್ಟಾದ ಅಂಗಡಿ, ಆ ಮೇಲೆ ವರ್ತಮಾನಪತ್ರ ಮಾರುವವನ ಅಂಗಡಿ, ಅದರಿಂದಾಚೆ ಪೋಸ್ಟದ ಬ್ರ್ಯಾಂಚ ಆಫೀಸು, ಅದಾದ ಮೇಲೆ ಅರ್ಬನ್ ಬ್ಯಾಂಕು, ಅದರಿಂದಾಚೆ ಕ್ಷುಧಾಶಾಂತಿಭುವನ, ಎಲ್ಲಕ್ಕೂ ಕಡೆಯದು, ಮುನಿಯಪ್ಪನ ಟಾಂಗಾದ ಕಾರಖಾನೆಯು. ಸರಿ. ವೈದ್ಯರೇ ಈಗ ನಮ್ಮ ಕೆಲಸವಾದಂತಾಯಿತು. ಇನ್ನು ತುಸು ವಿಶ್ರಾಂತಿಯನ್ನು ತೆಗೆದುಕೊಳ್ಳೋಣ. ಕ್ಲಬ್ಬಿಗೆ ಹೋಗಿ ಬ್ರೆಡ್ಡು ಬೆಣ್ಣೆ ತಿಂದು ಕಾಫೀ ಕುಡಿದು ವೀಣೆಗಾಯನವನ್ನು ಕೇಳಲು ಹೋಗೋಣ.

ನನ್ನ ಗೆಳೆಯ ಹುಲಿಮೀಶೆಯವರು ಗಾಯನದಲ್ಲಿ ತಜ್ಞರು. ಅವರೂ ವೀಣೆಯನ್ನು ಬಾರಿಸಬಲ್ಲರು. ಕವನಗಳನ್ನು ಬರೆದಿದ್ದಾರೆ. ಈ ವೀಣಾವಾದನ

ಮುಗಿಯುವವರೆಗೆ ನಗರಭವನದ ಹಾಲಿನಲ್ಲಿ ಕುಳಿತು ಕೇಳಿದರು. ಆಗ ಅವರ ಏಕಾಗ್ರತೆಯನ್ನು ನೋಡಬೇಕು. ಅರೆಗಣ್ಣು ಮುಚ್ಚಿ ವಾದನದಲ್ಲಿ ತಲ್ಲೀನರಾಗಿ ಉದ್ದವಾದ ಕೈ ಬೆರಳನ್ನು ತಾಳವನ್ನು ಸೂಚಿಸುವಂತೆ ಅಲ್ಲಾಡಿ ಸುತ್ತಿದ್ದರು.

ವೀಣಾವಾದನವು ಮುಗಿಯಿತು. ನಾವು ಹೊರಗೆ ಬಂದೆವು ಆಗ ಹುಲಿ ಮೀಶೆಯವರು, ನನಗೆ ಅಂದರು:— ಮನೆಗೆ ಹೋಗಲು ನಿಮಗೆ ವೇಳೆಯಾ ಯಿತೆಂದು ತೋರುವದು.

ನಾನು:— ನಿಜ, ತುಸು ವೇಳೆಯಾಯಿತು.

ಹುಲಿ:—ನನಗೆ ಸ್ವಲ್ಪ ಕೆಲಸವಿದೆ. ದುರಗನಹೊಟ್ಟೀ ಓಣಿಯಲ್ಲಿಯೇ ಇದೆ. ಕೆಲವು ತಾಸುಗಳು ಹಿಡಿಯಬಹುದು ಆ ಕೆಲಸ ಮುಗಿಯಲಿಕ್ಕೆ ಕೆಲಸವು ಮಾತ್ರ ತುಸು ಭಯಂಕರವಾದದ್ದಿದೆ.

ನಾನು:— ಭಯಂಕರವಾದದ್ದು ?

ಹುಲಿ:— ಭಯಂಕರವಾದ ಅಪರಾಧವು ಘಟಿಸುವ ಯೋಗವಿದೆ. ನಾವು ಆ ವೇಳೆಗೆ ಸರಿಯಾಗಿ ಬಂದು ಅದನ್ನು ತಡೆಯಲೇಬೇಕು. ಈ ದಿನ ಶನಿವಾರವಾದುದರಿಂದ ಇಂದೇ ಅದು ಘಟಿಸಬಹುದು. ಆದುದರಿಂದ ಈ ರಾತ್ರಿಯಲ್ಲಿ ನಿಮ್ಮ ಸಹಾಯವು ಅತ್ಯವಶ್ಯವಾಗಿ ಬೇಕಾಗಿದೆ.

ನಾನು:— ಹಾಗಾದರೆ ನಾನು ಎಷ್ಟು ಹೊತ್ತಿಗೆ ಬರಲಿ ?

ಹುಲಿ:— ರಾತ್ರಿ ಹತ್ತು ಘಂಟೆಗೆ ಬಂದರೆ ಒಳ್ಳೆಯದು. ತುಸು ಗಂಡಾಂತರಗಳೂ ಒದಗಬಹುದು. ಆದುದರಿಂದ ನಿಮ್ಮ ಪಿಸ್ತೂಲನ್ನು ತರಲು ಮಾತ್ರ ಮರೆಯಬೇಡಿರಿ.

ಹುಲಿಮೀಶೆಯವರು ಹಸ್ತಾಂದೋಲನ ಮಾಡಿ ತಮ್ಮ ಮನೆಯ ಕಡೆಗೆ ಸಾಗಿದರು. ನಾನೂ ಮನೆಗೆ ಬಂದೆನು.

× × × × ×

ನಾನು ಮನೆ ಬಿಟ್ಟು ಹೊರಟಾಗ ರಾತ್ರಿ ಒಂಬತ್ತು ಹೊಡೆದು ಹದಿನೈದು ನಿಮಿಷಗಳಾಗಿದ್ದವು. ನಗರೋದ್ಯಾನದ ಮುಂದೆ ಹಾಯ್ದು ಬಣಗಾರ ಓಣಿ

ಯಲ್ಲಿಯ ಹುಲಿಮೀಶೆಯುವರ ಮನೆ ಬಾಗಿಲಿಗೆ ಬಂದೆನು. ಅಲ್ಲಿ ಇಬ್ಬರು ಸಭ್ಯಗೃಹಸ್ಥರು ನಿಂತುದನ್ನು ಕಂಡೆನು. ನಾನು ಅಲ್ಲಿಂದ ಒಳಗೆ ಹೋಗುವಾಗ ಮೇಲೆ ಮಾತಾಡುವ ಧ್ವನಿಯು ಕೇಳಬಂತು. ಅಟ್ಟದ ಮೇಲೆ ಹಾಲಿನಲ್ಲಿ ಪ್ರವೇಶಿಸಿ ನೋಡಲಾಗಿ ಹುಲಿಮೀಶೆಯುವರು ಇಬ್ಬರು ಸಭ್ಯಗೃಹಸ್ಥರೊಡನೆ ಒಳ್ಳೇ ಉತ್ಸಾಹದಿಂದ ಹರಟೇ ಕೊಚ್ಚುತ್ತಿದ್ದರು. ಒಬ್ಬರ ಗುರುತು ಸಿಕ್ಕಿತು. ನಮ್ಮೂರ ಫೌಜದಾರ ಪುಟ್ಟಪ್ಪ ಜೋಶಿಯವರು ಇನ್ನೊಬ್ಬರು ಕುತನೀ ಅರಿವೆಯ ಓವ್ಹರ್‌ಕೋಟನ್ನು ತೊಟ್ಟಿದ್ದರು. ತಲೆಯ ಮೇಲೊಂದು ಹ್ಯಾಟನ್ನು ಇಟ್ಟಿದ್ದರು. ಅವರಾರೆಂಬುದು ಮಾತ್ರ ಆಗ ನನಗೆ ತಿಳಿಯಲಿಲ್ಲ.

"ಓ!, ಕೋರಂ ಭರ್ತಿ ಆತು'' ಹುಲಿಮೀಶೆಯುವರು ನನ್ನನ್ನು ನೋಡಿ ನುಡಿದರು. ಜಾಕೀಟಿನ ಗುಂಡಿಗಳನ್ನು ಸರಿಪಡಿಸಿ ಕೋಟನ್ನು ತೊಟ್ಟರು. ಬೇಟೆಗಾರರಂತೆ ಒಂದು ದೊಡ್ಡ ಡೊಣ್ಣೆಯನ್ನು ಎತ್ತಿಕೊಂಡರು. " ವಾಮನರಾಯರೇ ಈ ಜೋಶೀ ಪುಟ್ಟಪ್ಪನವರ ಪರಿಚಯವು ನಿಮಗಿರಬಹುದು. ಇನ್ನೊಬ್ಬರು ಮಾರುತಿರಾಯರು. ಈ ರಾತ್ರಿಯಲ್ಲಿ ನಾವು ಕೈಕೊಳ್ಳಬಹುದಾದ ಕಾರ್ಯಗಳಿಗೆ ಇವರೂ ನೆರವಾಗಲು ಬರುವವರಿದ್ದಾರೆ'' ಎಂದರು.

ಫೌಜದಾರರು ತಮ್ಮ ಸ್ವಾಭಾವಿಕವಾದ ರೀತಿಯಲ್ಲಿಯೇ ನುಡಿದರು:- ವೈದ್ಯರೇ ನಾವೀಗ ಇಬ್ಬಿಬ್ಬರಾಗಿಯೇ ಬೇಟೆಗಾಗಿ ಸಾಗಿದ್ದೇವೆ. ನಮ್ಮ ಈ ಗೆಳೆಯರು (ಹುಲಿಮೀಶೆಯುವರು) ಬೇಟೆ ಎಬ್ಬಿಸುವದರಲ್ಲಿ ಬಹು ನಿಷ್ಣಾತರು. ಆದರೆ ಈ ಕಾರ್ಯಕ್ಕೆ ನನ್ನಂಥ ಮುದಿನಾಯಿಯ ಸಹಾಯವನ್ನು ಏಕೆ ಕೋರುವರೋ ನಾ ಕಾಣೆ.

" ನನ್ನಂಥ ಮುದಿಗೂಬೆಯಿಂದ ಅಪಶಕುನವಾದೀತೆಂದು ನಾನೂ ಅಂಜುವೆನು'' ಎಂದು ಮಾರುತಿರಾಯರು ನಿರುತ್ಸಾಹ ಧ್ವನಿಯಲ್ಲಿಯೇ ನುಡಿದರು.

ಎಲ್ಲರೂ ನಕ್ಕರು.

ಹುಲಿ:— ಈ ದಿನದ ಶರ್ಯತ್ತು ಬಹು ಉತ್ಸಾಹವನ್ನೀಯುವಂತಹದಿದೆ. ಬಹುಲಾಭದಾಯಕವಿದೆ. ಮಾರುತಿರಾಯರೇ ಈ ಶರ್ಯತ್ತಿನಲ್ಲಿ ಗೆದ್ದರೆ ೪೫೦೦೦ ರೂಪಾಯಿಗಳ ಉಳಿತಾಯವಾಗುವದು. ಮತ್ತು ಪುಟ್ಟ

ಪ್ಪನವರೇ, ಇಷ್ಟು ದಿನಗಳಿಂದ ನೀವು ಕಣ್ಣಿಟ್ಟ ವ್ಯಕ್ತಿಯು ಇಂದು ನಿರಾಯಾಸನಾಗಿ ನಿಮ್ಮ ಸ್ವಾಧೀನವಾಗಬಹುದು.

" ಈ ದಿನ ರಾತ್ರಿ ನಿಮಗೆಲ್ಲರಿಗೂ ಅವನ ದರ್ಶನ ಮಾಡಿಸಿಬಿಡುವೆನು. ನಾನು ಅವನನ್ನು ಹಿಡಿಯಲು ಹೋದಾಗಲೆಲ್ಲ ತನ್ನ ಜಾಣತನದಿಂದ ನನ್ನ ಕಣ್ಣು ತಪ್ಪಿಸಿರುವನೆಂಬುದು ನಿಜ. ಈಗ ಹತ್ತು ಘಂಟೆಯಾಗಿ ಹೋಯಿತು. ನಡೆಯಿರಿನ್ನು ನೀವಿಬ್ಬರೂ ಒಂದು ಟಾಂಗಾದಲ್ಲಿ ಸಾಗಿರಿ. ನಾನು ಮತ್ತು ಮಾಮನರಾಯರು ಮತ್ತೊಂದರಲ್ಲಿ ಬರುವೆವು.''

" ಇಲ್ಲಿ ನಾವು ಇಳಿಯಬೇಕು '' ಸರಲಾಕ್ಷರೆಂದರು " ಈ ಮಾರುತಿ ರಾಯರು ಬ್ಯಾಂಕಿನ ಡಾಯರೆಕ್ಟರರಲ್ಲಿ ಒಬ್ಬರ ಈ ದಿನದ ಕಾರ್ಯ ಕಲಾಪವು ಅವರಿಗೆ ಹೆಚ್ಚು ಸಂಬಂಧಿಸಿದೆ. ಆದುದರಿಂದ ಅವರನ್ನು ಕರೆ ತಂದಿದ್ದೇನೆ. ಇನ್ನು ಜೋಶಿಯವರು; ಅವರು ನಮ್ಮ ಸಂಗಡ ಇರುವದು ಒಳಿತೆಂದು ಅವರಿಗೂ ಬರಹೇಳಿದ್ದೇನೆ. ನಡೆಯಿರಿ ಇವರು ಇಲ್ಲಿಯೇ ದಾರೀ ನೋಡುತ್ತಿದ್ದಾರೆ.

ಈ ದಿನ ಮುಂಜಾನೆ ತಿರುಗಾಡಿ ಬಂದ ಓಣಿಯಲ್ಲಿಯೇ ಈಗ ನಾವು ಬಂದು ನಿಂತೆವು. ಟಾಂಗಾದವರಿಗೆ ಬಾಡಿಗೆಯನ್ನು ಕೊಟ್ಟು ಕಳುಹಿಸಿದೆವು. ಆ ಮೇಲೆ ಮಾರುತಿರಾಯರು ಕರೆದೊಯ್ದಂತೆ ಸಾಗತೊಡಗಿದೆವು. ಮೊದಲೇ ತೆರದಿದ್ದ ಒಂದು ಚಿಕ್ಕ ಬಾಗಿಲಿನೊಳಗಿಂದ ಹಾಯ್ದು ಇಕ್ಕಟ್ಟಾದ ಸಂದಿಯಲ್ಲಿ ಸಾಗಿದೆವು. ಆ ಮೇಲೆ ದಪ್ಪನಾದ ಕಬ್ಬಿಣ ಸಲಾಕಿಗಳಿಂದ ಮಾಡಿದ ಒಂದು ಗುಪ್ತದ್ವಾರಕ್ಕೆ ಬಂದೆವು. ಅದು ಕೂಡ ತೆರೆದಿದ್ದಿತು. ಅದನ್ನೂ ದಾಟಿದೆವು. ಹಾಸುಗಲ್ಲುಗಳಿಂದ ಕಟ್ಟಿದ ದೊಡ್ಡ ದೊಡ್ಡ ಪಾವಟಿಗೆಗಳನ್ನು ಇಳಿದು ಹೊರಟೆವು. ಒಂದು ಅತಿ ದೊಡ್ಡ ಭವ್ಯವಾದ ಗೇಟಿಗೆ ಬಂದು ಮುಟ್ಟಿದೆವು. ಮಾರುತಿರಾಯರು ಅಲ್ಲಿ ನಿಂತು ಕಂದೀಲನ್ನು ಹಚ್ಚಿದರು. ಕಂದೀಲಿನ ಬೆಳಕಿನಲ್ಲಿ ನೆಲಮನೆಯ ಮೂರನೆಯ ಬಾಗಿಲನ್ನು ದಾಟಿ ಕೆಳಗೆ ಕರೆದೊಯ್ದರು. ಅಲ್ಲಿ ಬಹು ಕತ್ತಲೆಯಿತ್ತು. ಮಣ್ಣಿನ ವಾಸನೆಯು ಸುತ್ತಲೂ ಅಡಗಿತ್ತು. ನಾಲ್ಕೋ ಗೋಡೆಗಳಿಗೆ ಆನಿಸಿ ದೊಡ್ಡ ದೊಡ್ಡ ಪೆಟ್ಟಿಗೆಗಳನ್ನು ಒಂದರ ಮೇಲೊಂದು ಹೇರಿ ಇಟ್ಟಿದ್ದರು ಇಲ್ಲಿ ಎಲ್ಲರೂ ನಿಂತೆವು.

ಹುಲಿಮೀಶೆಯವರು ಕಂದೀಲನ್ನು ಎತ್ತಿ ಮೇಲೆ ನೋಡಿದರು:- "ಮೇಲಿನಿಂದ ಅಘಘಾತ ಸಂಭವಿಸಲಿಕ್ಕಿಲ್ಲವಷ್ಟೆ ?"

"ಕೆಳಗಿನಿಂದಲೂ ಇಲ್ಲ" ಮಾರುತಿರಾಯರು ತಮ್ಮ ವಾಕಿಂಗ ಸ್ಟಿಕ್ಕಿನಿಂದ ನೆಲವನ್ನು ಬಡೆದರು. "ಎಲಾ ಇದೇನು! ಕೆಳಗೆ ಪೊಳ್ಳು ಇದ್ದಂತೆ ತೋರುವದು." ಆಶ್ಚರ್ಯದಿಂದ ನುಡಿದರು.

ಹುಲಿಮೀಶೆಯವರು ಗಾಂಭೀರ್ಯದಿಂದ ನುಡಿದರು. "ದಯಮಾಡಿ ಏನೂ ಮಾತಾಡಬೇಡಿರಿ. ಇಷ್ಟೇ ನನ್ನ ಪ್ರಾರ್ಥನೆ."

ಮಾರುತಿರಾಯರ ಗಂಭೀರವಾದ ವದನವು ಬಹು ಸಪ್ಪಗಾಯಿತು. ಮೆಲ್ಲಗೆ ಹೋಗಿ ಒಂದು ಪೆಟ್ಟಿಗೆಯ ಮೇಲೆ ಕುಸಿಬಿದ್ದರು. ಹುಲಿಮೀಶೆಯವರು ಮೊಳಕಾಲೂರಿ ನೆಲದ ಮೇಲೆ ಕುಳಿತರು. ಕಿಸೆಯಲ್ಲಿಯ ರಾವುಗನ್ನಡಿಯನ್ನು ತೆರೆದು ಕಂದೀಲಿನ ಬೆಳಕಿನಲ್ಲಿ ನೆಲವನ್ನು ಪರೀಕ್ಷಿಸತೊಡಗಿದರು. ನೆಲದಲ್ಲಿ ಬಿರುಕು ಬಿಟ್ಟ ಸ್ಥಳವು ಕ್ಷಣದಲ್ಲಿಯೇ ಸಿಕ್ಕಿತು. ಹುಲಿಮೀಶೆಯವರು ಎದ್ದು ನಿಂತರು. ರಾವುಗನ್ನಡಿಯನ್ನು ಕಿಸೆಯಲ್ಲಿ ಇಟ್ಟರು.

ಹುಲಿ:— ಕನಿಷ್ಠ ಪಕ್ಷದಲ್ಲಿ ಒಂದು ತಾಸಾದರೂ ನಮಗೆ ಅವಕಾಶವಿದೆ. ಯಾಕಂದರೆ ಆ ಚಿನಿವಾಲನು ನಿದ್ರೆ ಹೋದ ಮೇಲೆ ಇವರು ಒಂದು ಮಿನಿಟನ್ನು ಸಹ ವ್ಯರ್ಥ ಹೋಗಗೊಡರು. ಆದಷ್ಟು ಬೇಗ ಕೆಲಸ ಮುಗಿಸಿ ಪಾರಾಗಬೇಕೆಂಬುದೇ ಅವರ ಆಶೆ. ವೈದ್ಯರೇ, ನಾವೀಗ ಅರ್ಬನ್ ಬ್ಯಾಂಕಿನ ನೆಲಮನೆಯಲ್ಲಿ ಇದ್ದೇವೆ, ಮಾರುತಿರಾಯರು ಈ ಬ್ಯಾಂಕಿನ ಮುಖ್ಯ ಡಾಯರೆಕ್ಟರರು. ಈ ಸೀಮೆಯ ದರೋಡೆಖೋರರ ಲಕ್ಷ್ಯವು ಈ ಬ್ಯಾಂಕಿನ ಕಡೆಗಿದೆ. ಏಕಂದರೆ ಇವರು ಬಂಗಾರವನ್ನು ಹೇರಳವಾಗಿ ಶೇಖರಿಸಿರುವರು.

ಮಾರು:— ಅಹುದು. ಪರದೇಶದವರು ನಮ್ಮಲ್ಲಿ ಬಂಗಾರದ ಖರೀದಿಗೆ ನಿಂತಾಗ ನಾವು ಶಕ್ಯವಿದ್ದಷ್ಟು ಹೆಚ್ಚು ಬಂಗಾರವನ್ನು ಕೊಂಡು ಇಟ್ಟಿದ್ದೇವೆ. ೩೦೦೦೦ 'ಗಟ್ಟಿ' ಗಳು ನಮ್ಮಲ್ಲಿವೆ. ಅವುಗಳನ್ನು ನಾವು ಈಗ ಹೊರಗೆ ತೆಗೆಯುವದೇ ಇಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಇಲ್ಲಿಯೇ ಈ ನೆಲಮನೆಯಲ್ಲಿ ಅವುಗಳನ್ನು ಇಟ್ಟಿದೆ. ನಾನು ಕುಳಿತ ಈ ಪೆಟ್ಟಿಗೆಯಲ್ಲಿಯೇ ೨೦೦೦ 'ಗಟ್ಟಿ' ಗಳಿವೆ. ಈಗ ನಮ್ಮಲ್ಲಿದ್ದಷ್ಟು ಬಂಗಾರವು ಯಾವ ಬ್ಯಾಂಕಿ

ನಲ್ಲಿಯೂ ಇಲ್ಲ. ಅವುಗಳನ್ನು ವಿನಿಯೋಗಿಸದೇ ಹೀಗೆ ಇಟ್ಟದ್ದಕ್ಕೆ ಕೆಲವು ಡಾಯರೆಕ್ಟರರು ನನ್ನಲ್ಲಿ ಅನ್ಯಥಾ ಭಾವಿಸಿದ್ದಾರೆ.

ಹುಲಿ:— ಅದು ಯೋಗ್ಯವಾದುದು. ಇರಲಿ. ಇನ್ನೊಂದು ತಾಸಿನ ಲ್ಲಿಯೇ ಘಟನೆಯಾಗತಕ್ಕದ್ದಿದೆ. ಆದುದರಿಂದ ನಮ್ಮ ವ್ಯೂಹವನ್ನು ಈಗಲೇ ರಚಿಸೋಣ. ಮಾರುತಿರಾಯರೇ ಕಂದೀಲನ್ನು ಆರಿಸಿ ಬಿಡಿರಿ.

“ ಕತ್ತಲೆಯಲ್ಲಿಯೇ ಕುಳಿತುಕೊಳ್ಳಬೇಕೇನು ? ”

ಹುಲಿ:— ಉಪಾಯವಿಲ್ಲ. ನಾನು ಈ ಪೆಟ್ಟಿಗೆಯ ಹಿಂದೆ ನಿಲ್ಲುವೆನು. ವಾಮನರಾಯರೇ ನೀವು ಆ ಪೆಟ್ಟಿಗೆಗಳ ಹಿಂದೆ ನಿಲ್ಲಿರಿ. ನಾನು ಮೊದಲು ಅದರ ಮೇಲೆ ಬ್ಯಾಟ್ರಿಯನ್ನು ಬಿಟ್ಟು ಆರಿಸಿಬಿಡುವೆನು. ಅವರು ಗುಂಡು ಹಾರಿಸಿದರೆ ವೈದ್ಯರೇ, ಅವರನ್ನು ಪಿಸ್ತೂಲಿನಿಂದ ಹೊಡೆದುಕೆಡಹಲು ಎಷ್ಟೂ ಅನುಮಾನಿಸಬೇಡಿರಿ.

ನಾನು ಪಿಸ್ತೂಲನ್ನು ಸಿದ್ಧಗೊಳಿಸಿ ಪೆಟ್ಟಿಗೆಯ ಮೇಲಿಟ್ಟು ಅದರ ಹಿಂದೆ ಅಡಗಿಕೊಂಡು ಕುಳಿತೆನು. ಹುಲಿಮೀಶೆಯವರು ಕಂದೀಲನ್ನು ಆರಿಸಿಬಿಟ್ಟರು. ನೆಲಮನೆಯನ್ನು ಕತ್ತಲೆಯು ಮುಸುಕಿಬಿಟ್ಟಿತು. ಕೆಲಕಾಲ ಕಳೆದಬಳಿಕ ಹುಲಿ ಮೀಶೆಯವರು ತೀರ ಕೆಳಗಿನ ಧ್ವನಿಯಲ್ಲಿ ನುಡಿದರು:— ವಾಪಸು ಹೋಗಲು ಅವರಿಗೆ ಒಂದೇ ದಾರಿಯಿದೆ. ದುರಗನ ಹೊಟ್ಟೆ ಓಣಿಯಲ್ಲಿಯ ಆ ಮನೆಯಿಂದ ಪಾರಾಗಿ ಹೋಗಬಹುದು. ಆದರೆ ಜೋಶಿಯವರೇ, ನಾನು ಹೇಳಿದ ಪ್ರಕಾರ ಅಲ್ಲಿ ಕೂಡ ನೀವು ವ್ಯವಸ್ಥೆಯನ್ನು ಇಟ್ಟಿರುವಿರಲ್ಲವೇ ?

ಜೋಶಿ:— ಒಬ್ಬ ಫೌಜದಾರ ಮತ್ತು ಇಬ್ಬರು ಸಿಪಾಯರನ್ನು ಆ ಚಿನಿವಾಲನ ಮನೆಯ ಮುಂದೆ ನಿಲ್ಲಿಸಿದ್ದೇನೆ.

ಹುಲಿ:— ಹಾಗಾದರೆ ‘ಬಂದೋಬಸ್ತ’ ಆಯಿತು. ಇನ್ನು ಯಾರೂ ಮಾತಾಡಬೇಡಿರಿ.

ವೇಳೆಯು ಎಷ್ಟು ಜಡವಾಗಿ ತೋರಹತ್ತಿತು ! ನಾವು ಒಂದೂಕಾಲು ತಾಸು ಈ ಪ್ರಕಾರ ಕುಳಿತಿದ್ದೆವೆಂಬುದನ್ನು ಆ ಮೇಲೆ ತಿಳಿದುಕೊಂಡೆವು. ಆದರೆ ಆಗ ? ಇಡೀ ರಾತ್ರಿಯನ್ನು ಕುಳಿತುಕೊಂಡೇ ಕಳೆದೆವೊ ಎಂದೆನಿಸಿಬಿಟ್ಟಿತು. ಆದರೆ ಒಮ್ಮಿಂದೊಮ್ಮೆ ದೀಪವೊಂದು ಮಿಂಚಿ ಮಾಯವಾಯಿತು.

ಮೊದಲು ಬೆಳಕು ಬಿದ್ದುದು ನೆಲದ ಮೇಲೆ. ಅದು ನಿಚ್ಚಳವಾಗಿರಲಿಲ್ಲ. ಕ್ರಮೇಣ ಆ ಬೆಳಕು ದೊಡ್ಡದಾಗಿ ಹಳದೀಬಣ್ಣದಲ್ಲಿ ಗೋಚರಿಸಿತು. ಆ ಮೇಲೆ ಒಂದು ತರದ ಹೊಗೆಯು ಬರಹತ್ತಿತು. ಈ ಬೆಳಕಿನಲ್ಲಿ ನಟ್ಟನಡುವೆ ಒಂದು ಕೈನೆರಳು ಕಾಣಿಸಹತ್ತಿತು. ಹೆಂಗಸಿನ ಕೈ ಎಂಬಂತೆ ಇದ್ದಿತು. ಒಂದೆರಡು ನಿಮಿಷಗಳಲ್ಲಿ ಬಡಕಾದ ಬೆರಳುಳ್ಳ ಆ ಕೈಯು ನೆಲದಿಂದ ಹೊರಗೆ ಬಂದಿತು. ಮತ್ತು ಬಹು ಬೇಗ ಒಳಗೆ ತೆಗೆದುಕೊಳ್ಳಲ್ಪಟ್ಟಿತು. ಬೆಳಕು ಅಳಿದುಹೋಯಿತು. ನೆಲದ ಬಿರುಕಿನೊಳಗಿಂದ ಮಾತ್ರ ತುಸು ಅದರ ಸುಳಿಯು ಕಾಣುತ್ತಿತ್ತು.

ನೆಲಕ್ಕೆ ಹಾಸಿದ ಹಾಸುಗಲ್ಲುಗಳಲ್ಲಿ ಒಂದು ಒಳಗಿನಿಂದ ಎಬ್ಬಲ್ಪಟ್ಟು ಅತ್ತ ಸರಿಸಲ್ಪಟ್ಟಿತು. ಬೆಳಕಿಂಡಿಯಂತೆ ಚೌಕಾಗಿ ಒಂದು ಕಿಂಡಿಯು ಅಲ್ಲಿ ನಿರ್ಮಾಣವಾಯಿತು. ಅದರಿಂದ ಕಂದೀಲಿನ ಬೆಳಕು ಹೊರಬೀಳುತ್ತಿತ್ತು ಅದರ ಸಂಗಡ ಈಗ ಮಕ್ಕಷ್ಟಮಾಡಿಸಿಕೊಂಡಂತಿದ್ದ ಒಂದು ಮುಖವು ಗೋಚರಿಸಿತು. ಆ ವ್ಯಕ್ತಿಯು ಸಾವಕಾಶವಾಗಿ ಮೇಲೆ ಹತ್ತಿಬಂದನು. ಕಿಂಡಿಯೊಳಗೆ ಬಗ್ಗಿ ತನ್ನ ಗೆಳೆಯನನ್ನು ಕೂಗಿದನು. ಅವನು ಸಹ ಇವನಂತೆ ಕುಳ್ಳನಿದ್ದನು. ಟೊಂಕವು ತುಸು ಬಾಗಿತ್ತು. ಅವನ ಮುಖವು ಬಹು ನಿಸ್ತೇಜವಾಗಿತ್ತು. ತಲೆಯು ಮಾತ್ರ ಅಚ್ಚಕೆಂಪುಕೂದಲಿನಿಂದ ಮುಸುಕಿತ್ತು.

ವ್ಯಕ್ತಿಯು ಕೆಳಗಿನ ಧ್ವನಿಯಲ್ಲಿ ನುಡಿದನು :— ಎಲ್ಲವೂ ಸರಿಯಾಗಿ ಸಾಗಿದಂತಿದೆ. ಉಳಿ ಮತ್ತು ಸುತ್ತಿಗೆಯನ್ನು ತಂದಿರುವಿರಾ ? ಚೀಲಗಳಿವೆಯೋ ? ಅಚ್ಯುತರಾಯರೇ, ಜಿಗಿದು ಮೇಲೆ ಬನ್ನಿರಿ ಪೆಟ್ಟಿಗೆಗಳನ್ನು ಒಡೆಯೋಣ.

ಸರಲಾಕ್ಷ ಹುಲಿಮೀಶೆಯವರು ಪೆಟ್ಟಿಗೆಯ ಹಿಂದಿನಿಂದ ಹೊರಗೆ ಜಿಗಿದು ಬಂದು ಆ ವ್ಯಕ್ತಿಯ ಚಂಡಿಕೆಯನ್ನೇ ಹಿಡಿದರು. ಇನ್ನೊಬ್ಬನು ಆ ಕಿಂಡಿಯೊಳಗಿಂದ ಓಡಿಹೋಗಿಬಿಟ್ಟನು. ಜೋಶಿ ಪುಟಪ್ಪನವರು ಅವನನ್ನು ಹಿಡಿಯಲು ಪ್ರಯತ್ನಪಟರು. ಅವನ ಶರ್ಟು ಕೈಗೆ ಸಿಕ್ಕಿತು. ಅದು ಹರಿದು ಹೋಯಿತು. ಅವನು ಓಡಿದನು. ವ್ಯಕ್ತಿಯು ತನ್ನ ಕೈಯಲ್ಲಿಯ ಪಿಸ್ತೂಲನ್ನು ಎತ್ತಿದನು. ಆದರೆ ವೇಳೆಗೆ ಸರಿಯಾಗಿ ಅವನ ಮುಂಗೈಗೆ ಹುಲಿಮೀಶೆಯವರು

ಕೊಟ್ಟ ಹೊಡೆತವು ಒಳ್ಳೇ ಜೋರಾಗಿ ಬಿದ್ದುದರಿಂದ ಪಿಸ್ತೂಲು ಕೆಳಗೆ ಬಿದ್ದಿತು.

ಹುಲಿಮೀಶೆಯವರು ನಿಷ್ಟುರ ಧ್ವನಿಯಲ್ಲಿ ನುಡಿದರು. :— ಉಪ್ಪಾರ ಜ್ಯಾನ್ಯಾ ಆಯಿತು. ಇನ್ನು ಪಾರಾಗಲಾರಿ.

ಉಪ್ಪಾರ :— ನಿಜ, ಆದರೆ ನನ್ನ ಗೆಳೆಯನು ಪಾರಾದನು.

ಹುಲಿ: — ಅಲ್ಲಿ ಆ ಬಾಗಿಲಲ್ಲಿ ಅವನಿಗಾಗಿ ಮೂವರು ಕಾದಿದ್ದಾರೆ.

ಉಪ್ಪಾರಃ— ಭಲೆ, ಭಲೆ, ವ್ಯವಸ್ಥೆಯನ್ನು ಚನ್ನಾಗಿ ಇಟ್ಟದ್ದೀರಿ.

ಹುಲಿ: — ನಿನ್ನ ಜಾಣತನಕ್ಕೆ ಮೆಚ್ಚಿದೆನು. ಕೆಂಪುಕೂದಲ ಸಮಿತಿಯ ವಿಚಾರವು ತೀರ ಹೊಸದು. ಕಾರ್ಯ ಸಾಧನೆಗೆ ಪೂರ್ಣ ಪರಿಣಾಮಕಾರಿ ಯಾದುದು.

ಕೈಗೆ ಬೇಡಿಗಳನ್ನು ತೊಡಿಸುವಾಗ ನಮ್ಮ ಸೆರೆಯಾಳು ನುಡಿದನು:— ಈ ನಿಮ್ಮ ಹೇಸಿ ಕೈಗಳಿಂದ ನನ್ನನ್ನು ಮುಟ್ಟಬೇಡಿರೆಂದು ಬೇಡಿಕೊಳ್ಳುವೆನು. ಬಹು ದೊಡ್ಡ ಮನೆತನದಲ್ಲಿ ನಾನು ಹುಟ್ಟಿರುವೆನೆಂಬುದು ಬಹುಶಃ ನಿಮಗೆ ಗೊತ್ತಿರಲಿಕ್ಕಿಲ್ಲ. ಆದರೇನಾಯಿತು. ನಾನು ಹೇಳುವೆನೆಂದ ಮೇಲೆ ಈಗ ಲಾದರೂ ತಿಳಿದುಕೊಳ್ಳಿರಿ. ನನ್ನನ್ನು ಸಂಭೋದಿಸುವಾಗ "ರಾಯರೇ ಹೀಗೆ ಬನ್ನಿರಿ. ದಯವಿಟ್ಟು ಇಲ್ಲಿ ನಿಲ್ಲಿರಿ" ಹೀಗೆ ಮರ್ಯಾದೆ ಕೊಟ್ಟು ಮಾತಾಡಬೇಕು. ಇದೂ ಒಂದು ನನ್ನ ವಿನಂತಿ.

ಜೋಶಿ ಪುಟ್ಟಪ್ಪನವರು ತಿರಸ್ಕಾರದ ನಗೆ ನಕ್ಕರು. ಉಪ್ಪಾರ ಜಾನಪ್ಪ ನನ್ನು ನಟ್ಟ ನೋಟದಿಂದ ನೋಡಿದರು:—ಆಗಲಿ ಜಾನಪ್ಪನವರೇ ಮಹಾನು ಭಾವರಾದ ತಮ್ಮನ್ನು ಪೋಲೀಸ ಸ್ಟೇಶನ್ನಿಗೆ ಕರೆದೊಯ್ಯಲು ಗಾಡಿಯೊಂದು ಹೊರಗೆ ನಿಂತಿದೆ. ಆದುದರಿಂದ ಶ್ರೀಮಾನರು ಅಟ್ಟಹತ್ತಿ ಅತ್ತ ಸಾಗುವ ಕೃಪೆಮಾಡಬೇಕು.

ಜಾನಪ್ಪನು ಗಾಂಭೀರ್ಯದಿಂದ ನುಡಿದರು:— ಒಳ್ಳೇದು ಅಗತ್ಯವಾಗಿ ಸಾಗುವೆವು. ಹುಲಿಮೀಶೆಯವರ ನೇತೃತ್ವದಲ್ಲಿ ಜಾನಪ್ಪನು ನಡೆದನು.

× × × ×

ಬಣಗಾರ ಓಣಿಯಲ್ಲಿರುವ ಹುಲಿಮೀಶಿಯವರ ಮನೆಗೆ ಮರುದಿನ ಮುಂಜಾನೆ ಹೋದೆನು. ಚಹ ಕುಡಿಯಲು ಕುಳಿತಾಗ ಅವರು ಹೇಳತೊಡಗಿದರು:—ವಾಮನರಾಯರೇ ಇಲ್ಲಿ ನೋಡಿರಿ, ಕೆಂಪುಕೂದಲು ಸಮಿತಿಗೆ ಒಬ್ಬ ಕಾರಕೂನನು ಬೇಕೆಂದೂ ಮತ್ತು ಕುಮಾರವ್ಯಾಸ, ಜೈಮಿನೀಭಾರತವನ್ನು ಕಾಪೀ ಮಾಡುವ ಕೆಲಸವನ್ನು ಆ ಚಿನಿವಾಲನಿಗೆ ಕೊಡುವದೂ ನೋಡಿದರೆ ವಿನಾಯಕರಾಯನನ್ನು ಪ್ರತಿದಿನವೂ ಕೆಲವು ತಾಸುಗಳ ಮಟ್ಟಿಗಾದರೂ ಮನೆಯಿಂದ ಅವನನ್ನು ಹೊರಗಿಡುವದಕ್ಕಾಗಿ ಹೂಡಿದ ಯುಕ್ತಿಯಿದೆಂಬುದು ಸ್ಪಷ್ಟವಿದೆ.

ಒಬ್ಬ ಠಕ್ಕನು ಜಾಹೀರಾತನ್ನು ಕೊಟ್ಟು ಒಂದು ಕಚೇರಿಯನ್ನು ನಿರ್ಮಿಸಿದನು; ಇನ್ನೊಬ್ಬ ಠಕ್ಕನು ಅವನನ್ನು ಹಿಡಿದು ತಂದು ಅಲ್ಲಿ ಕೂಡ್ರಿಸಿದನು. ಹೀಗೆ ಕೆಲವು ತಾಸುಗಳವರೆಗೆ ಅವನನ್ನು ಮನೆಯಿಂದ ಹೊರಗೆ ಇಟ್ಟರು. "ವಸಂತನು ಅರ್ಧ ಪಗಾರಕ್ಕೆ ಒಪ್ಪಿದನು'' ಎಂದು ವಿನಾಯಕರಾಯನು ಹೇಳಿದ ಕೂಡಲೇ ನನಗೆ ಹೊಳೆಯಿತು, ವಸಂತನಿಗೆ ಏನೋ **ಗೂಢ**ವಾದ ಉದ್ದೇಶವಿರಲೇಬೇಕು ಎಂದು, ಮುಂದಿನ ವಿಷಯ ಕೇಳಲಾಗಿ ಕಾರಕೂನನಿಗೆ ಫೋಟೋ ತೆಗೆಯುವ 'ಹುಚ್ಚು' ಬಹಳವಿದೆ ಮತ್ತು ನೆಲಮನೆಯಲ್ಲಿ ಕುಳಿತು ಫೋಟೋಗಳ ಕಾಜುಗಳನ್ನು ತೊಳೆಯುವನೆಂಬುದು ತಿಳಿಯಿತು. "ನೆಲಮನೆ—?'' ಇದರಲ್ಲಿಯೇ ಏನೋ ಗೂಢವಿದೆಯೆಂದು ಅಂದುಕೊಂಡೆನು. ಈ ಬಗ್ಗೆ ಅನೇಕ ಶೋಧಗಳನ್ನು ಮಾಡಿದೆನು. ಈ ಸೀಮೆಯ ಅತಿ ಕ್ರೂರ ಅಪರಾಧಿಗಳಲ್ಲಿ ಇವನೊಬ್ಬನಿರಬಹುದೆಂದು ಊಹಿಸಿದೆನು. ಇವನಲ್ಲಿ ಎಷ್ಟು ತಾಳ್ಮೆಯಿದೆ! ದಿನಾಲು ನೆಲಮನೆಯಲ್ಲಿ ಕುಳಿತು ತಿಂಗಳಾನುತಿಂಗಳು ಇವನು ಮಾಡುತ್ತಿರುವ ಕೆಲಸವಾದರೂ ಏನು? ಯಾವುದೋ ಒಂದು ಇಮಾರತಿಗೆ ಹೋಗಲು ನೆಲಮನೆಯ ಹಾದಿಯನ್ನು ಕೊರೆಯುತ್ತಿರಬಹುದೆಂದು ಅನುಮಾನಿಸಿದೆನು.

ದುರಗನ ಹೊಟ್ಟೆ ಓಣಿಯಲ್ಲಿ ನಾವು ತಿರುಗಾಡುವಾಗ 'ವಾಕಿಂಗ ಸ್ಟಿಕ್ಕಿನಿಂದ ನೆಲವನ್ನೇಕೆ ಬಡೆದಿರಿ' ಎಂದು ನೀವು ಕೇಳಲಿಲ್ಲವೇ? ಈ ನೆಲದಾರಿಯು ತೆರಬಾಗಿಲಿನಿಂದ ಸಾಗಿದೆಯೋ ಹಿಂದಿನಿಂದ ಹೊರಟಿವೆಯೋ ನೋಡಿದೆನು. ತೆರಬಾಗಿಲಿನಿಂದಂತೂ ಹೊರಟಿರಲಿಲ್ಲ. ಆ ಮೇಲೆ ಬಾಗಿ

ಲನ್ನು ತಟ್ಟಿದೆನು. ಆ ಯುವಕನು ಬಾಗಿಲನ್ನು ತೆರೆದನು. ಆಗಲೇ ತುಸು ಜಗಳವಾಗುವ ಸಂಭವವಿತ್ತು. ಆದರೆ ನಾವಿಬ್ಬರೂ ಪರಸ್ಪರರ ಮುಖವನ್ನೇ ನೋಡಲಿಲ್ಲ. ನಾನಂತೂ ಅವನ ಮುಖವನ್ನು ಒಂದು ಕ್ಷಣಕಾಲ ನೋಡಿದೆನೋ ಇಲ್ಲವೋ, ಅವನ ಮೊಣಕಾಲುಗಳನ್ನು ಮಾತ್ರ ದಿಟ್ಟಿಸಿ ನೋಡಿದೆನು. ನೀವು ಸಹ ನೋಡಿರಬಹುದು—ಅವು ಮಣ್ಣಿನಿಂದ ಹೊಲಸಾಗಿದ್ದವು. ಮತ್ತು 'ದಡ್ಡಿ'ಗಟ್ಟಿದ್ದವು. ನೆಲದಾರಿಯನ್ನು ಕೊರೆದದ್ದೇ ನಿಜವೆಂದು ನಂಬಿದೆನು. ಆ ಮನೆಯ ಸುತ್ತಲೂ ಸಂದಿಗೊಂದಿಗಳಲ್ಲಿ ಓಡಾಡುವಾಗ ಅಲ್ಲಿಯೇ ಸಮೀಪದಲ್ಲಿ ಅರ್ಬನ್ ಬ್ಯಾಂಕು ಇರುವದನ್ನು ಕಂಡೆನು. "ಆಹಾ ಎಲ್ಲವೂ ತಿಳಿಯಿತು." ಎಂದು ಆಗಲೇ ಅಂದುಕೊಂಡು ಬಿಟ್ಟೆನು.

ನಾನು:— ಆದರೆ ಅವರು ಬ್ಯಾಂಕನ್ನು ನಿನ್ನೆಯೇ ಒಡೆಯುವರೆಂಬುದು ನಿಮಗೆ ಹೇಗೆ ತಿಳಿಯಿತು?

ಶನಿವಾರವೇ ಅವರಿಗೆ ಅನುಕೂಲವಾದ ದಿನವು ಮರುದಿನ ಆದಿತ್ಯವಾರ, ಬ್ಯಾಂಕಿಗೆ ಬಿಡುವಿರುವದು. ಸೋಮವಾರ ದಿನ ಬ್ಯಾಂಕಿನವರಿಗೆ ಈ ದರೋಡೆಯ ಸುದ್ದಿ ಗೊತ್ತಾಗುವದು. ಈ ಮಧ್ಯದಲ್ಲಿ ಎರಡು ದಿನಗಳ ವೇಳೆಯು ದರೋಡೆಖೋರರಿಗೆ ಓಡಿಹೋಗಲು ಸಿಗುವದು, ಎಂಬ ಯೋಚನೆಯ ಮೇರೆಗೆ ನಿನ್ನೆಯೇ ಅವರು ಬರಬಹುದೆಂದು ಯೋಚಿಸಿದೆನು.

ನಾನು:— ನಿಮ್ಮ ವಿಚಾರಗಳು ಎಷ್ಟು ಸೊಗಸಾಗಿವೆ. ನಿಮ್ಮ ಕಲ್ಪನಾಸರಣಿಯು ಹೆಜ್ಜೆಹೆಜ್ಜೆಗೂ ನಿಜವಾಗಿ ಸಂಭವಿಸುವವು.

ಹುಲಿಮೀಶೆಯವರು ಆಕಳಿಸಿದರು:— ನನಗೂ ಕೆಲಸವಿರಲಿಲ್ಲ. ಈ ಕಾರ್ಯ ಕೈಕೊಂಡದ್ದರಿಂದ ತುಸು ಉಲ್ಹಾಸಿಯಾದೆನು. ಹುಟ್ಟಿದ್ದಕ್ಕೆ ಏನಾದರೊಂದು ಕೆಲಸ ಮಾಡಬೇಕು. ಸುಮ್ಮನೇ ಬೆಳೆದರೇನು ಫಲ! ನನ್ನ ಅನುಭವಕ್ಕೆ ಬಂದ ಇಂಥ ಸಮಸ್ಯೆಗಳು ನನ್ನ ಜೀವನದ ವೈಶಿಷ್ಟ್ಯಕ್ಕೆ ಬಹು ಸಹಾಯಕಾರಿಯಾಗಿವೆ.

ನಾನು:— ಪತ್ತೇದಾರೀ ಕಾರ್ಯಕರ್ತರಿಗೆ ನೀವು ಆದರ್ಶರಾಗಿದ್ದೀರಿ.

ಹುಲಿಮೀಶೆಯವರು ನಕ್ಕರು:— ನಿಜ. ನನ್ನಿಂದ ಅವರಿಗೆ ತುಸು ಸಹಾಯವಾಗಬಹುದು, ಇಷ್ಟೇ. ಅದರಲ್ಲಿ ಹೆಚ್ಚಿನದೇನೂ ಇಲ್ಲ. ಯಾವುದೇ ವ್ಯವಸಾಯ ವಿರಲಿ, ವ್ಯಕ್ತಿಯು ಶ್ರಮದಿಂದ ದುಡಿದರೆ ಅದರಲ್ಲಿ ಅವನು ನಿಷ್ಣಾತನಾಗುವದರಲ್ಲಿ ಸಂದೇಹವಿಲ್ಲ.

೪ ನೇ ವರುಷದ ೧ ನೇ ಗ್ರಂಥ

ಬೀಳದ ತೆರೆ

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಕುಂ. ಸೌ. ಸುಶೀಲಾ ಜೋಶಿ

ಎಪ್ರಿಲ ೧೯೫೦ರಲ್ಲಿ ಪ್ರಕಟವಾಗುವದು

ಮುದ್ರಕರು :
ಆದರ್ಶ ಮುದ್ರಣ
ಹುಬ್ಬಳ್ಳಿ

ಪ್ರಕಾಶಕರು :
ಶಂ. ಬಾ. ಮನಗೂಳಿ
ದಾಜಿಬಾನ ಪೇಟೆ
ಹುಬ್ಬಳ್ಳಿ